ಪ್ರಚಾರ ಪುಸ್ತಕ ಮಾಲೆ

244

ಕವಿರಾಜಮಾರ್ಗ

ಸೀತಾರಾಮ ಜಾಗೀರ್‌ದಾರ್

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರ ಪುಸ್ತಕಮಾಲೆ–೨೪೪

ಕವಿರಾಜಮಾರ್ಗ

ಸೀತಾರಾಮ ಜಾಗೀರ್‌ದಾರ್

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

1984

ಮೊದಲನೆಯ ಮುದ್ರಣ : ೧೯೬೮
೫,೦೦೦ ಪ್ರತಿಗಳು

ಬೆಲೆ : ೨೫ ಪೈಸೆ

ಪ್ರಕಾಶಕರು
ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೬

ಮುದ್ರಕರು
ನಿರ್ದೇಶಕರು, ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು-೬

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ "ಸೆನೆಟ್" ಸಭೆಯ ಪ್ರಾರಂಭೋತ್ಸವ ಸಮಯದಲ್ಲಿಯೂ, ಮೊದಲನೆಯ 'ಕಾನ್ವೊಕೇಷನ್' ಸಮಾರಂಭದ ಕಾಲದಲ್ಲಿಯೂ ವಿಶ್ವವಿದ್ಯಾನಿಲಯದ ವಿದ್ಯೆ ಪಟ್ಟಣಗಳಲ್ಲಿ ಮಾತ್ರ ಕೇಂದ್ರಿಕೃತವಾಗದೆ ನಾಡಿನ ಮೂಲೆಮೂಲೆಗೂ ಪ್ರಸರಿಸಿ, ಉಚ್ಚಶಿಕ್ಷಣವನ್ನು ಪಡೆಯಲು ಅವಕಾಶಹೊಂದದ ಸಾಮಾನ್ಯಜನರ ಹೃದಯವನ್ನು ಬೆಳಗಿ ಸಮಷ್ಟಿಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶಯವನ್ನು ವ್ಯಕ್ತಪಡಿಸಿದ್ದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಾಡಿನ ಮೂಲೆಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿಯಪ್ರಸಾರಕಾರ್ಯವನ್ನು ಬಹಳ ಸಮರ್ಪಕವಾದ ರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠ ಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನ ವಿದ್ವಾಂಸರು ಜನರು ಅಪೇಕ್ಷಿಸುವ ವಿಷಯಗಳನ್ನು ಕುರಿತು ಸರಳವೂ ಸುಲಭಗ್ರಾಹ್ಯವೂ ಆದ ಕನ್ನಡ ಭಾಷೆಯ ಮೂಲಕ ತಿಳುವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ, ಅಧ್ಯಾಪಕವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನ ನೆಲಸಿ, ಸಾಮಾನ್ಯ ಜನರಂತೆಯೇ ಇದ್ದುಕೊಂಡು,

ಗಳಿಸಿರುವ ಜ್ಞಾನವನ್ನು ಜನಸಾಮಾನ್ಯರ ಹೃದಯದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾರೆ ಮತ್ತು ಇತರರಿಗೂ ಆನಂದವನುಂಟುಮಾಡುತ್ತಾರೆ. ಈ ಉಪನ್ಯಾಸಗಳು ವಿಶ್ವ ವಿದ್ಯಾನಿಲಯದ ಮೆಟ್ಟಲನ್ನು ಹತ್ತಲು ಅವಕಾಶವಿಲ್ಲದವರಿಗೆ ವಿಶ್ವವಿದ್ಯಾನಿಲಯ ವಿದ್ಯೆಯ ಸೌಲಭ್ಯವನ್ನು ನೀಡಲು ನೆರವಾಗುತ್ತವೆ; ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ ನಾಡಿನ ಬೇರೆಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕವಾಗುತ್ತವೆ; ನಮ್ಮ ಸಮಾಜದಲ್ಲಿನ ಭೇದಭಾವಗಳನ್ನು ಹೋಗಲಾಡಿಸಿ ಸಮಾನತೆಯನ್ನು ಸ್ಥಾಪಿಸಲು ಸಹಾಯಕವಾಗುತ್ತವೆ; ವಿಶ್ವವಿದ್ಯಾನಿಲಯಕ್ಕೂ ಸಾಮಾನ್ಯ ಜನತೆಗೂ ಮಧ್ಯೆ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ; ಜನರಲ್ಲಿ ಜ್ಞಾನೋದಯವನುಂಟುಮಾಡಿ, ಅವರ ದುಃಖಕ್ಕೆ ಮೂಲಕಾರಣವಾದ ಅಸಮಾನತೆಯನ್ನು ಹೋಗಲಾಡಿಸಿ ವಿಶಾಲಭಾವನೆಯು ಮೂಡುವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಗೆಗಳನ್ನು ಕೊಂಡು ಓದಿ ತಿಳಿವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಹೆಚ್ಚು ಜನಪ್ರಿಯವಾಗಿವೆ. ಪುಸ್ತಕಗಳು ಅಚ್ಚಿನ ಮನೆಯಿಂದ ಹೊರ ಬಿದ್ದ ಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆಯಲ್ಲಿ ಈಗಾಗಲೆ ಭೌತವಿಜ್ಞಾನ, ರಸಾಯನವಿಜ್ಞಾನ, ಪ್ರಾಣಿವಿಜ್ಞಾನ, ವೈದ್ಯವಿಜ್ಞಾನ, ಗಣಿತವಿಜ್ಞಾನ, ಸಮಾಜ ವಿಜ್ಞಾನ, ಅರ್ಥಶಾಸ್ತ್ರ, ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ

ಮುಂತಾದ ವಿಷಯಗಳನ್ನು ಕುರಿತ ಇನ್ನೂರ ನಾಲ್ವತ್ತಮೂರು ಪುಸ್ತಕಗಳು ಪ್ರಕಟವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗಿದೆ.

ಈ ಮಾಲೆಯಲ್ಲಿ ಈಗ ಹೊರಬೀಳುತ್ತಿರುವ ಶ್ರೀ ಸೀತಾರಾಮ ಜಾಗೀರ್‌ದಾರ್ ಅವರ 'ಕವಿರಾಜಮಾರ್ಗ' ಹೆಚ್ಚು ಜನಪ್ರಿಯವಾಗಲೆಂದು ನಾನು ಆಶಿಸುತ್ತೇನೆ.

ಮೈಸೂರು

ಕೆ. ಎಸ್. ಹೆಗ್ಡೆ
ಕುಲಪತಿ

ಅರಿಕೆ

ಕನ್ನಡ ಸಾಹಿತ್ಯದ ದೊರೆತ ಕೃತಿಗಳಲ್ಲಿ ಮೊದಲನೆಯದಾದ "ಕವಿರಾಜ ಮಾರ್ಗಂ" ಕುರಿತು ಹಾಸನ ಜಿಲ್ಲೆಯ ಗಂಡಸಿಗ್ರಾಮದಲ್ಲಿ ನಾನು ಮಾಡಿದ ಪ್ರಚಾರೋಪನ್ಯಾಸದ ಬರಹದ ರೂಪವೇ ಈ ಕಿರುಹೊತ್ತಿಗೆ : ಕವಿರಾಜಮಾರ್ಗ. ಈ ಪುಸ್ತಕವನ್ನು ಬರೆಯಲು ಆಸ್ಪದಮಾಡಿಕೊಟ್ಟವರು, ಪ್ರೇರಣೆಯನ್ನಿತ್ತವರು, ಪ್ರಸಾರಾಂಗದ ನಿರ್ದೇಶಕರಾಗಿರುವ ಮಾನ್ಯ ಶ್ರೀ ಕೆ. ಟಿ. ವೀರಪ್ಪನವರು. ನಾನು ಪುಸ್ತಕಗಳನ್ನು ಬರೆಯಬೇಕೆಂದು ಸವಿನುಡಿಯ ಅಮೃತಚೇತನವಿತ್ತು ಆಗಾಗ ಹಾರೈಸುವವರು ಡಾ॥ ಹಾ. ಮಾ. ನಾಯಕರು ಹಿರಿಯರೂ ಪೂಜ್ಯರೂ ಆದ ಪ್ರೊ॥ ದೇ. ಜ. ಗೌ ಮತ್ತು ಡಾ॥ ಹಾ. ಮಾ. ನಾಯಕ ಅವರು ನನ್ನನ್ನು ಕನ್ನಡಕ್ಕೆ ದುಡಿಯಲು ತಂದು ನಿಲ್ಲಿಸಿದ ಮಹನೀಯರು. ಈ ಪುಸ್ತಕವನ್ನು ಹೊರತರುವಲ್ಲಿ ಸಹಾಯ ಸಲಹೆಗಳಿಂದ ನೆರವಾದವರು ಡಾ॥ ಎಂ. ಎಂ. ಕಲ್ಬುರ್ಗಿ, ಶ್ರೀ ಆರ್. ಎಲ್. ಅನಂತರಾಮಯ್ಯ ಹಾಗೂ ಶ್ರೀ ಡಿ. ಕೆ. ಈರೆಗೌಡರು ಮತ್ತು ಸಂಪಾದಕ ಮಂಡಲಿಯ ಸದಸ್ಯರು. ಪುಸ್ತಕವನ್ನು ಅಂದವಾಗಿ ಮುದ್ರಿಸಿದವರು ವೈ. ವಿ. ವಿ. ಮುದ್ರಣಾಲಯದ ಕಾರ್ಯನಿರತ ನಿರ್ದೇಶಕರು ಶ್ರೀ ಶ್ರೀನಿವಾಸ ಮೂರ್ತಿ ಹಾಗೂ ಸಿಬ್ಬಂದಿ ವರ್ಗದವರು. ಇವರೆಲ್ಲರಿಗೂ ನನ್ನ ಅನಂತ ವಂದನೆಗಳು, ಧನ್ಯವಾದಗಳು.

ಸೀತಾರಾಮ ಜಾಗೀರ್‌ದಾರ್

ಸಮರ್ಪಣೆ

ಕನ್ನಡನುಡಿಯಂ ಮನದೊಳ್ ।
ಮನ್ನಿಸಿ ಆದಮಱಿಯಲನುಗೆಯ್ದರ್ ಶ್ರೀ 'ಶ್ರೀ' ।
ಮನ್ನೆಯ ಗುರು ತೀನಂಶ್ರೀ ।
ಸನ್ನುತ ಚರಣಂಗಳ್ಗೆ ಕೃತಿಯಂ ಅರ್ಪಿಸುವೆಂ ॥

ವಿಷಯಾನುಕ್ರಮಣಿಕೆ

೧. ಪೀಠಿಕೆ

ಕನ್ನಡಸಾಹಿತ್ಯದ, ನುಡಿಯ, ಚಾರಿತ್ರಿಕ ಅಧ್ಯಯನದಲ್ಲಿ ನಮಗೆ ಈಗ ಉಪಲಬ್ಧ ಮೊದಲ ಕೃತಿಯೆಂದರೆ 'ಕವಿರಾಜಮಾರ್ಗಂ.' ಕನ್ನಡ ಸಾಹಿತ್ಯದ ರಚನೆಯು ಎಂದು ಆರಂಭವಾಯಿತೆಂದು ಹೇಳಲು ಖಚಿತತೆ ಇರದಿದ್ದರೂ ಸುಮಾರು ಸಾವಿರದ ಐನೂರು ವರ್ಷಗಳ ಹಿಂದೆಯೆಂದು ಊಹಿಸಬಹುದು. ಕವಿರಾಜಮಾರ್ಗವೇ ಒಂದು ಲಕ್ಷಣ ಗ್ರಂಥವಾಗಿದ್ದು ತತ್ಪೂರ್ವದಲ್ಲಿ ಕನ್ನಡಸಾಹಿತ್ಯ ಸಾಕಷ್ಟು ಬೆಳೆದಿತ್ತೆಂದು ಅದರಿಂದ ತಿಳಿದುಬರುತ್ತದೆ. ದೊರೆತ ಮೊದಲಗ್ರಂಥವೆಂಬುದಲ್ಲದೆ ಅದು ಪೂರ್ವಸೂರಿಗಳ ಗ್ರಂಥಗಳಿಂದ ಪ್ರಯೋಗಗಳನ್ನೂ ಅವರ ತತ್ತ್ವಗಳನ್ನೂ ಆಲೋಡನೆ ಮಾಡಿ ರಚಿಸಿದ ಗ್ರಂಥವಾದುದರಿಂದ ಅದಕ್ಕೊಂದು ವಿಶಿಷ್ಟವಾದ ಸ್ಥಾನವಿದೆ. ಅನೇಕ ವಿಷಯಗಳ ವಿವೇಚನೆಯಲ್ಲಿ ಭಿನ್ನಾಭಿಪ್ರಾಯಗಳಿವೆ, ನಿಜ.

ಕರ್ನಾಟಕ, ಕನ್ನಡ—ಇವು ದೇಶ ಹಾಗೂ ಭಾಷೆ ಎರಡನ್ನೂ ಸೂಚಿಸುವ ಶಬ್ದಗಳು. ಮಹಾಭಾರತ, ರಾಮಾಯಣ, ಶಾಸನಾದಿಗಳಲ್ಲಿ 'ಕರ್ನಾಟಕ' ಶಬ್ದದ ಪ್ರಯೋಗ ದೊರೆಯುತ್ತಿದ್ದು ಅದು ಕಾವೇರಿಯಿಂದ ಗೋದಾವರೀ ತೀರದವರೆಗೆ ವ್ಯಾಪಿಸಿದ ಒಂದು ಭೂಭಾಗವೆನಿಸಿಕೊಂಡಿದ್ದಿತು ೮–೯ನೇ ಶತಮಾನದಲ್ಲಿ. ಇದರ ಉಲ್ಲೇಖ ಕವಿರಾಜಮಾರ್ಗದಲ್ಲಿ ಮೊದಲಿಗೆ ಹೀಗೆ ಬಂದಿದೆ:

ಕಾವೇರಿಯಿಂದಮಾ ಗೋ
ದಾವರಿವರಮಿರ್ದ್ದ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಳಯವಿಲೀನ ವಿಶದ ವಿಷಯ ವಿಶೇಷಂ ॥ I. ಪ-೩೬

ಕನ್ನಡ ಭಾಷೆಯನ್ನು ಆಡುವ ಜನಪದ ಕಾವೇರಿಯಿಂದ ಗೋದಾವರಿಯ ವರೆಗೆ ಹಬ್ಬಿದ್ದು ವಿಶೇಷತೆಯಿಂದ ಕೂಡಿತ್ತು. ಸಹಜವೇ ಏಕೆಂದರೆ ಆಗ ಭಾರತದಲ್ಲಿ ಆಡಳಿತೆಯನ್ನು ನಡೆಸುತ್ತಿರುವ ವಿಶಿಷ್ಟ ಸೇನಾಬಲದ ರಾಷ್ಟ್ರವೇ ಅದಾಗಿತ್ತು. ಇಮ್ಮಡಿ ಪುಲಿಕೇಶಿಯು ಹರ್ಷವರ್ಧನನನ್ನು ಸೋಲಿಸಿದ ಸಮಯದಿಂದ ಕರ್ನಾಟಕದ ರಾಜಕೀಯ ಇತಿಹಾಸ ಹೊಸತಿರುವನ್ನು ಪಡೆದದ್ದು ಮುಂದೆ ಸುಮಾರು ೧೨ನೆಯ ಶತಮಾನದವರೆಗೂ ಏರುತ್ತ ಏರುತ್ತಲೇ ಅದರ ಕೀರ್ತಿ ಲಂಕಾದ್ವೀಪದಿಂದ ಗಂಗಾತೀರದವರೆಗೂ ವ್ಯಾಪಿಸಿ ನಿಂತಿತ್ತು. ಇಂತಹ ಒಂದು ಉಜ್ವಲ ಇತಿಹಾಸ ಕಾಲದಲ್ಲಿ 'ಕವಿರಾಜಮಾರ್ಗ' ಗ್ರಂಥ ಹುಟ್ಟಿತು.

ಕವಿರಾಜಮಾರ್ಗಕಾರ ಭಾಮಹನ 'ಕಾವ್ಯಾಲಂಕಾರ' ಮತ್ತು ದಂಡಿಯ 'ಕಾವ್ಯಾದರ್ಶ' ಎಂಬ ಎರಡು ಕೃತಿಗಳನ್ನು ಚೆನ್ನಾಗಿ ಅಧ್ಯಯನಮಾಡಿ ಅಲ್ಲಿನ ಅನೇಕ ಸಂಗತಿಗಳನ್ನು ಸುಮಾರು ಯಥಾವತ್ತಾಗಿ ಕನ್ನಡಕ್ಕೆ ತಂದಿದ್ದಾನೆ. ಸಂಸ್ಕೃತ 'ಅಲಂಕಾರ' ಶಾಸ್ತ್ರವನ್ನು ಅರ್ಥಮಾಡಿಕೊಳ್ಳಲೂ ಸಹಾಯವಾಗುವ ಹಾಗೆ ಕವಿರಾಜಮಾರ್ಗ ಗ್ರಂಥವನ್ನು ಬರೆಯಲಾಗಿದೆ. ಅದು ಕವಿರಾಜಮಾರ್ಗಕಾರನ ಉದ್ದೇಶಗಳಲ್ಲೊಂದಾಗಿತ್ತೆಂದೂ ತೋರುತ್ತದೆ. 'ಹರ್ಷಚರಿತ' 'ಕಾದಂಬರಿ' ಗ್ರಂಥಗಳನ್ನು ಉಲ್ಲೇಖಿಸುವುದರ ಮೂಲಕ ಬಾಣಭಟ್ಟನನ್ನೂ

ಪ್ರಣುತ ಗುಣಸೂರಿ ನಾರಾ
ಯಣ ಭಾರವಿ ಕಾಳಿದಾಸ ಮಾಘಾದಿಗಳೀ
ಗಣಿದದೊಳೆ ಮಹಾಕಾವ್ಯ
ಪ್ರಣಯಮನಾಗಿಸಿದರಮಳ ಕವಿ ವೃಷಭರ್ಕಳ್ ॥ I. ೩೧

ಎಂಬ ಪದ್ಯದಲ್ಲಿ ಇತರ ಕೆಲ ಮಹಾಕವಿಗಳನ್ನೂ ಹೆಸರಿಸಿ ಈ ಎಲ್ಲರ ಕಾವ್ಯಗಳು ತನಗೆ ಸುಪರಿಚಿತವೆಂದು ಸೂಚಿಸುವುದರೊಂದಿಗೆ ಸಂಸ್ಕೃತ ಸಾಹಿತ್ಯದಲ್ಲಿ ತನಗಿರುವ ಅಭಿನಿವೇಶವನ್ನು ಕವಿರಾಜಮಾರ್ಗಕಾರ ವ್ಯಕ್ತಪಡಿಸಿದ್ದಾನೆ. ಕನ್ನಡ ಸಾಹಿತ್ಯಕ್ಕೆಲಕ್ಷಣ ಗ್ರಂಥವೊಂದನ್ನು ಒದಗಿಸುವುದು ಅವನ ಮುಖ್ಯಗುರಿ: ಅದಕ್ಕಾಗಿ ಕನ್ನಡದ ಮೇಲೆ ವಿಶೇಷ ಒತ್ತು. ಅಂತೆಯೆ ಕನ್ನಡ ಗದ್ಯ ಪದ್ಯ ಕೃತಿಕಾರರ ಅಗಾಧ ಅಧ್ಯಯನವನ್ನು ಆತ ಮಾಡಿದ್ದಾನೆ. ಅವರೆಲ್ಲರ ಕೃತಿಗಳನ್ನೂ ಉಲ್ಲೇಖಿಸಿದ್ದರೆ ಇನ್ನಷ್ಟು ಅಧ್ಯಯನಕ್ಕೆ ಸಹಾಯವಾಗುತ್ತಿತ್ತು. ಆತನು ಬರೆದ ಪದ್ಯಗಳ ವಿಶ್ಲೇಷಣೆಯನ್ನು ವಿದ್ವಾಂಸರು ಭಿನ್ನಭಿನ್ನ ರೀತಿಯಲ್ಲಿ ಮಾಡಿದ್ದಾರೆ. ಅನೇಕರ ಬಗ್ಗೆ ಏಕಾಭಿಪ್ರಾಯವನ್ನು ತಳೆದಿಲ್ಲ. ಆ ಎಲ್ಲ ವಿವರಣೆಗಳ, ವಾದವಿವಾದಗಳ—ಪರಾಮರ್ಶೆಯು ಪ್ರಸ್ತುತ ಬರವಣಿಗೆಯ ವ್ಯಾಪ್ತಿಗೆ ಹೊರಗಾಗುತ್ತದೆ.[1]

ಕವಿರಾಜಮಾರ್ಗಕಾರನು ಖಂಡಿತವಾಗಿಯೂ ಇವರು ಗದ್ಯ ಲೇಖಕರು, ಇವರು ಪದ್ಯ ಲೇಖಕರು ಎಂದು ಬಿಡಿ ಬಿಡಿ ಪದ್ಯಗಳಲ್ಲಿ ತನಗಿಂತಲೂ ಪೂರ್ವದಲ್ಲಿದ್ದ ಪ್ರಸಿದ್ಧರೂ ಸಿದ್ಧಹಸ್ತರೂ ಆದ ಬರಹಗಾರರನ್ನು ಹೀಗೆ ವಿವರಿಸಿದ್ದಾನೆ:

ವಿಮಳೋದಯ ನಾಗಾರ್ಜುನ
ಸಮೇತ ಜಯಬಂಧು ದುರ್ವಿನೀತಾದಿಗಳೀ
ಕ್ರಮದೊಳ್ ನೆಗಟ್ಚಿ ಗದ್ಯಾ
ಶ್ರಮಪದ ಗುರುತಾಪ್ರತೀತಿಯಂ ಕೆಯ್ಕೊಂಡರ್ ॥

---

1 (ಅ) ಈ ವಾದವಿವಾದಗಳನ್ನು ನೋಡಬಯಸುವವರು ಇತ್ತೀಚೆಗೆ ಬಂದಿರುವ ಯಾವುದಾದರೂ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಬಹುದು. (ಆ) ಡಾ॥ ಎಂ. ಎಂ. ಕಲ್ಬುರ್ಗಿ ಅವರ ಮಹಾಪ್ರಬಂಧ "ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ" ಇತ್ಯಾದಿ ಗ್ರಂಥಗಳನ್ನೂ ನೋಡಬಹುದು.

ವಿಮಲ, ಉದಯ, ನಾಗಾರ್ಜುನ, ಜಯಬಂಧು, ದುರ್ವಿನೀತರು ಶ್ರೇಷ್ಠ ಬಗೆಯ ಗದ್ಯ 'ಬರಹಗಾರರೆಂದು ಹೇಳಿದ್ದಾನೆ. 'ಪಉಮ ಚರಿಉ' ಮುಂತಾದ ಗ್ರಂಥಗಳನ್ನು ಬರೆದ ವಿಮಲ ಸೂರಿಯೊ ಇಲ್ಲವೇ ಪ್ರಶ್ನೋತ್ತರ ಮಾಲಿಕೆ ಗ್ರಂಥದ ಕೆಲ ಹಸ್ತ ಪ್ರತಿಗಳಲ್ಲಿರುವ ವಿಮಲನೋ ಇರಬಹುದು—ಇಲ್ಲಿನ ವಿಮಲ. 'ಉದಯ' ಲಕ್ಷ್ಮೇಶ್ವರ ಶಾಸನದಲ್ಲಿ ಬರುವ 'ಉದಯ ಪಂಡಿತ' ಎಂಬ ಜೈನಯತಿಯಾಗಿರಬಹುದು.[2] ನಾಗಾರ್ಜುನನದು ಭಾರತ, ಚೀನ, ಟಿಬೇಟ್ ಮುಂತಾಗಿ ಅನೇಕ ದೇಶಗಳಲ್ಲಿ ಕೇಳಿಬರುವ ಒಂದು ಪ್ರಸಿದ್ಧ ಬೌದ್ಧ ಹೆಸರು. ಈ ಬೌದ್ಧ ವ್ಯಕ್ತಿ ಕನ್ನಡದಲ್ಲಿ ಬರೆದನೇ ಎಂಬುದು ಇನ್ನೂ ಒಂದು ಸಮಸ್ಯೆಯೆ. ಈತ ಶ್ರೀಶೈಲದಲ್ಲಿದ್ದನೆಂದು ತಿಳಿದುಬರುತ್ತದೆ. 'ಜಯಬಂಧು' ಎಂಬುದು 'ಜಯದೇವಪಂಡಿತ' ಎಂಬ ಜೈನಯತಿಯ ಹೆಸರಾಗಿ ದ್ದರೆ ಈತನ ಉಲ್ಲೇಖ ಲಕ್ಷ್ಮೇಶ್ವರದ ಎರಡು ಶಾಸನಗಳಲ್ಲಿ ಬಂದಿದೆ.[3] 'ಬಂಧು' 'ಅಂತೇವಾಸಿ' ಎಂಬುವು ಸಮಾನಾರ್ಥಕ ವಾಗಿ ಬಳಸಲ್ಪಡುವ ಶಬ್ದಗಳಾದುದರಿಂದ ಜಯದೇವಪಂಡಿತನ ಯತಿಸಮೂಹವನ್ನೇ ಈ ಶಬ್ದ ಸೂಚಿಸುತ್ತಿರಬಹುದು. 'ದುರ್ವಿನೀತ' ಕವಿಯು ಒಬ್ಬ ಗಂಗದೊರೆ ಎಂಬುದು ಸದ್ಯ ಎಲ್ಲರೂ ಒಪ್ಪಿಕೊಂಡಿರುವ ಸಂಗತಿ.

ಭಾರವಿಯ 'ಕಿರಾತಾರ್ಜುನೀಯ' ಸಂಸ್ಕೃತ ಸಾಹಿತ್ಯದ ಒಂದು ಶ್ರೇಷ್ಠಕಾವ್ಯ. ಆ ಕಾವ್ಯದ ೧೫ನೆಯ ಸರ್ಗಕ್ಕೆ ದುರ್ವಿ ನೀತನು ಟೀಕೆ ಬರೆದುದಾಗಿ ತಿಳಿದುಬರುತ್ತದೆ. ಇನ್ನೊಂದು ಕೃತಿ

---

2 S.I.I. Vol. xx. No. 6, pp. 6-7

3 ಅದೇ. ಪು. ೫. ೮.

'ಶಬ್ದಾವತಾರ' ಎಂದು ತಿಳಿದುಬರುತ್ತದೆ. ದುರ್ವಿನೀತನ ಹೆಸರಿನಲ್ಲಿ ಇರುವ ಮೂರನೆಯ ಕೃತಿಯೆಂದರೆ "ಬೃಹತ್ಕಥೆ". ಗುಮ್ಮರೆಡ್ಡಿಪುರ ಶಾಸನದ 'ದೇವಭಾರತೀನಿಬದ್ಧ ವಡ್ಡಕಥೇನ' ಎಂಬ ಉಲ್ಲೇಖದಿಂದ ರಾ. ನರಸಿಂಹಾಚಾರ್ಯರು ಇದು ಗುಣಾಢ್ಯನ 'ಬೃಹತ್ಕಥೆ' ಗ್ರಂಥದ ಸಂಸ್ಕೃತ ಅನುವಾದ ಎಂದು ಊಹಿಸಿದ್ದಾರೆ. ಯಾವೊಂದು ಗ್ರಂಥವೂ ದೊರೆಯದೆ ಇರುವಾಗ ಅವುಗಳ ಬಗ್ಗೆ ಇದಮಿತ್ಥಂ ಎಂದು ಬರೆಯಲು ಸಾಧ್ಯವಿಲ್ಲ. ಆದರೆ ಕವಿರಾಜಮಾರ್ಗಕಾರನು ದುರ್ವಿನೀತನನ್ನು ಕನ್ನಡ ಗದ್ಯಕಾರನೆಂದು ಹೇಳಿರುವುದರಿಂದ ಆತನು ಒಂದಾದರೂ ಶ್ರೇಷ್ಠ ಗದ್ಯ ಗ್ರಂಥವನ್ನು ಬರೆದಿರಬೇಕು. ಪ್ರಾಯಃ ಅದು ನಮಗೆ ಗುಣಾಢ್ಯನ ಬೃಹತ್ಕಥೆಯ ಕನ್ನಡ ಅನುವಾದವೇ ಆಗಿರಬಹುದೆಂದು ತೋರುತ್ತದೆ.

ಪರಮ ಶ್ರೀವಿಜಯಕವೀ
ಶ್ವರ ಪಂಡಿತಚಂದ್ರ ಲೋಕಪಾಲಾದಿಗಳಾ
ನಿರತಿಶಯ ವಸ್ತುವಿಸ್ತರ
ವಿರಚನೆ ಲಕ್ಷ್ಯಂ ತದಾದ್ಯ ಕಾವ್ಯಕ್ಕೆಂದುಂ ॥ I. ೩೨

ಎರಡನೆಯ ನಾಗವರ್ಮನ 'ವರ್ಧಮಾನ ಪುರಾಣ' ಕಾವ್ಯ ದೊರೆಯುವವರೆಗೆ ನಮ್ಮ ವಿದ್ವಾಂಸರ ವಿಚಾರಧಾರೆ ಬೇರೆದಾರಿಯಲ್ಲಿ ಹರಿಯುತ್ತಿತ್ತು—"ಶ್ರೀವಿಜಯ" ಕವಿ ಕುರಿತು. ಆದರೆ ನಾಗವರ್ಮನು ಶ್ರೀವಿಜಯ ಕವೀಶ್ವರನು "ರಘುವಂಶ ಮಹಾಪುರಾಣಂ" ಎಂಬ ಗ್ರಂಥವನ್ನು ಬರೆದುದಾಗಿ ತಿಳಿಸಿದ್ದಾನೆ:

ಅಘವಿಘಟನ ಕಾರಣಮ
ಮ್ಮಘಟಿತ ಪದಬಂಧ ಬಂಧುರಾಳಂಕೃತಿಯುಂ

ಲಘುವಾಗೆ ಪೊಗೞ್ತೆ ಪೇೞ್ದಿಂ
ರಘುವಂಶ ಮಹಾಪುರಾಣಮಂ ಶ್ರೀವಿಜಯಂ ‖4

ಕವಿರಾಜಮಾರ್ಗಕಾರನು ಹೇಳಿದ ಶ್ರೇಷ್ಠ ಕವಿಗಳಲ್ಲಿ ಶ್ರೀವಿಜಯರ ಬಗ್ಗೆ ಇದೊಂದು ಖಚಿತ ಸಂಗತಿ ಹೊಸದಾಗಿ ಹೊರಬಿದ್ದಿದೆ. ಪಿರಿಯಾಪಟ್ಟಣದ ದೊಡ್ಡಯ್ಯನು ತನ್ನ ಕೃತಿ 'ಚಂದ್ರಪ್ರಭ ಸಾಂಗತ್ಯದಲ್ಲಿ' "ಚಂದ್ರಪ್ರಭಪುರಾಣವ ಪೇೞ್ದ ವಿಜಯ ಕವೀಂದ್ರ" ಎಂದು ಈತನನ್ನು ಸ್ತುತಿಸಿದ್ದಾನೆ.[5] ಈ ಎರಡು ಕೃತಿಗಳನ್ನು ಗಮನಿಸಿದರೆ ಒಂದು ತೀರ್ಥಂಕರ ಪುರಾಣ ಮತ್ತು ಇನ್ನೊಂದು ಕಾವ್ಯ ಎಂಬುದು ವಿದಿತವಾಗುತ್ತದೆ. ಆಗಮಿಕ ಹಾಗೂ ಲೌಕಿಕ ಕಾವ್ಯಗಳು ಪ್ರಾಯಃ ಇವಾಗಿರಲು ಸಾಧ್ಯ. 'ರಘುವಂಶ ಮಹಾಪುರಾಣ' ಯಾವ ಬಗೆಯ ಕಾವ್ಯವೆಂಬುದು ಇನ್ನೂ ಸಂಶೋಧನೆಯಲ್ಲಿ ಹೊರಬೀಳಬೇಕಾಗಿದೆ. ಪ್ರಾಯಃ ಈ ಬಗೆಯ ಎರಡು ಕಾವ್ಯಗಳನ್ನು ಬರೆದೇ ಶ್ರೀವಿಜಯ ಮುಂದಿನ ಕವಿಗಳಿಗೆ ಆದರ್ಶಪ್ರಾಯ ಕವಿಯಾದನೆಂದು ತೋರು ತ್ತದೆ. ದುರ್ಗಸಿಂಹನು ಈತನನ್ನೂ ಈತನ ಕಾವ್ಯಗಳನ್ನೂ ಕುರಿತೇ

ಶ್ರೀವಿಜಯರ ಕವಿಮಾರ್ಗಂ
ಭಾವಿಪ ಕವಿಜನದ ಮನಕೆ ಕನ್ನಡಿಯುಂ ಕೈ
ಯ್ದೀವಿಗೆಯುಮಾದುವದಱಿಂ
ಶ್ರೀವಿಜಯರ್ ದೇವರವರನೇವಣ್ಣಿಪುದೋ ‖6

ಎಂದು ಬರೆದಿದ್ದಾನೆ.

---

4 ವರ್ಧಮಾನಪುರಾಣಂ (ಸಂ. ಬಿ. ಎಸ್. ಸಣ್ಣಯ್ಯ) ಆ. ೧-೨.

5 ಈ ವಿಜಯಕವೀಂದ್ರ ಇತ್ತೀಚಿನವನೆಂಬ ಅಭಿಪ್ರಾಯವೂ ಇದೆ ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ. ಪು. ೮೫.

6 ಕರ್ಣಾಟಕ ಪಂಚತಂತ್ರಂ (ಸಂ. ಎನ್. ಅನಂತರಂಗಾಚಾರ್) ಪೀ. ಪ್ರಕರಣ—೨೧.

ದುರ್ಗಸಿಂಹನು 'ಶ್ರೀವಿಜಯರ್' 'ದೇವರ್' ಅವರನೇ ವರ್ಣಿಪ್ಪದೊ ಎಂದು ಹೇಳಿರುವ ಮಾತು ಬಹಳ ಗಮನಾರ್ಹ ವಾಗಿದೆ. ಅದು ಅವರನ್ನು ಯತಿಶ್ರೇಷ್ಠರೆಂದು ಸೂಚಿಸುತ್ತದೆ. ಇನ್ನೊಂದು ಅಂಶ ಇಲ್ಲಿ ಸ್ಪಷ್ಟ: ಅದೆಂದರೆ ಶ್ರೀವಿಜಯರು ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಈ ಶ್ರೀವಿಜಯರು ಯಾರು ಎಂಬುದು ಸದ್ಯ ನಿರ್ಣಯಿಸಲು ಬರಲು ಸಾಧ್ಯವಿಲ್ಲ. ಪ್ರಾಯಃ ಲಕ್ಷ್ಮೇಶ್ವರದ ಶಾಸನವೊಂದರಲ್ಲಿ ಬಂದಿರುವ ಮೂಲ ಸಂಘದ ದೇವಗಣದಲ್ಲಿಯ "ಕವಿತಾದಿತ್ಯಾದಿ ಶ್ರೀವಿಜಯದೇವ ಪಂಡಿತಾಚಾರ್ಯನೆಂಬ ವ್ಯಕ್ತಿ ಆಗಿರಬಹುದು[7]. ಈತನ ಕಾಲ ಕ್ರಿ.ಶ. ೭೩೫. ಈ ಶ್ರೀವಿಜಯನನ್ನು ಕೇಶಿರಾಜ ಮೊದಲಾದವರು ವರ್ಣಿಸಿರುವುದು ಸಾಧ್ಯ. ಕವಿರಾಜಮಾರ್ಗಕಾರನಾದ ಶ್ರೀವಿ ಜಯನನ್ನೂ ಆತ ಸ್ಮರಿಸಿರಲು ಸಾಧ್ಯ. ಈತನ ವಿವರಗಳನ್ನು ಕುರಿತು ಮುಂದೆ ವಿಶೇಷವಾಗಿ ಬರೆಯಲಿರುವೆ.

'ಕವೀಶ್ವರ' ಇದು ಕವಿಯೊಬ್ಬನ ಬಿರುದೇ ಅಥವಾ ಹೆಸರೇ ಇನ್ನೂ ಸಂದೇಹದ ಸಂಗತಿ. 'ಕವೀಶ್ವರ' ಹಾಗೂ 'ಕವಿ ಪರಮೇಶ್ವರ' ಈ ಇಬ್ಬರೂ ಒಬ್ಬರೇ ಆದ ಪಕ್ಷದಲ್ಲಿ ಕವಿ ಪರಮೇಶ್ವರ ಅಥವಾ ಕವಿಪರಮೇಷ್ಠಿ ಕನ್ನಡದಲ್ಲಿ ಬರೆದಿರ ಬಹುದು. ಈತನು ಪ್ರಾಯಃ ಸಂಸ್ಕೃತದಲ್ಲಿ "ತ್ರಿಷಷ್ಟಿ ಶಲಾಕಾ ಪುರಾಣ" ಎಂಬ ಗ್ರಂಥವನ್ನು ಬರೆದುದರ ಜೊತೆಗೆ[8] ಕನ್ನಡ ದಲ್ಲೂ ೬೩ ಶಲಾಕಾ ಪುರುಷರನ್ನು ಕುರಿತು "ವಾಗರ್ಥಸಂಗ್ರಹ" ಗ್ರಂಥವನ್ನು ರಚಿಸಿರಬಹುದು[9].

---

7 S.I.I. Vol. xx, Insp. No. 7, p. 8

8 ಡಾ॥ ಆ. ನೆ. ಉಪಾಧ್ಯೆ "ಕವಿಪರಮೇಶ್ವರ ಅಥವಾ ಪರಮೇಷ್ಠಿ"

9 ಭೀಮರಾವ್ ಚಿಟಗುಪ್ಪಿ, "ಕವಿಪರಮೇಷ್ಠಿ ಕನ್ನಡದಲ್ಲಿ ಬರೆದಿದ್ದನೇ? (ಸಾ. ಪ. ಪತ್ರಿಕೆ ೫೪–೨).

"ಪಂಡಿತಚಂದ್ರ" ಇದನ್ನು ನಾನು ಒಬ್ಬ ವ್ಯಕ್ತಿಯ ಹೆಸರೆಂದು ಸ್ವೀಕರಿಸಿದ್ದೇನೆ. ಬರೀ 'ಪಂಡಿತ' ಎಂದರೆ ಅದು ಹೆಸರಿಗಿಂತ ಒಂದು ಉಪಾಧಿಯಾಗಿರುವುದೇ ಹೆಚ್ಚು ಸಂಭವನೀಯ. ಪಂಡಿತ ಚಂದ್ರ ಎಂದರೆ ಶಾಸ್ತ್ರಪಾರಂಗತ ಚಂದ್ರ ಎಂದಿಟ್ಟುಕೊಳ್ಳಬಹುದು. ಮಳೆಯ ಶಾಸ್ತ್ರವನ್ನು ವಿವರಿಸಿದ ಚಂದಿರಭಟ್ಟನೊಬ್ಬನ ಉಲ್ಲೇಖವು ಜಟ್ಟಮತ ಗ್ರಂಥದಲ್ಲಿ ಬಂದಿದೆ. ದುರ್ಗಸಿಂಹನು 'ಅಸಗ' 'ಮನಸಿಜ' ಇವರೊಂದಿಗೆ ಚಂದ್ರಭಟ್ಟನ ಕೃತಿಗಳೂ "ಪೊಸತೆನಿಪದೇಸಿಯಿಂ, ನವರಸಪೊಸರಲ್ಕೊಳ್ಪುವೆತ್ತ" ಮಾರ್ಗ ದಿಂದ ಲೋಕಕ್ಕೆ ಸಂದುವು ಎಂದು ಹೇಳಿದ್ದಾನೆ. ಆರ್. ನರಸಿಂಹಾಚಾರ್ಯರ ಅಭಿಪ್ರಾಯವು ನಮಗಿಲ್ಲಿ ಸಮಂಜಸವೆಂದು ತೋರುತ್ತದೆ. ಆದರೆ 'ಪಂಡಿತ' 'ಚಂದ್ರ' ಬೇರೆ ಬೇರೆಯೆಂದು ಒಡೆಯಬೇಕಿಲ್ಲ. ಜೈನರಲ್ಲಿ 'ಪಂಡಿತ' ಎಂದು ಹೆಸರಿಡುವುದು ಇತ್ತೀಚಿನ ಸಂಪ್ರದಾಯ.[10]

'ಲೋಕಪಾಲ'ನನ್ನು ಬಂಕರಸನಮಗ ಲೋಕಾದಿತ್ಯನೊಂದಿಗೆ ರೈಸ ಒಂದೆಡೆ ಸಮೀಕರಿಸಿದ್ದಾರೆ.[11] ಆದರೆ ಇದು ಸರಿಯಲ್ಲ, ಅವನು 'ಕವಿರಾಜಮಾರ್ಗ' ಗ್ರಂಥದ ತರುವಾಯದ ಕಾಲ ದವನು. ೧೯ನೆಯ ಶತಮಾನದ ಹಾಸನದ ರಾಮಕೃಷ್ಣಶಾಸ್ತ್ರೀಯ "ಭುವನ ಪ್ರದೀಪಿಕಾ" ಎಂಬ ಸಂಸ್ಕೃತಗ್ರಂಥದಲ್ಲಿ ಬರುವ ತುಂಡೀರ ಮಂಡಲದ ರಾಜನಾದ ಲೋಕಪಾಲನೊಂದಿಗೆ ಸಮೀ ಕರಿಸುವ ಪ್ರಯತ್ನವೊಂದು ನಡೆದಿದೆ. ಸದ್ಯ ಇವಾವುದೂ ಸರಿ ಯೆಂದು ತೋರುವುದಿಲ್ಲ. ನಮಗೆ ಪಟ್ಟದಕಲ್ಲಿನ ಶಾಸನವೊಂದ

---

10 ಎಪಿ. ಕ. ಸಂ. II ಶ್ರ. ಬೆ. ಶಾಸನ—೨೫೪ (RN)
ಸಿದ್ಧರ ಬಸದಿಯ ಶಾಸನ (ಕ್ರಿ.ಶ. ೧೩೯೮)

11 ಶಬ್ದಾನುಶಾಸನ ಉಪೋದ್ಘಾತ. ಪೃ. ೨೨.

ರಲ್ಲಿ ಬಂದಿರುವ "ಲೋಕಪಾಲೇಶ್ವರ" ಎಂಬ ವ್ಯಕ್ತಿಯೇ ಕನ್ನಡದಲ್ಲಿ ಗ್ರಂಥ ಬರೆದಿರಲು ಸಾಧ್ಯವೆಂದು ತೋರುತ್ತದೆ. ಏಕೆಂದರೆ ಅದು ಕನ್ನಡ ಪ್ರದೇಶವಲ್ಲಾದರೂ ಇದೆ. 'ತುಂಡೀರ ಮಂಡಲ' ಎಂದೂ ಕನ್ನಡನಾಡಿನ ಪ್ರದೇಶವಾಗಿದ್ದಿಲ್ಲ. ತಮಿಳುನಾಡಿನ ವ್ಯಕ್ತಿ ಕನ್ನಡದಲ್ಲಿ ಗ್ರಂಥ ಬರೆದನೆನ್ನುವುದು ಊಹೆಗೂ ಮೀರಿದ ಸಂಗತಿ. ಪಟ್ಟದಕಲ್ಲಿನ ಶಾಸನದಲ್ಲಿಯ ವ್ಯಕ್ತಿಯನ್ನು ಸ್ವೀಕರಿಸುವುದಾದರೆ ಚಾಳುಕ್ಯಚಕ್ರವರ್ತಿ ವಿಜಯಾದಿತ್ಯನ ಕಾಲಕ್ಕಿಂತಲೂ ಪೂರ್ವದಲ್ಲಿ ಈತನಿದ್ದ.[12] ಸಾಮಗ್ರಿಯು ಸರಿಯಾಗಿ ಸಿಕ್ಕದ ಹೊರತು ಸಾಧ್ಯವೀಗ ಊಹೆಯನ್ನು ಬಿಟ್ಟು ಏನನ್ನೂ ಅವಲಂಬಿಸುವಂತಿಲ್ಲ.

ಕವಿರಾಜಮಾರ್ಗ ಗ್ರಂಥದ ಪೂರ್ವದಕೃತಿಗಳು ನಮಗೆ ಇಂದು ದೊರೆಯದಿದ್ದರೂ ಅವುಗಳ ಉದ್ದೇಶ ಆತನು ಹೇಳಿರುವಂತೆ ಮಾನವಜನಾಂಗಕ್ಕೆ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂಬ ಚತುರ್ವಿಧ ಪುರುಷಾರ್ಥಗಳನ್ನು ಒದಗಿಸುವುದಾಗಿತ್ತು; ಪಾಪ, ಪುಣ್ಯ, ಹಿತ, ಅಹಿತ ಪ್ರಕಾರಗಳನ್ನು ತಿಳಿಸುವುದಾಗಿತ್ತು:

ಪಾಪಮಿದು ಪುಣ್ಯಮಿದು ಹಿತ
ರೂಪಮಿದಹಿತಪ್ರಕಾರಮಿದು ಸುಖಮಿದು ದುಃ
ಖೋಪಾತ್ತಮಿದೆಂದಱಿಪುಗು
ಮಾ ಪರಮ ಕವಿ ಪ್ರಧಾನರಾ ಕಾವ್ಯಂಗಳ್ ॥ I. ೧೮

ಅಧಿಕೃತ ಸತ್ಪುರುಷಾರ್ಥ
ಪ್ರಧಾನ ಧರ್ಮಾರ್ಥಕಾಮಮೋಕ್ಷಂಗಳವಾ
ಬುಧಜನ ವಿವಿಕ್ತ ಕಾವ್ಯ
ಪ್ರಧಾರಿತಾರ್ಥಂಗಳಖಿಳಭುವನ ಹಿತಂಗಳ್ ॥ I. ೨೦

---

12 ಪಟ್ಟದಕಲ್ಲುಗುಡಿಗಳು (ಎ. ಎಂ. ಅಣ್ಣಿಗೇರಿ), ಪು. ೮೫

ಕವಿರಾಜಮಾರ್ಗಕ್ಕಿಂತಲೂ ಮುಂಚೆ ಅನೇಕ ಕವಿಗಳು ಗದ್ಯ ಪದ್ಯ ಕೃತಿಗಳನ್ನು ಬರೆದಿದ್ದರು; ಆ ಗದ್ಯ ಕಥೆಗಳು ಪದ್ಯಕಾವ್ಯಗಳು ಎಲ್ಲವೂ ಕಾವ್ಯ ಎನ್ನಿಸಿಕೊಂಡಿದ್ದವು. ಕಾವ್ಯ ಎಂಬುದು "ಸವಿಶೇಷ ಶಬ್ದರಚನೆ" "ಅರ್ಥಾಲಂಕಾರಭರಿತ ಭಾವನಾಮಯ ಸೂಕ್ತ ಮಾರ್ಗ." ಅದು 'ಶರೀರ' ಹಾಗೂ 'ಪರಮಾಲಂಕಾರ' ಎಂದು ಎರಡು ಭೇದಗಳನ್ನು ಪೊಂದಿದೆ ಎಂದಿದ್ದಾನೆ. ಮತ್ತೆ ಅದು ಗದ್ಯ ಪದ್ಯ ಎಂದು ಎರಡು ವಿಧ ಎಂದಿದ್ದಾನೆ. ಪದ ಪಾದ ನಿಯಮ ಭರಿತವಾದದ್ದೇ ಪದ್ಯ; ಆ ಪದ್ಯ ಸಾಹಿತ್ಯದಲ್ಲಿ 'ಚತ್ತಾಣ' ಮತ್ತು 'ಬೆದೆದಂಡೆ' ಎಂದು ಎರಡು ಬಗೆಯೆಂದಿದ್ದಾನೆ:

೧. ಕಂದಗಳು + ವೃತ್ತಗಳು + ಜಾತಿಪದ್ಯಗಳು = ಬೆದಂಡೆ

೨. ಕಂದಗಳು + ವೃತ್ತಗಳು + ಚವುಪದಿ + ಗೀತಿಕೆ + ತಿವದಿ = ಚತ್ತಾಣ

ಇವುಗಳನ್ನೆ ತೀ.ನಂ.ಶ್ರೀ. ಅವರು "ಚಿತ್ರಾಯತನ" ಮತ್ತು "ವೈದಂಡಿಕ" ಎಂದು ವಿವರಿಸಿದ್ದಾರೆ. ಪದ್ಯ ಜಾತಿಯಲ್ಲಿ ಪ್ರಾಕೃತ ಛಂದೋಗತಿಯ ಪದ್ಯಗಳು (ಜಾತಿಪದ್ಯಗಳು) ಸೇರಿದ್ದರೆ ಅದು ವೈದಂಡಿಕ; ಅದರಲ್ಲಿ ಕನ್ನಡದ ದೇಸೀ ಪದ್ಯಗಳಿರುವುದಿಲ್ಲ. ಕನ್ನಡದ ದೇಸಿಪದ್ಯಗಳು ಸೇರಿ ಪ್ರಾಕೃತದ ಇತರ ಛಂದಗಳು ಇಲ್ಲದಿದ್ದರೆ ಅದು 'ಚತ್ತಾಣ'. ಇದುವರೆಗೆ ಇಂತಹ ನಿರ್ದಿಷ್ಟ ಕಾವ್ಯವೊಂದು ಕನ್ನಡದಲ್ಲಿ ದೊರೆತಿಲ್ಲ.

ಈ ಬಗೆಯ ಪದ್ಯ ಕಾವ್ಯಗಳನ್ನು ಬರೆವ ಕನ್ನಡಿಗರು ಪದ ನರಿದು ನುಡಿಯಲು ಬಲ್ಲವರಾಗಿದ್ದರು. ಚತುರರಾಗಿದ್ದರು. ವಾಸ್ತವವಾಗಿ ಯಾವುದೇ ವಿಷಯವನ್ನು ಕುರಿತು ಅಧ್ಯಯನ ವನ್ನು ಮಾಡದಿದ್ದರೂ ಶ್ರುತಜ್ಞಾನದಿಂದಲೇ ಕಾವ್ಯಪ್ರಯೋಗ ಪರಿಣತಮತಿಗಳಾಗಿದ್ದರು. ಯಾವುದು ಸರಿ. ಯಾವುದು ಪೂರ್ವ

ಸೂರಿಗಳ ಪ್ರಯೋಗದಿಂದ ಸಾಧುವೆಂದು ತಿಳಿಸಿಕೊಡುವ ಸಾಮರ್ಥ್ಯವನ್ನು ಹೊಂದಿದ್ದರು... ಇತ್ಯಾದಿ. ಹೀಗೆ ವಿವಿಧ ರೀತಿಯಲ್ಲಿ ಜನಪದವನ್ನು ವರ್ಣಿಸುವಲ್ಲಾಗಲೀ ಕಾವೇರಿಯಿಂದ ಗೋದಾವರೀ ಮಧ್ಯದ ಭಾಗದ ಕನ್ನಡನಾಡಿನಲ್ಲಿರುವ ಭೂ ಭಾಗದ ವಿವರಗಳನ್ನಾಗಲೀ ಹೇಳುವ ಸಂದರ್ಭವನ್ನು ಕಣ್ಣಿಟ್ಟು ನೋಡುವ ಯಾರಿಗೂ ಕವಿರಾಜಮಾರ್ಗಕಾರನಿಗೆ ಕನ್ನಡ ನಾಡಿನ ಒಂದು ವಿಶಿಷ್ಟ ಪ್ರದೇಶದ ಮೇಲೆಯೆ ಹೆಚ್ಚು ವ್ಯಾಮೋಹ ಇದೆ ಯೆಂಬುದು ಖಚಿತಗೊಳಿಸುತ್ತದೆ. ಅದೆಂದರೆ ಕಿಸುವೊಳಲ್ (ಪಟ್ಟದ ಕಲ್ಲು) ಕೊಪಣ (ಕೊಪ್ಪಳ), ಪುಲಿಗೆಜೆ (ಲಕ್ಷ್ಮೇಶ್ವರ) ಮತ್ತು ಒಂಕುಂದ (ಒಕ್ಕುಂದ) ಎಂಬ ಚತುಷ್ಕೋನದ ಭೂಭಾಗ ಅಥವಾ ಬೆಳ್ವೊಲ-೩೦೦ ಮತ್ತು ಪುಲಿಗೆಜೆ-೩೦೦ರ ಪ್ರದೇಶ. ಆಶ್ಚರ್ಯದ ಸಂಗತಿಯೆಂದರೆ ಮಾನ್ಯಖೇಟದಲ್ಲೂ ನೃಪತುಂಗನ ರಾಜ್ಯದ, ಕನ್ನಡನಾಡಿನ ಮಧ್ಯದ, ಆ ರಾಜಧಾನಿಯಲ್ಲೂ ಕವಿ ಒಳ್ಳೆಯ ಕನ್ನಡವಿದ್ದಂತೆ ಬರೆದಿಲ್ಲ!

೨. ಕವಿರಾಜಮಾರ್ಗಕಾರ, ವ್ಯಕ್ತಿ, ವಿಶೇಷ

'ಕವಿರಾಜಮಾರ್ಗಂ' 'ಕವಿರಾಜಮಾರ್ಗಾಲಂಕಾರ' ಇತ್ತೀಚೆಗೆ ಬೆಳಕಿಗೆ ಬಂದ 'ನೃಪತುಂಗಾಭ್ಯುದಯ' ಇತ್ಯಾದಿ ಹೆಸರಿನ ಗ್ರಂಥದ ಕರ್ತೃ ಯಾರು ಎಂಬುದು ಇದುವರೆಗೆ ಬಿಡಿಸಲಾರದ ಒಗಟಾಗಿತ್ತು. 'ನೃಪತುಂಗ' ಎಂದು ಕೆಲವರು 'ಕವೀಶ್ವರ' ಎಂದು ಕೆಲವರು 'ಶ್ರೀವಿಜಯ' ಎಂದು ಕೆಲವರು 'ಸಾಮಪ ಜಯಾಬ್ಬೆ' ಎಂದು ಮುಳಿಯ ತಿಮ್ಮಪ್ಪಯ್ಯನವರು 'ಜಿನ ಸೇನ' ಎಂದು ಚಿಟಗುಪ್ಪಿಯವರು ಬೇರೆ ಬೇರೆ ರೀತಿಯಲ್ಲಿ ಊಹಿಸಿ ಅನೇಕ ಪುಟಗಳನ್ನು ಬರೆದಿದ್ದಾರೆ.[1] ಕವಿರಾಜಮಾರ್ಗದ ಮೂರನೆಯ ಪರಿಚ್ಛೇದದ ಕೊನೆಯ ಪದ್ಯವನ್ನು ಪರಿಶೀಲಿಸಿದರೆ ಇದರ ಕರ್ತೃ ಯಾರೆಂಬುದು ಸುಸ್ಪಷ್ಟ; ಅತ ನಿರವದ್ಯಾನ್ವಯದ ಶ್ರೀವಿಜಯ; ಪದ್ಯವನ್ನು ನೋಡಿ:

ನಿರವದ್ಯಾನ್ವಯಸಂದ್ಧಮುದ್ಧತವ[ಹಾಕ್ಷೀ]ರಾಬ್ಧಿಡಿಂಡೀರಪಾಂ
ಡುರಮಾಕ್ರಾಂತ[ಸು]ಶೈಲ ಸಾಗರಧರಾಶಾಚಕ್ರವಾಳಾಂಬರಂ ।
ಪರಮ ಶ್ರೀವಿಜಯಪ್ರಭೂತಿಜಯಶ[ಂ] ಸ್ತ್ರೀಬಾಲವೃದ್ಧಾಹಿತಂ
ಪರಮಾನಂದಿತ ಲೋಕಮೊಪ್ಪೆ ನೆಲೆಗೊಳ್ಗಾಚಂದ್ರತಾರಂಬರಂ ॥ III. ೨೩೭
(ಕೆಬಿಪಾ)

'ನಿರವದ್ಯಾನ್ವಯ' ಎಂದರೆ 'ದೋಷರಹಿತ ವಂಶ' ಎಂಬ ವಾಚ್ಯಾರ್ಥವನ್ನಿಟ್ಟುಕೊಂಡು ಇದುವರೆಗೆ ನಮ್ಮ ವಿದ್ವಾಂಸರು ಕೃತಿಯ ಕರ್ತೃವಿನ ವಿವರಗಳ ಬಗ್ಗೆ ತೊಳಲಾಡಬೇಕಾಯ್ತು.

---

1 ವಾದವಿವಾದಗಳನ್ನು ಬರೆಯುವುದು ಈ ಕಿರುಹೊತ್ತಿಗೆಯ ವ್ಯಾಪ್ತಿಗೆ ಅನವಶ್ಯ. ಇತ್ತೀಚಿನ ಸಾಹಿತ್ಯ ಚರಿತ್ರೆಗಳ ಪುಟಗಳನ್ನು ಅವಲೋಕಿಸಿದರೆ ಯಾರಿಗೂ ಕಾಣಬರುವ ಸಂಗತಿ.

'ನಿರವದ್ಯ' ಇದು ಬಾದಾಮಿಯ ಚಾಳುಕ್ಯ ಚಕ್ರವರ್ತಿ ವಿಜಯಾದಿತ್ಯನಿಗೆ ಇರುವ ಇನ್ನೊಂದು ಹೆಸರೆಂಬುದು ಸುಸ್ಪಷ್ಟ: ನೋಡಿ: ರನ್ನನ ಈ ಚಾಳುಕ್ಯಾನ್ವಯದ ಅವತರಣಿಕೆಯ ಗದ್ಯ:

> ಅವರ ಪೂರ್ವಜರಪ್ಪರಸುಗಳೊಳಗಯೋಧ್ಯಾಪುರಪರಮೇಶ್ವರನುಂ. ಸತ್ಯಾದಿಗುಣಾಶ್ರಯುವಲ್ಲಭನುಮತಿಪ್ರೌಢವಿಕ್ರಾಂತಿ ಪ್ರಕಟ ಪ್ರಭಾವನಪ್ಪ ಸತ್ಯಾಶ್ರಯದೇವನಿಂ. ವಿಷ್ಣುವರ್ಧನಾಪರ ನಾಮಧೇಯನುಂ ರಾಷ್ಟ್ರಕೂಟಗಜಘಟಾವಿಘಟನ ಸಿಂಹನೆನಿಸಿದ ಜಯಸಿಂಹದೇವನಿಂ. ಅತಿಪ್ರವರ್ಧನ ಪ್ರಜಾನುರಾಗನುಮತಿಪ್ರಬಲ ರಣರಾಮನುಮೆನಿಸಿದ ರಣರಂಗಸಿಂಹನಿಂ. ವಾತಾಪಿಪುರವರೇಶ್ವರನುಮಶ್ವಮೇಧಯಜ್ಞದೀಕ್ಷಿತನುಂ ದ್ವೀಪಾಂತರ ಪ್ರಕಟ ಪ್ರಭಾವನುಮೆನಿಸಿದ ಪುಲಿಕೇಶಿದೇವನಿಂ. ಪರಿರಕ್ಷಿತಪವಿತ್ರವರ್ಮನೆನಿಸಿದ ಕೀರ್ತಿವರ್ಮದೇವನಿಂ ತತ್ತನಯನಪ್ಪೆರಡನೆಯ ಸತ್ಯಾಶ್ರಯದೇವನಿಂ, ಅವನ ಕಿಱಿಯ ಮಗನಪ್ಪ ಮಂಗಳಾರ್ಣವನಿಂ. ಸತ್ಯಾಶ್ರಯನಪ್ಪೆರಡನೆಯ ಸತ್ಯವ್ರತಿಯಿಂ, ತತ್ತನಯನಪ್ಪ ಆದಿತ್ಯವರ್ಮನಿಂ. ತದಪತ್ಯನಪ್ಪ ವಿಕ್ರಮಾದಿತ್ಯನಿಂ, ತತ್ಪುತ್ರನಪ್ಪ ದುರ್ಧರಮಲ್ಲನಿಂ[2], ತನ್ನಂದನನಪ್ಪ ನಿರವದ್ಯಾಪರನಾಮಧೇಯನಪ್ಪ ವಿಜಯಾದಿತ್ಯಭಟ್ಟಾರಕನಿಂ......ಇತ್ಯಾದಿ[3]

ಚಾಳುಕ್ಯ ಚಕ್ರವರ್ತಿಗಳಲ್ಲಿ ಕೆಲವರಿಗೆ ಎರಡೆರಡು ಹೆಸರುಗಳು ರೂಢಿಯಲ್ಲಿದ್ದುವು. ಉದಾ: ಇಮ್ಮಡಿ ಪುಲಿಕೇಶಿಗೆ 'ಎರೆಯತಿಯಡಿಗಳ್' ಎಂದಿತ್ತು. ಮೇಲಿನದು ಸಾಹಿತ್ಯ ಕೃತಿಯೊಂದರ ಸಾಕ್ಷಿಯಾದರೆ ಶಾಸನಗಳಲ್ಲಿ ಈ ವಿವರಗಳನ್ನು ನೋಡಿ:

(ಅ) ಶ್ರೀನಿರವದ್ಯವೃಪಾರವಿಜಯಾದಿತ್ಯ (ಎಪಿ.ಇಂ.ಸಂ.೩೨ಪ್ರ.೧)

---

2 'ವಿನಯಾದಿತ್ಯ' ಚಕ್ರವರ್ತಿಯ ಇನ್ನೊಂದು ಹೆಸರು.

3 ರನ್ನ 'ಗದಾಯುದ್ಧಂ', ಆ. ೨–೭ ವಚನ, ಪು. ೫೫ (ಗದಾಯುದ್ಧ ದರ್ಪಣ).

(ಆ) ೪ ಸ್ವಸ್ತಿ ಸಮಸ್ತ ಭುವನಾಶ್ರ—
೫ ಯ ಶ್ರೀ [ಪ್ರಥುವೀ ವಲ್ಲಭ] ಮಹಾರಾಜಾ
೬ ಧಿರಾಜಪರಮೇಶ್ವರ ಪರಮಭಟ್ಟಾರ
೭ ಕಂ ಸಯುಶಟ್ಕಿಪುರವರೇಶ್ವರಂ ಸತ್ಯಾ
೮ ಶ್ರಯಕುಲ...ದೀಪವರ್ಧನನೆನಿಸಿದ
೯ ಜಯಸಿಂಘವಲ್ಲಭನನ್ದನ ರಣರಾಗದೇವಂ
೧೦ ವಾತಾಪಿಪುರವರೇಶ್ವರನಶ್ವಯಜ್ಞದೀಕ್ಷಿತಂ
೧೧ ಪೊಲಿಕೇಸಿವಲ್ಲಭಂ ಕೀರ್ತ್ತಿವರ್ಮ್ಮರ್ ಎರಡನೆ
೧೨ ಯ ಸತ್ಯಾಶ್ರಯಂ ಮಂಗಳಾರ್ಣ್ಣವಂ ಎಡವ
೧೩ ರಿದೇವಂ ಆದಿತ್ಯವರ್ಮ್ಮ । ದುದ್ಧಮಲ್ಲಂ । ನಿರ
೧೪ ವದ್ಯನೆನಿಸಿದ ವಿಜಯಾದಿತ್ಯಂ, ಕುಕ್ಕುಜಿ ವಿ
೧೫ ಕ್ರಮಾದಿತ್ಯ...ಇತ್ಯಾದಿ. [4]

ಚಾಳುಕ್ಯಚಕ್ರವರ್ತಿಗಳಿಗೆ ಎರಡೆರಡು ಹೆಸರುಗಳಿರುವದನ್ನು ಮನಕ್ಕೆ ತಂದುಕೊಂಡಾಗ. ವಿಜಯಾದಿತ್ಯಚಕ್ರವರ್ತಿಗೆ ಇದ್ದ ಇನ್ನೊಂದು ಹೆಸರು 'ನಿರವದ್ಯ' ಎಂಬುದೂ ತುಂಬ ಗಮನಾರ್ಹವಾದ ಅಂಶ. ಈ ಸಂದರ್ಭದಲ್ಲಿ ಡಾ॥ ಎನ್. ವೆಂಕಟರಮಣಯ್ಯನವರ ಈ ವಾಕ್ಯಗಳೂ ನಮಗೆ ಮಾರ್ಗದರ್ಶಿ ಆಗಿವೆ; ಅವು ಇಂತಿವೆ: It is interesting to note that Jayasimha's Western Chalukya Contemporary Vijayāditya Satyāśraya (A.D. 696-733-4) had the title "Niravadya" ....The practice of the subordinates and the dependents of a monarch of adding the name or a biruda of their sovereign to their

4. S.S.I. Vol. xx, Ins No. 19, p. 18

own as a mark of loyalty and subordination is well-known.[5] ಲೋಕ ರೂಢಿಯಲ್ಲಿರುವಂತೆ[6] ಕವಿರಾಜಮಾರ್ಗಕಾರನು ಕೃತಿಯ ಕೊನೆಯ ಪದ್ಯದಲ್ಲಿ ತನ್ನ ವಿವರಗಳನ್ನು ನಿಶ್ಚಿತವಾಗಿ ಹೇಳಿದ್ದಾನೆ. ಅದೆಂದರೆ ತಾನು ನಿರವದ್ಯನ ಅನ್ವಯದವನು; ಅರ್ಥಾತ್ ಅತ್ಯಂತ ಪ್ರಸಿದ್ಧನಾದ ವಂಶದವನು. ಅದರ ಪ್ರಸಿದ್ಧಿಯ ಹಾಗೇ ತಾನು ಬರೆದ ಕೃತಿಯೂ ಸ್ತ್ರೀಬಾಲ ವೃದ್ಧ—ಹೀಗೆ ಎಲ್ಲರಿಂದಲೂ ಒಪ್ಪಲ್ಪಟ್ಟ ಒಳ್ಳೆಯ ಕೃತಿಯಾಗಿ ಆ ಚಂದ್ರ ತಾರಕೆಗಳು ಇರುವವರೆಗೆ ಸ್ಥಿರವಾಗಿ ನಿಲ್ಲಲಿ ಎಂದು ಆಶಿಸಿದ್ದಾನೆ. ಆದ್ದರಿಂದ ಕವಿರಾಜಮಾರ್ಗಕಾರ 'ನಿರವದ್ಯ' ಎಂದರೆ ಪ್ರಸಿದ್ಧ ಬಾದಾಮಿಯ ಚಾಳುಕ್ಯ ಚಕ್ರವರ್ತಿ ವಿಜಯಾದಿತ್ಯನ ವಂಶದಲ್ಲಿ ಜನಿಸಿದ ವ್ಯಕ್ತಿ. ಅವನ ಹೆಸರು "ಶ್ರೀವಿಜಯ."


ಈ ಶ್ರೀವಿಜಯ ನೃಪತುಂಗ ಚಕ್ರವರ್ತಿಯ (ಕ್ರಿ.ಶ. ೮೧೪–೮೮೦) ಮಾಂಡಲಿಕನಾಗಿದ್ದು ಆತನಿಂದ ತನ್ನ ಕೃತಿಯು ಅನುಮೋದಿತಗೊಂಡಿದೆಯೆಂದು ಗ್ರಂಥದ ಕೊನೆಯಲ್ಲಿ ಹೇಳಿದ್ದಾನೆ. ಅಂತೆಯೇ ಕವಿರಾಜಮಾರ್ಗ "ನೃಪತುಂಗ ದೇವಾನುಮತಮಪ್ಪ" ಕೃತಿ. ಈ ಸಂದರ್ಭದಲ್ಲಿ ಮಹಾಕವಿ ಪುಷ್ಪದಂತನು "ಮಹಾಪುರಾಣದ" ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿ "ಇದು ಮಹಾ ಭವ್ಯ ಭರತನಿಂದ ಅನುಮೋದಿತ" ಎಂದು ಹೇಳಿದ್ದಾನೆ

---

5. Dr. N. Venkataramanayya, The Eastern Chalukyas of Vengi, p. 70 and fn 2.
6. (a) Dr. J. F. Fleet, Indian Epigraphy, Imperial Gazetteer Vol. II, pp. 19–21.
   (b) ಫ್ಲೀಟರ ಕೃತಿಯ ಕನ್ನಡ ಅನುವಾದ "ಭಾ. ಶಾಸನಶಾಸ್ತ್ರ ಪರಿಚಯ" (ಡಾ I. ಸಿ.ಪಿ.ಕೆ.), ಪು. ೪೧–೪೪.

ಯೆಂಬುದನ್ನು ಸ್ಮರಿಸಿಕೊಳ್ಳಬಹುದು. ಆಶ್ರಿತರು, ಆಶ್ರಯವನ್ನು ನೀಡಿದ ವ್ಯಕ್ತಿಗಳ ಪ್ರಶಂಸೆಯನ್ನು ಹೀಗೆ ಮಾಡುವುದು ಒಂದು ಸಂಪ್ರದಾಯವೇ ಆಗಿನ ಕಾಲದಲ್ಲಿದ್ದಿತೆಂದು ಹೇಳಿದರೆ ತಪ್ಪಾಗದು. ಅಂತೆಯೆ ಮಾಂಡಲಿಕನಾದ "ಶ್ರೀವಿಜಯ" ಆಶ್ರಯದಾತನಾದ ನೃಪತುಂಗನಿಂದ ತನ್ನ ಕೃತಿಯು ಅನುಮೋದಿತ ಅಥವಾ "ಅನುಮತಮಪ್ಪ" ಎಂದು ಹೇಳಿದ್ದಾನೆ ಅಷ್ಟೇ ಅಲ್ಲ, ಆತನಿಂದ ಪ್ರತಾಪೋದಯವನ್ನೂ ಬಯಸಿದ್ದಾನೆ ಕೃತಿಯ ಆರಂಭದ ಆಶೀಪದ್ಯಗಳಲ್ಲಿ. ಈ ಸಂದರ್ಭದಲ್ಲಿಯೆ ಇನ್ನೊಂದು ಮಾತನ್ನು ಹೇಳಿಬಿಡಬಹುದು:

ಕವಿರಾಜಮಾರ್ಗಕಾರ ತನ್ನ ಊರು ಇಂತಹದೆಂದು ಎಲ್ಲಿಯೂ ಹೇಳಿಲ್ಲ. ಆದರೆ ತನ್ನ ರಾಜ್ಯದಲ್ಲಿಯ ನಾಲ್ಕು ಮುಖ್ಯ ಸ್ಥಳಗಳು: ಪಟ್ಟದಕಲ್ಲು, ಕೊಪ್ಪಳ, ಪುಲಿಗೆರೆ ಮತ್ತು ಒಂಕುಂದ ಎಂಬುವನ್ನು ತುಂಬ ಅಭಿಮಾನದಿಂದ ಹೇಳಿಕೊಂಡಿದ್ದಾನೆ. ಅಲ್ಲಿನ ಕನ್ನಡವೆ. "ತಿರುಳ್ಗನ್ನಡ"! ಇದು "Kings English" ಅಥವಾ "ಮೈಸೂರಕನ್ನಡ" ಎಂಬ ಮಾದರಿಯದ್ದು. ಕವಿರಾಜಮಾರ್ಗಕಾರನ ಪ್ರೇಮ ಒಂದು ವಿಸ್ತಾರವಾದ ಭೂಭಾಗದ ಮೇಲೆ ಇದೆಯೆ ವಿನಃ ಯಾವೊಂದು ವಿಶಿಷ್ಟ ಊರಿನ. ಮೇಲೆ ಇಲ್ಲ. ಇದು. ಗಮನಾರ್ಹವಾದ ಸಂಗತಿ: ಆತ ಒಬ್ಬ ಸಾಮಾನ್ಯ ಕೃತಿಕಾರನಾಗಿರದೆ ರಾಜನೇ ಆಗಿದ್ದನೆಂಬುದನ್ನು ಎತ್ತಿಟ್ಟು ತೋರಿಸುತ್ತದೆ.



ಅದಱೊಳಗಂ ಕಿಸುವೊೞಲಾ
ವಿದಿತ ಮಹಾಕೊಪಣನಗರದಾ ಪುಲಿಗೆಱೆಯಾ
ಸದಭಿಸ್ತುತಮಪ್ಪೊಂಕುಂ
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ‖ I. ೩೭

ಕವಿಯೋರ್ವನಿಗೆ ತನ್ನ ಊರಿನ ಮೇಲೆ, ರಾಜನೋರ್ವನಿಗೆ ತನ್ನ ರಾಜ್ಯದ ಮೇಲೆ, ಪ್ರೇಮ ಇರುವುದು ಸಹಜ ಮತ್ತು ಸ್ವಾಭಾವಿಕ. ಕವಿರಾಜಮಾರ್ಗಕಾರ ಶ್ರೀವಿಜಯನಿಗೆ ತನ್ನ ರಾಜ್ಯದ ಮೇಲೆ ಪ್ರೇಮ ಇದ್ದು ಅದನ್ನೇ ಇಲ್ಲಿ ಅಭಿವ್ಯಕ್ತ ಪಡಿಸಿದ್ದಾನೆಂದರೆ ಸರಿಹೋಗುತ್ತದೆ. ಈತನಿಗೆ ಪುಲಿಗೆರೆಯು ರಾಜಧಾನಿಯಾಗಿದ್ದು ಅಲ್ಲಿಂದ ರಾಜ್ಯವಾಳುತ್ತಿದ್ದನೆಂದು ತೋರುತ್ತದೆ. ಪುಲಿಗೆರೆಯಲ್ಲಿ "ಶ್ರೀವಿಜಯಜಿನಾಲಯ" ಇದ್ದುದಕ್ಕೆ ಅನಂತರ ಕಾಲದ ಶಾಸನ

ಗಳಲ್ಲಿ ಉಲ್ಲೇಖ ದೊರೆಯುತ್ತದೆ. ಇಲ್ಲಿ ಇನ್ನೊಂದು ವಿಷಯವೂ ಸ್ಪಷ್ಟವಾಗುತ್ತದೆ. ಅದೆಂದರೆ ಕವಿರಾಜಮಾರ್ಗಕಾರ ಜೈನ ಧರ್ಮಾವಲಂಬಿ ಮತ್ತು ಆತನ ಆಶ್ರಯದಾತ ನೃಪತುಂಗ ವೈದಿಕ ಧರ್ಮಾವಲಂಬಿ ಎಂಬುದು. ಕೃತಿ ತುಂಬ ಈ ಬಗ್ಗೆ ಸಾಕಷ್ಟು ಪ್ರಮಾಣಗಳಿವೆ. ಇಬ್ಬರು ಭಿನ್ನ ರಾಜರ—ಚಕ್ರವರ್ತಿ ಹಾಗೂ ಮಾಂಡಲಿಕನ—ಮನೋಭೂಮಿಕೆಯಲ್ಲಿ "ಕವಿರಾಜಮಾರ್ಗ" ಗ್ರಂಥವು ಒಂದು ರೂಪ ಪಡೆದಿತೆಂದು ತೋರುತ್ತದೆ; ಅದರ ರಚನೆ ಮಳಖೇಡದಲ್ಲಿ ಆಗಲಿಲ್ಲ. ಮಹಾಕವಿ ಪುಷ್ಪದಂತ ಮಳಖೇಡ ವನ್ನು ಎಷ್ಟು ಸುಂದರವಾಗಿ ವರ್ಣಿಸಿರುವನೊ ಅಷ್ಟೇ ರೀತಿಯ ಒಂದು ವರ್ಣನೆ ಕವಿರಾಜಮಾರ್ಗದಲ್ಲೂ ಬಂದಿರುತ್ತಿತ್ತು—ಅದು ಆ ರಾಜಧಾನಿಯಲ್ಲಿ ರಚಿತಗೊಂಡಿದ್ದರೆ; ಹಾಗಾಗಿಲ್ಲವೆಂಬುದಕ್ಕೆ ಸದ್ಯದ ಉಪಲಬ್ಧ ಸಾಮಗ್ರಿ ಸಾಕ್ಷಿಯಾಗಿದೆ.

ಕವಿರಾಜಮಾರ್ಗದ ಮೂರೂ ಪರಿಚ್ಛೇದಗಳ ಕೊನೆಯ ಪದ್ಯ ಗಳಲ್ಲಿ ಕವಿಯ ಮನೋಭಾವ—ಎಂದರೆ ತಾನು ಕೃತಿಯನ್ನು ಹೇಗೆ ಬರೆದಿದ್ದೇನೆ, ಅದನ್ನು ಬಳಸಿದರೆ ಏನಾಗಬಹುದು ಮತ್ತು ಇಂತಹ ಒಳ್ಳೆಯ ಕೃತಿ ಎಲ್ಲರ ಪ್ರೇಮದ ಮೂಲಕ ಆ ಚಂದ್ರಾರ್ಕ ತಾರಂಬರ ಸ್ಥಾಯಿಯಾಗಿ ನಿಲ್ಲಲಿ ಎಂಬುದು—ಸುವ್ಯಕ್ತ. ಈ ಮೂರು ಪದ್ಯಗಳನ್ನು ಇನಿತು ಅವಲೋಕಿಸುವುದು ವಿಹಿತ:

ಸಕಳಾಳಾಪ ಕಳಾಕಳಾಪ ಕಥಿತವ್ಯಾವೃತ್ತಿಯೊಳ್ ಕೂಡಿ ಚಿ
ತ್ರಕರಂಬೋಲ್ ಪರಭಾಗಭಾವ ವಿಲಸದ್ವರ್ಣ ಕ್ರಮಾವೃತ್ತಿಯುಂ
ಪ್ರಕಟಂ ಮಾಡಿರೆ ಪೇೞ್ದ ಚಿತ್ರಕೃತಿಯಂ ವ್ಯಾವರ್ಣಿಸುತ್ತುಂ ಕವಿ
ಪ್ರಕರಂ ಶ್ರೀವಿಜಯ ಪ್ರಭೂತಮನಿದಂ ಕೈಕೊಳ್ವುದೀ ಮಾೞ್ಕೆಯಿಂ॥

I. ೧೪೯

ಭಾವಿಸಿ ಶಬ್ದತತ್ತ್ವ ಸಮಯ ಸ್ಥಿತಿಯಂ ಕುಱಿತೊಂದಶೇಷ ಭಾ
ಷಾ ವಿಷಯೋಕ್ತಿಯಂ ಬಗೆದು ನೋಡಿ ಪುರಾಣ ಕವಿ ಪ್ರಭು ಪ್ರಯೋ
ಗಾವಿಳ ಸದ್ಗುಣೋದಯಮನಾಱ್ಪನಱಿಂ ಸಮೆದೊಂದು ಕಾವ್ಯದಿಂ
ಶ್ರೀವಿಜಯಪ್ರಭೂತ ಮುದಮಂ ತನಗಾಗಿ[ಪ್ಪೆಂ] ಕವೀಶ್ವರಂ ॥

II. ೧೫೩

ನಿರವದ್ಯಾನ್ವಯನುದ್ಧ್ವಮುದ್ಧತ ಮ[ಹಾಕ್ಷೀ]ರಾಬ್ಧಿ ಡಿಂಡೀರ ಪಾಂ।
ಡುರಮಾಕ್ರಾಂತ[ಸು]ಶೈಲಸಾಗರಧರಾಶಾಚಕ್ರವಾಳಾಂಬರಂ ॥
ಪರಮ ಶ್ರೀವಿಜಯಪ್ರಭೂತಿಜಯಶ[ಃ] ಸ್ತ್ರೀಬಾಲವೃದ್ಧಾರ್ಚಿತಂ
ಪರಮಾನಂದಿತಲೋಕಮೊಪ್ಪೆ ನೆಲೆಗೊಳ್ಗುಚಂದ್ರ ತಾರಂಬರಂ ॥

III. ೨೨೭

ಇಲ್ಲಿನ ಒಂದನೆಯ ಪದ್ಯ 'ಕವಿರಾಜಮಾರ್ಗ' ಗ್ರಂಥ ಹಲವು ಆಕರಗಳನ್ನು ಅವಲೋಕಿಸಿ ಸಿದ್ಧಪಡಿಸಿದ ಗ್ರಂಥ ಎಂಬುದನ್ನೂ ಎರಡನೆಯ ಪದ್ಯ ಇಂತಹ ಒಂದು ವಿಶುದ್ಧಕೃತಿಯನ್ನು ಓದುವ ವ್ಯಕ್ತಿ (ಕವೀಶ್ವರ) ಕೃತಿಕಾರನ ಆನಂದವನ್ನೇ ತಾನೂ ಪಡೆಯುತ್ತಾನೆ ಎಂಬುದನ್ನೂ ಮತ್ತು ಮೂರನೆಯಪದ್ಯ ಸ್ತ್ರೀಬಾಲವೃದ್ಧರೆಲ್ಲರೂ ಮೆಚ್ಚುವ ಕೃತಿಯಾದುದರಿಂದ ಅನಂತಕಾಲವವರೆಗೆ ಅದು ನಿಲ್ಲುತ್ತದೆ ಎಂಬ ಮನೋಭಿಲಾಷೆಯನ್ನೂ ವ್ಯಕ್ತಪಡಿಸುತ್ತವೆ. ಅರ್ಥಾತ್ ಗ್ರಂಥದ ರಚನೆ, ಪ್ರಯೋಜನ ಹಾಗೂ ಅದರ ಪ್ರಸಿದ್ಧಿ ಮೂರನ್ನೂ ಈಮೂರು ನುಡಿಗಳು ಅಭಿವ್ಯಕ್ತಪಡಿಸಿವೆ. ಮೂರರಲ್ಲೂ ಅನಸ್ಯೂತ ಸಂಬಂಧ ಇದೆಯೆಂಬುದನ್ನು ನಾವು ಮರೆಯಬಾರದು.

೩. ಕೃತಿಶರೀರ

'ಕವಿರಾಜಮಾರ್ಗ' ಗ್ರಂಥ ಭಾಮಹ ಹಾಗೂ ದಂಡಿ ಇವರ ಕೃತಿಗಳನ್ನು ಅರಗಿಸಿಕೊಂಡು ಹೊಸದಾಗಿ ಬರೆದ ಒಂದು ಹೊಸ ಕೃತಿ. ಇದರಲ್ಲಿ 'ದೋಷಾದೋಷಾನುವರ್ಣನ ನಿರ್ಣಯ' 'ಶಬ್ದಾಲಂಕಾರ ವರ್ಣನಾ ನಿರ್ಣಯ' ಮತ್ತು 'ಅರ್ಥಾಲಂಕಾರ ಪ್ರಕರಣ' ಎಂದು ಮೂರು ಪರಿಚ್ಛೇದಗಳಿವೆ. ಭಾಮಹನು ಆರು ಅಧ್ಯಾಯಗಳಲ್ಲಿ ಹೇಳಿದುದನ್ನು ದಂಡಿಯು ಮೂರು ಪರಿಚ್ಛೇದಗಳಲ್ಲಿ ಅಳವಡಿಸಿ ಗ್ರಂಥವನ್ನು ರಚಿಸಿದನು. ದಂಡಿಯು ಮೂರು ಪರಿಚ್ಛೇದಗಳಲ್ಲಿ ವಿವರಿಸಿದ ಸಂಗತಿಯನ್ನೆ ಮೂರೇ ಪರಿಚ್ಛೇದಗಳಲ್ಲಿ ಕನ್ನಡದಲ್ಲಿ ಶ್ರೀವಿಜಯನು ಇನಿತು ವಿರೋಧ ರೀತಿಯಲ್ಲಿ ಹೇಳಲುಪಕ್ರಮಿಸಿದ್ದಾನೆ. ಇದು ಸ್ಥೂಲ ನೋಟಕ್ಕೆ ಕಂಡುಬರುವ ಸಂಗತಿ. ಭಾಮಹ ಮೊದಲಾದವರಲ್ಲಿ ಅಂತ್ಯದಲ್ಲಿ ಬಂದ 'ಕಾವ್ಯ ದೋಷ' ಸಂಗತಿಗಳು ಕವಿರಾಜಮಾರ್ಗದಲ್ಲಿ ಆರಂಭದಲ್ಲಿಯೆ ಬಂದಿವೆ.

I

ಪ್ರಥಮ ಪರಿಚ್ಛೇದವನ್ನು 'ದೋಷಾ ದೋಷಾನುವರ್ಣನ ನಿರ್ಣಯ' ಎಂದು ಹೇಳಿದ್ದರೂ 'ಕಾವ್ಯ' ಎಂದರೆ ಏನು? ಅದರ ಶರೀರ ಹೇಗೆ ಇರುತ್ತದೆ; ಶರೀರದ ಗದ್ಯ, ಪದ್ಯ, ಸಮ್ಮಿಶ್ರಿತ ಇತ್ಯಾದಿ ವಿಭಜನೆಗಳನ್ನು ದಂಡಿಯಂತೆಯೆ ಮಾಡಿದ್ದಾನೆ; ಸುಷ್ಟು ರೂಪವನ್ನು ಮೆಚ್ಚಿದ್ದಾನೆ. ಅದರೂ ವಿನೂತನ ರೀತಿಯ ಆರಂಭ.

ಜಡಜನಮುಮೆಲ್ಲಮೋದಂ
ತಡೆಯದೆ ಕಲ್ಗುಂ ಗುರೂಪದೇಶಕ್ರಮದಿಂ
ನುಡಿವಲ್ಮೆಯಲ್ತದೇಂ ಕ
ಲ್ತೊಡನೋದುವುವಲ್ತೆ ಗಿಳಿಗಳುಂ ಪುರುಳಿಗಳುಂ ॥ I. ೧೦

ಇದು ಭಾಮಹನ

ಗುರೂಪದೇಶಾದಧ್ಯೇತುಂ ಶಾಸ್ತ್ರಂ ಜಡಧಿಯೋಪ್ಯಲಮ್ ।
ಕಾವ್ಯಂ ತು ಜಾಯತೇ ಜಾತು ಕಸ್ಯ ಚಿತ್ ಪ್ರತಿಭಾವತಃ ॥ ಕಾ.೧.೫

ಎಂಬ ಅನುಷ್ಟುಪ್ಪಿನ ಅನುವಾದವೇ. ಆದರೆ ಹೇಳುವ ರೀತಿ ಬೇರೆಯೆ ಆಗಿದೆ. ಗುರುವಿನ ಮುಖದಿಂದ ಶಾಸ್ತ್ರದ ಸಂಗತಿಗಳನ್ನು ದಡ್ಡನೂ ಕಲಿತುಕೊಂಡು ಹೇಳಬಹುದು. ಆದರೆ ಕಾವ್ಯದ (ನುಡಿಯ ಬಲ್ಮೆ) ವಿಷಯ ಹಾಗಲ್ಲ; ಅದು ಕೇವಲ ಎಲ್ಲೋ ಒಬ್ಬಿಬ್ಬರು ಪ್ರತಿಭಾವಂತರಿಗೆ ವಶ. ಗಿಳಿಪಾಠಕ್ಕೂ ಕಲಾಸೃಷ್ಟಿಗೂ ಅಂತರ ಅಜಗಜಾಂತರ. ಜಡಧೀ–ಗಿಳಿಗೆ ಸಮ. ಗಿಳಿಗಳಂತಹ ಶಾಸ್ತ್ರಿಗಳು ನಮ್ಮಲ್ಲಿ ಬಹಳ ಜನ ಇದ್ದಾರೆ. ಆದರೆ ಪ್ರತಿಭಾವಂತರ ಸಂಖ್ಯೆ ಬೆರಳ ಮೇಲೆಣಿಸುವಷ್ಟು.

ಕವಿರಾಜಮಾರ್ಗಕಾರನಾದ ಶ್ರೀವಿಜಯ ದೋಷಗಳು ಮೂರು ರೀತಿಯವು ಎಂದಿದ್ದಾನೆ: ವ್ಯಾಕರಣದೋಷಗಳು, ಛಂದೋದೋಷಗಳು ಮತ್ತು ಅಲಂಕಾರ ದೋಷಗಳು. ಈ ದೋಷಗಳನ್ನೇ ಏಕೆ ಮೊದಲಲ್ಲಿ ಹೇಳುತ್ತಿದ್ದಾನೆ ಎಂಬುದನ್ನು ಆತನಿಂದಲೇ ತಿಳಿಯಿರಿ:

ಕಾಣನೇಗೆಯ್ದುಂ ತನ್ನ ದೋಷಮಂ
ಕಾಣದಂತೆಂದುಂ ಕಣ್ಗಳ್ ತಮ್ಮ ಕಾಡಿಗೆಯುಂ
ಪೂಣೆಗನಾದುದಱಿಂ ಪೆಱರಿಂ
ಜಾಣರಿನೋದಿಸಿ ಪೇೞ್ವುದು ಕಬ್ಬಮಂ ॥

ಕೀರ್ತಿಕಾಮನೆಯುಳ್ಳ ಕವಿ ತನ್ನ ಕೀರ್ತಿ ಶಾಶ್ವತವಾಗಿ ನಿಲ್ಲಬೇಕೆಂದು ಬಯಸಿದರೆ ತಾನು ಬರೆದ ಕಾವ್ಯವನ್ನು ಮೊದಲು ಜಾಣರಿಂದ ಓದಿಸಿ ಅನಂತರ ಅದನ್ನು ವಿಶ್ರುತಪಡಿಸಬೇಕು. ನಮ್ಮ ಕಣ್ಣಿನ ಕಾಡಿಗೆ ನಮಗೆ ಕಾಣದಿದ್ದರೂ ಬೇರೆಯವರಿಗೆ

ಸ್ಪಷ್ಟವಾಗಿ ಕಾಣುವಂತೆ ನಮ್ಮ ಕಾವ್ಯದ ದೋಷಗಳು ನಮ ಗಿಂತಲೂ ಬೇರೆಯವರಿಗೆ ತೀವ್ರ ಗೋಚರವಾಗುತ್ತವೆ. ಅವರು ತೋರಿದ ಆ ದೋಷಗಳನ್ನು ದೂರಮಾಡಿಕೊಳ್ಳಲು ಸುಲಭ. ದೋಷಗಳು ದೂರವಾದಮೇಲೆ ಶುದ್ಧವಾದ ಕಾವ್ಯ ಆಕಲ್ಪಾಂತದ ವರೆಗೂ ಸೊಗಸಾಗಿ ಶೋಭಾಯಮಾನವಾಗಿ ಕಂಗೊಳಿಸುತ್ತದೆ. ಅಂದಿನ ಕಾವ್ಯದಲ್ಲಿ ಕನ್ನಡಕ್ಕೆ ಪ್ರಾಸ ಮುಖ್ಯ; ಆದರೆ ಕಾವ್ಯದ ಜೀವವು ಧ್ವನಿ.[1]

ದೋಷಗಳು ಇಷ್ಟೆಂದು ಕನ್ನಡದಲ್ಲಂತೂ ಲೆಕ್ಕಹಾಕಲು ಸಾಧ್ಯ ವಿಲ್ಲ; ದೇಶಿ ಬೇರೆ ಬೇರೆ ಇರುವುದರಿಂದ ಕನ್ನಡದಲ್ಲಿ ಅವುಗಳ ಸಂಖ್ಯೆ 'ವಾಸುಗಿ' ಎಂದರೆ ಆದಿಶೇಷನಿಗೂ ಸಾಧ್ಯವಿಲ್ಲವೆಂದು ಆಶ್ಚರ್ಯವನ್ನು ವ್ಯಕ್ತಪಡಿಸಿದ್ದಾನೆ. ಆದರೂ ಪುರಾಣಕವಿಗಳು ರಚಿಸಿದ ಅಥವಾ ಹೇಳಿದ ದೋಷಗಳನ್ನೇ ಇನಿತು ಚಿಂತಿಸಿ ಮತ್ತೆ ತನಗೆ ತೋರಿದ ಕೆಲವು ದೋಷಗಳನ್ನೂ ಬುಧಜನಕ್ಕೆ ತಿಳಿಯೆ ಹೇಳುವೆ ಎಂದಿದ್ದಾನೆ. ಪುರಾಣಕವಿಗಳು ಎಂದರೆ ಪ್ರಾಯಃ ಇಲ್ಲಿ ಭಾಮಹ ಹಾಗೂ ದಂಡಿಗಳು ಹೇಳಿದ ದೋಷಗಳೇ ಇರಬಹುದು. ೧ನೆಯ ಪರಿಚ್ಛೇದದ ೭೮ ಮತ್ತು ೭೯ನೆಯ ಪದ್ಯಗಳಲ್ಲಿ ಅವನ್ನು ಹೀಗೆ ವಿವರಿಸಿದ್ದಾನೆ:

ಯತಿಭಂಗಮರ್ತ್ಥ ಶೂನ್ಯಂ
ಸತತ ವಿರುದ್ಧಾರ್ತ್ಥ ಮುಕ್ತ ಪುನರುಕ್ತಾರ್ತ್ಥಂ।
ಚ್ಯುತಯಾಥಾಸಂಖ್ಯಂ ವ್ಯವ
ಹಿತಮಚ್ಛಂದಂ ವಿಸಂಧಿಕಂ ನೇಯಾರ್ತ್ಥಂ॥

ಆಗಮ ಸಮಯ ನ್ಯಾಯವಿ
ಭಾಗ ಕಳಾ ಕಾಲ ಲೋಕ ದೇಶವಿರುದ್ಧಂ।

---

1 ಕಾವ್ಯಸ್ಯಾತ್ಮಾಧ್ವನಿರಿತಿ (ಧ್ವನ್ಯಾಲೋಕ) ೧–೧

2 ಎಂ.ವಿ.ಸೀ. ಅವರ ಸಂಸ್ಕರಣದಲ್ಲಿ ೭೯ ಮತ್ತು ೭೦, ಪು. ೧೭

ಭೋಗಿ ವಿಷಂಬೊಲ್ವ್ಯಾಣ
ತ್ಯಾಗಮನಾಗಿಸುಗುಮುಮಳ್ಕೃತಿವಧುಗಿನಿತುಂ ॥

ಈ ಎರಡು ಪದ್ಯಗಳಲ್ಲಿ ಶ್ರೀವಿಜಯ ಭಾಮಹನು ವಿವರಿಸಿರುವ ದೋಷಗಳನ್ನೇ ಪಟ್ಟಿಮಾಡಿದ್ದಾನೆ; ನೋಡಿ:

ಅಪಾರ್ಥಂ ವ್ಯರ್ಥಮೇಕಾರ್ಥಂ ಸಸಂಶಯಮಪಕ್ರಮಮ್ ।
ಶಬ್ದಹೀನಂ ಯತಿಭ್ರಷ್ಟಂ ಭಿನ್ನವೃತ್ತಂ ವಿಸಂಧಿಚ ॥ ೪–೧
ದೇಶ ಕಾಲ ಕಲಾ ಲೋಕನ್ಯಾಯಾಗಮವಿರೋಧಿಚ
ಪ್ರತಿಜ್ಞಾ ಹೇತು ದೃಷ್ಟಾಂತಹೀನಂ ದುಷ್ಟಂಚ ನೇಷ್ಯತೇ ॥
೪–೨

ದಂಡಿಯೂ ಇವೇ ದೋಷಗಳನ್ನು ಹೇಳಿದ್ದರೂ ದೋಷಗಳು ಹತ್ತು ಬಗೆಯವು ಎಂದಿದ್ದಾನೆ:

ಅಪಾರ್ಥಂ ವ್ಯರ್ಥಮೇಕಾರ್ಥಂ ಸಸಂಶಯಮಪಕ್ರಮಮ್ ।
ಶಬ್ದಹೀನಂ ಯತಿಭ್ರಷ್ಟಂ ಭಿನ್ನವೃತ್ತಂ ವಿಸಂಧಿಕಮ್ ॥ ಕಾವ್ಯಾ.
III. ೧೨೫
ದೇಶಕಾಲ ಕಲಾಲೋಕನ್ಯಾಯಾಗಮ ವಿರೋಧಿಚ ।
ಇತಿ ದೋಷಾ ದಶೈವೇತೇ ವರ್ಜ್ಯಾಃ ಕಾವ್ಯೇಷು ಸೂರಿಭಿಃ ॥
III. ೧೨೬

ವಾಸ್ತವವಾಗಿ ದಂಡಿ ಇಲ್ಲಿ ಲೆಕ್ಕಾಚಾರವನ್ನು ತಪ್ಪಿದ್ದಾನೆ. ಅವನೇ ಹೇಳಿದ ದೋಷಗಳನ್ನು ಪಟ್ಟಿಮಾಡಿದರೆ ಅವು ಹತ್ತಕ್ಕೆ ಹೆಚ್ಚಿವೆ. ೧೫ ದೋಷಗಳು ಇಲ್ಲಿರುವುದು ಸುಸ್ಪಷ್ಟ. ಭಾಮಹನು ಹೇಳಿದ 'ಪ್ರತಿಜ್ಞಾಹೀನ–' 'ಹೇತುಹೀನ' 'ದೃಷ್ಟಾಂತಹೀನ' ಇವೆಲ್ಲವೂ ದೋಷಗಳೋ ಅಲ್ಲವೋ ಎಂಬ ಚರ್ಚೆ—ವಿಚಾರ ಕರ್ಕಶ, ನೀರಸ, ಅವುಗಳಿಂದ ಕಾವ್ಯಾಸ್ವಾದನೆಯ ರುಚಿಯು ದೊರೆಯದು ಎಂದು ಹೇಳಿ ಕೈಬಿಟ್ಟಿದ್ದಾನೆ:

ಪ್ರತಿಜ್ಞಾಹೇತು ದೃಷ್ಟಾಂತ ಹಾನಿರ್ದೋಷೋ ನ ವೇತ್ಯಸೌ ।
ವಿಚಾರಃ ಕರ್ಕಶ ಪ್ರಾಯಸ್ತೇನಾಲೀಢೇನ ಕಿಂ ಫಲಮ್ ॥

ಶ್ರೀ ವಿಜಯನು ದಂಡಿಯನ್ನು ಅನುಸರಿಸಿಯೂ ಭಾಮಹನ ಮಾರ್ಗದಲ್ಲಿಯೇ ನಡೆದಿದ್ದಾನೆ, ದೋಷಗಳ ಸಂಖ್ಯೆ 'ಅಪಾರ' ಎಂಬುದನ್ನು ವಿವರಿಸಿ.

ಭಾಷಾದೋಷಗಳು: ಕವಿರಾಜಮಾರ್ಗಕಾರ ಕನ್ನಡ-ಪೆಟಗನ್ನಡ; ಕನ್ನಡ-ಸಮಸಂಸ್ಕೃತ; ಕನ್ನಡ-ಸಂಸ್ಕೃತ—ಇವುಗಳ ಬೆರಕೆ ಹೇಗಿದ್ದರೆ ಚಂದ, ಇಲ್ಲದಿದ್ದರೆ ಅಸಹ್ಯ, ಎಂಬುದನ್ನು ಹಲವು ಪದ್ಯಗಳಲ್ಲಿ ಉದಾಹರಣೆ ಸಹಿತ ವಿವರಿಸಿದ್ದಾನೆ. ನಿಶ್ಚಯವಾಗಿ ಸಂಸ್ಕೃತಶಬ್ದ ಯಾವುದು ಏನು ಎತ್ತ ಎಂದರಿದು ಕಾವ್ಯವನ್ನು ರಚಿಸಿದರೆ 'ಕನಕರಚನೆಯೊಳ್ ಮಣಿನಿಕರ' ಬೆಸೆದಂತೆ ಅದು ಅನಿಂದ್ಯ ಬಂಧವಾಗಿ ಸೊಗಯಿಸುತ್ತದೆ; ಇಲ್ಲದಿದ್ದರೆ ಕುದಿಯುವ ಹಾಲಿಗೆ ಮಜ್ಜಿಗೆಯನ್ನು ಬೆರೆಸಿದಂತೆ ಆಗುತ್ತದೆ—ಎಂದಿದ್ದಾನೆ. 'ಶ್ರುತ ದುಷ್ಟಂ' 'ಅರ್ಥದುಷ್ಟಂ' 'ಶ್ರುತಿಕಷ್ಟಂ' ಮತ್ತು 'ಕಲ್ಪನೋಕ್ತಿ ದುಷ್ಟಂ' ಎಂದು ನಾಲ್ಕು ಕೃತಿದೋಷಗಳನ್ನು ವಿವರಿಸಿದ್ದಾನೆ.

ನಿಲ್ಲೋಳಂ ಬರ್ಪುದು ಸ
ಯ್ಯುಲ್ಲೂರುಂ [ದೂರಮೆನೆಡೆತುಡಗಪೂರ್ಣರಂ]
ಕಲ್ಲುಲ್ಲಿಂದೋಡುವಮೆಂ
ಬಲ್ಲುಣ್ಣಂ ತಂಪ ಕೂಚನೂಸಂಗಮದೊಳ್ ॥[3]

ಉಲ್ಲಿಂ, ಉಣ್ಣಂ, ಊಸಂಗಮ—ಇವೆಲ್ಲ ಇಲ್ಲಿ ಕೇಳಲು ಅಸಹ್ಯ ರೀತಿಯಲ್ಲಿ ಬಂದಿವೆ. ಯಾರೂ ಈ ಬಗೆಯ ಪದ್ಯವನ್ನು ಒಳ್ಳೆಯ ಕವಿತೆಯೆಂದು ಹೇಳಲಾರರು.

'ಶ್ರುತಿಕಷ್ಟಂ' ಎಂಬುದನ್ನು ವಿವರಿಸುತ್ತ ಅದು 'ಪಗರಣ' ಎಂಬಲ್ಲಿ ಅದೋಷ ಎಂದು ಹೇಳಿ ತನ್ನ ವಿವೇಚನಾ ಶಕ್ತಿಯನ್ನೂ ವೈಶಿಷ್ಟ್ಯವನ್ನೂ ಮೆರೆದಿದ್ದಾನೆ—ಶ್ರೀವಿಜಯ.

---

3 ಕವಿರಾಜಮಾರ್ಗಂ (ಸಂ. ಎಂ.ವೀ.ಸಿ.) I. ೬೩

ದೋಸಮೇನಾನುಂ ಸ್ವಲ್ಪಮಾದೊಡಂ
ಮಾಸಿಸಿರ್ಕುಮಣಂ ಕೃತಿವಧುವಂ
ಪೇಸದೆ ದುರ್ಜನದೊಳಾದ ಪರಿಚಯಂ
ಮಾಸಿಸಿ ಕಿಡಿಸುವವೊಲೊಪ್ಪುವ ಕುಲವಧುವಂ॥3A

ಕುಲಸ್ತ್ರೀಗೆ ದುರ್ಜನರಲ್ಲಿ ಪರಿಚಯ-ಸ್ನೇಹ-ಉಂಟಾದರೆ ಆಕೆಯ ಚಾರಿತ್ರ್ಯಕ್ಕೆ ಹೇಗೆ ಕಳಂಕ ತಗುಲುತ್ತದೋ ಹಾಗೆಯೇ ಏನಾದರೂ ಸ್ವಲ್ಪ ದೋಷವು ಕಾವ್ಯದಲ್ಲಿ ನುಸುಳಿದರೆ ಆ ಕಾವ್ಯದ ಕಾಂತಿ ಕಳಾಹೀನವಾಗುತ್ತದೆ ಎಂದು ಹೇಳಿ ವ್ಯಾಕರಣ ದೋಷಗಳನ್ನು ಕಾರಕದೋಷಗಳು (ವಿಭಕ್ತಿ ದೋಷಗಳು) ವಚನ ದೋಷಗಳು, ಉಚ್ಚಾರ ದೋಷಗಳು, ಸಮುಚ್ಚಯ (ಅಂ, ಉಂ ಇತ್ಯಾದಿ ಪ್ರತ್ಯಯಗಳ) ದೋಷಗಳು ಎಂದು ವಿವರಿಸಿದ್ದಾನೆ; ಉದಾಹರಣೆಗಳನ್ನು ಕೊಟ್ಟಿದ್ದಾನೆ.

ಛಂದೋದೋಷಗಳು: ಕವಿರಾಜಮಾರ್ಗಕಾರ ಕವಿಯು ಪದ್ಯ ರಚನಾ ಶಕ್ತಿಯನ್ನು ಹೀಗೆ ಪ್ರಶಂಸಿದ್ದಾನೆ:

ನುಡಿಯುಂ ಛಂದದೊಳೊಂದಿರೆ
ತೊಡರ್ಚಲಱಿವಾತನಾತನಿಂದಂ ಜಾಣಂ।
ತಡೆಯದೆ ಮಹಾಧ್ವಕೃತಿಗಳ
ನೊಡರಿಸಲಾರ್ಪಾತನೆರಿಲ್ಲಂದುಂ ಬಲ್ಲಂ॥ 4

ಛಂದಸ್ಸಿಗೆ ಅನುಗುಣವಾಗಿ ಬರೆಯುವುದು ಸುಲಭಮಾರ್ಗವಲ್ಲ. ಹಾಗೆಮಾಡಬೇಕಾದರೆ ಭಾಷೆಯ ಮೇಲೆ ಆ ವ್ಯಕ್ತಿಗೆ ಒಳ್ಳೆಯ ಪ್ರಭುತ್ವ ಇರಬೇಕಾಗುತ್ತದೆ. ಕವಿತೆಯನ್ನು ರಚಿಸುವಲ್ಲಿ ಬರುವ ದೋಷಗಳೆಂದರೆ 'ಯತಿಭ್ರಷ್ಟ,' 'ಗುರು ಲಘುಗಳ ಬಳಕೆಯ

3A ಎಂ. ವಿ. ಸೀ. ಸಂಸ್ಕರಣ, I. ೧೧೨, ಪು. ೨೫.
4 ಅದೇ. I. ೧೬, ಪು. ೬.

ದೋಷ' ಮತ್ತು ಭಿನ್ನವೃತ್ತ ಅಥವಾ 'ಭಿನ್ನಪ್ರಸ್ತಾರ ಭಿತ್ತಿ ದೋಷ' ಎಂಬುವು. 'ಯತಿ' ಎಂದರೆ ಏನುಯೆಂಬುದನ್ನು ಮೊದಲು ವಿವರಿಸಿ ಅದು ಕವಿತೆಯಲ್ಲಿ ನಿರ್ದಿಷ್ಟ ಸ್ಥಾನದಲ್ಲಿ ಸಂಸ್ಕೃತದಲ್ಲಿ ಬರಲೇಬೇಕೆಂದು ವಿವರಿಸಿದ್ದಾನೆ.

ಯತಿಯೆಂಬುದುಸಿರ್ವ ತಾಣಂ
ಕೃತಾಸ್ಪದಂ ವೃತ್ತ*ಜಾತಿ ಪದ ಪದ್ಧತಿಯೊಳ್
ಸತತಂ ಛಂದೋವಿದಿತ
ಪ್ರತೀತ ಶಾಸ್ತ್ರೋಕ್ತ* ಮಾರ್ಗದಿಂದಱಿವುದದಂ ॥ . ೭೧

ಕಂದಪದ್ಯದಲ್ಲಿ ಪೂರ್ವೋತ್ತರಾರ್ಧಗಳಲ್ಲಿ ೬ನೆಯ ಗಣ ಸ್ಥಾನದಲ್ಲಿ ಜಗಣ ಅಥವಾ ನ್ಲಗಣವೆ (ಸರ್ವ ಲಘುಗಗಳ ನಲ = UUUU) ಬಂದಿರಬೇಕಲ್ಲದೆ ಆ ಗಣದ ಮೊದಲ ಲಘುವಿನ ಮುಂದೆ ಯತಿ ಇರಬೇಕು. ಯತಿ ಇರದಿದ್ದರೆ ಅಲ್ಲಿ ಯತಿಯನ್ನು ತ್ಯಜಿಸಿದ ಅರ್ಥಾತ್ 'ಯತಿಭ್ರಷ್ಟ' ದೋಷವಿದೆಯೆಂದು ತಿಳಿಯಬೇಕು. 'ಯತಿ' ಎಂದರೆ ಕವಿತೆಯನ್ನು ಓದುವಲ್ಲಿ ವಿರಾಮ ಕೊಡುವ ಸ್ಥಳ "ಶ್ರವ್ಯೋ ವಿರಾಮೋಯತಿಃ."

ವಾಗ್ವಿರಾಮೋ ಯತಿಃ ಸ್ಯಾತ್ ಸಂಸ್ಥಾಪ್ಯತೇ ಶ್ರುತಿಸುಂದರಮ್
ಪಾದಾನ್ತೇ ಸೂಚಿತಸ್ಥಾನೇ ಯುಕ್ಪಾದಾನ್ತೇ ವಿಶೇಷತಃ ॥ [5]

ವರ್ಣವೃತ್ತಗಳಲ್ಲಿ ಎಂದರೆ ಸಂಸ್ಕೃತದ 'ಉಕ್ತೆ'ಯಿಂದ 'ಉತ್ಕೃತಿ' ಯವರೆಗಿನ ಇಪ್ಪತ್ತಾರು ಛಂದಗಳ ಅಂಗವಾಗಿ ಬರುವ ೧೩,೪೨,೧೭,೭೬ ಬಂಧಗಳಲ್ಲಿ ಯಾವ ಸಮವೃತ್ತಕ್ಕೆ ಯಾವ ಸ್ಥಳದಲ್ಲಿ ಯತಿಯಿರಬೇಕೆಂಬುದು ಛಂದಃಶಾಸ್ತ್ರದಲ್ಲಿ ಪೂರ್ವ

---

5 ಜಯದಾಮನ್ (ಸಂ. ಪ್ರೊ. ಎಚ್. ಡಿ. ವೇಲಣಕರ್) ಜಯಕೀರ್ತಿಯ ಛಂದೋನುಶಾಸನ, ಪು. ೪೧.

ಸೂರಿಗಳಿಂದ ನಿಗದಿತ. ಉದಾಹರಣೆಗೆ 'ಮಂದಾಕ್ರಾಂತ' ಎಂಬ ವೃತ್ತದಲ್ಲಿ ನಾಲ್ಕನೆಯ ಹಾಗೂ ಅದರ ಅನಂತರ ಆರು ಅಕ್ಷರ ಗಳಾದ ಮೇಲೆ ಪ್ರತಿಯೊಂದು ಪಾದದಲ್ಲಿಯೂ 'ಯತಿ' ಇರ ಬೇಕು:

ಕಶ್ಚಿತ್ಕಾಂತಾ* ವಿರಹಗುರುಣಾ* ಸ್ವಾಧಿಕಾರಾತ್ ಪ್ರಮತ್ತಃ
ಶಾಪೇನಾಸ್ತಂ ಗಮಿತ ಮಹಿಮಾ ವರ್ಷಭೋಗ್ಯೇಣಭರ್ತುಃ
ಯಕ್ಷಶ್ಚಕ್ರೇ ಜನಕತನಯಾ ಸ್ನಾನಪುಣ್ಯೋದಕೇಷು
ಸ್ನಿಗ್ಧಚ್ಛಾಯಾ ತರುಷುವಸತಿಂ ರಾಮಗಿರ್ಯಾಶ್ರಮೇಷು ॥[6]

ಹೀಗೆಯೇ 'ಮಾಲಿನೀ' ವೃತ್ತದಲ್ಲಿ ೮ನೆಯ ಅಕ್ಷರದಲ್ಲಿ ಯತಿ ಇರಬೇಕು:

ಲಸತಿ ವಸುವಿರಾಮಾ* ಮಾಲಿನೀ ನೌ ಮಯೌ ಯಃ॥[7]

ಆದರೆ ಕವಿರಾಜಮಾರ್ಗದಲ್ಲಿ ಬಂದ ಈ ಮಾಲಿನೀವೃತ್ತವನ್ನು ಇನಿತು ನೋಡಿ:

ಪರಮಸುಖಿಪದ ಶ್ರೀಧರ್ಮ ಕಾಮಾರ್ಥಮೋಕ್ಷ
ಸ್ಥಿರವಿಷಯವಿಶೇಷಾಖ್ಯಾನ ವಿಖ್ಯಾತ ತತ್ವಂ
ಪುರ ಜನಪದ ಶೈಲಾದಿತ್ಯ ಚಂದ್ರೋದಯಾಸ್ತಾಂ
ತರ ಸಮ್ಯಗಗಣವ್ಯಾವರ್ಣನಾ ನಿರ್ಣಯಾರ್ಥಂ॥ III. ೨೦೦

ಇದರಲ್ಲಿ ಯಾವ ಒಂದು ಪಾದದಲ್ಲಿಯೂ ಎಂಟನೆಯ ಅಕ್ಷರದಲ್ಲಿ ಯತಿಯನ್ನು ಪಾಲಿಸಿಲ್ಲ. ಕವಿರಾಜಮಾರ್ಗ ಗ್ರಂಥದಲ್ಲಿ ಒಟ್ಟು ಒಂಬತ್ತು ಮಾಲಿನೀ ವೃತ್ತಗಳು ಬಂದಿದ್ದು ಅವುಗಳಲ್ಲಿ ಎಲ್ಲಿಯೂ 'ಯತಿ' ನಿಯಮವನ್ನು ಪಾಲಿಸಿಲ್ಲ. ಹೀಗೆಯೆ ಇತರ ಅಕ್ಷರ

6 ಕಾಲಿದಾಸ, ಮೇಘಸಂದೇಶಮ್, ಪೂರ್ವಮೇಘ—೧.
7 ಜಯದಾಮನ್, ಜಕೀ, ೨—೧೮೩, ಪು. ೪೭.

ವೃತ್ತಗಳಲ್ಲಿ ಕೂಡ 'ಯತಿ' ಉಲ್ಲಂಘನೆಯನ್ನು ಕಾಣಬಹುದು. ಇದನ್ನೇ ಶ್ರೀ ವಿಜಯ, ಕವಿರಾಜಮಾರ್ಗದಲ್ಲಿ

ದೋಸಮನೆ ಗುಣದವೋಲು
ದ್ಭಾಸಿಸಿ ಕನ್ನಡದೊಳೊಲ್ದು ಪೂರ್ವಾಚಾರ್ಯರ್
ದೇಸಿಯನೆ ನಿಜಿಸಿ ಖಂಡ
ಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್ ॥

ಎಂದು ಹೇಳಿದ್ದಾನೆ. ಖಂಡಪ್ರಾಸ (ದ್ವಿತೀಯಾಕ್ಷರಪ್ರಾಸ), ಕನ್ನಡದ ದೇಸಿ. ಅದು ಕನ್ನಡಕ್ಕೆ ನಿಯತ. ಆದರೆ ಸಂಸ್ಕೃತ ದಲ್ಲಿರುವ 'ಯತಿ' ನಿಯಮ[8] ಅತಿಶಯವಿದೆಂದು ಹೇಳಿ ಪೂರ್ವಾ ಚಾರ್ಯರು (ಶ್ರೇಷ್ಠ ಕನ್ನಡ ಕವಿಗಳು) ಯತಿಯನ್ನು ತಮ್ಮ ಕವಿತಾ ರಚನಾ ವಿನ್ಯಾಸದಲ್ಲಿ ಪಾಲಿಸದೆ ಬಿಟ್ಟರು. ದೋಷವನ್ನೂ ಅವರು ಗುಣವೆಂದೇ ಭಾವಿಸಿದರು ಎಂದು ಹೇಳಿದ್ದಾನೆ. ಕವಿರಾಜ ಮಾರ್ಗದ ನಾಂದೀ ಪದ್ಯಗಳಲ್ಲಿ—

ಶ್ರೀ ತಳ್ತುರದೊಳ್ ಕೌಸ್ತುಭ
ಜಾತದ್ಯುತಿ ಬಳಸಿ* ಕಾಂಡಪಟದಂತಿರೆ ಸಂ
ಪ್ರೀತಿಯಿನಾವನನಗಲಳ್
ನೀತಿನಿರಂತರನುದಾರನಾ ನೃಪತುಂಗಂ ॥
ಕೃತಕೃತ್ಯಮಲ್ಲನಪ್ರತಿ
ಹತವಿಕ್ರಮನೊಸೆದು* ವೀರನಾರಾಯಣನ
ಪ್ರತಿಶಯಧವಳಂ ನಮಗೀ
ಗತರ್ಕಿತೋಪಸ್ಥಿತ ಪ್ರತಾಪೋದಯಮಂ ॥

---

8 ಸಂಸ್ಕೃತದಲ್ಲಿಯೂ 'ಯತಿ' ಐಚ್ಛಿಕ ಎಂಬೊಂದು ಅಂಶವನ್ನೂ ನಾನು ಬಲ್ಲೆ:

ವಾಂಛಂತಿ ಯತಿ ಪಿಂಗಲ । ವಸಿಷ್ಠ ಕೌಂಡಿನ್ಯ ಕಪಿಲ ಕಂಬಲ ಮುನಯಃ
ನೇಚ್ಛಂತಿ ಭರತ ಕೋಹಲ । ಮಾಂಡವ್ಯಾಶ್ವತರ ಸೈತವಾದ್ಯಾಃ ಕೇಚಿತ್ ॥
ಜ.ಕೀ. ೧-೧೩

ಪೂರ್ವಾರ್ಧದಲ್ಲಿ ಯತಿಯನ್ನು ಪಾಲಿಸಿದ್ದರೆ ಉತ್ತರಾರ್ಧದಲ್ಲಿ ಯತಿಯನ್ನು ಬಿಕ್ಕಿದುದು ಸ್ಪಷ್ಟ. ಇನ್ನು ಪ್ರಾಸದ ಬಗ್ಗೆ ಕವಿರಾಜ ಮಾರ್ಗಕಾರನೇ ಛಂದದ ಅಂಗವೆಂದು ಪರಿಗಣಿಸದೆ ಶಬ್ದಾಲಂಕಾರದಲ್ಲಿ ಅದನ್ನು ವಿವರಿಸಿದ್ದಾನೆ.

ಅಲಂಕಾರದೋಷಗಳು: ಕಾವ್ಯಕ್ಕೆ ಸೌಂದರ್ಯವನ್ನು ಉಂಟುಮಾಡುವುದೇ ಅಲಂಕಾರ. ಅದು ಕವಿತೆಯ ಶರೀರದಲ್ಲಿ ಹೊಳೆಯುತ್ತಿರುತ್ತದೆ. ಹೇಳುವ ಉಕ್ತಿಯಲ್ಲಿ ಇನಿತು ದೋಷ ಬಂದರೆ ಅಲಂಕಾರ ಕೆಡುತ್ತದೆ. ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಸಾದೃಶ್ಯಸಂಪತ್ತನ್ನು ವಿವರಿಸುವ ವಿಧಾನವೇ ಅಲಂಕಾರ. ಅರ್ಥಾಲಂಕಾರಗಳಲ್ಲಿ ಅನೇಕಕ್ಕೆ ಸಾದೃಶ್ಯವೇ ಮೂಲ. ಆದುದರಿಂದ ವಾಮನನು ಅವುಗಳನ್ನು ಉಪಮಾ ಪ್ರಪಂಚವೆಂದೇ ಹೇಳಿದ್ದಾನೆ. ಈ ಪ್ರಪಂಚದಲ್ಲಿಯ ಉಪಮಾನ ಉಪಮೇಯ ವಸ್ತುಗಳಲ್ಲಿ ಸಂಬಂಧವನ್ನು ಕಲ್ಪಿಸುವ ಅಂತೆ, ಅಂತಿರೆ, ಪೋಲ್ ಅಂತೆವೋಲ್ ಮುಂತಾದುವು ನಿರ್ದಿಷ್ಟವಾಗಿ ಬರದಿದ್ದಲ್ಲಿ ಈ ದೋಷಗಳು ತಲೆದೋರುತ್ತವೆ. ಈ ದೋಷಗಳ ಸಂಖ್ಯೆ ಲೆಕ್ಕಕ್ಕೆ ಮೀರಿದ್ದು:

> ಅಪರಿಮೇಯಮೆ ದೋಷ ಗಣೌಘಮಿಂ
> ತುಪಚಿತ ಕ್ರಮದಾರಯೆ ಕಾವ್ಯದೊಳ್ ।
> ವಿಪುಳವೃತ್ತಿಯೊಳೊಂದಿರೆ ಪೇಟ್ಟಿನ
> ಭೂಪಗವೋಕ್ತಿ ಗುಣಾವಗುಣಾಂಗಳಂ ॥ I. ೧೪೨

ಹೀಗೆ ಹೇಳಿ ಒಂದು ಉದಾಹರಣೆಯನ್ನು ಕೊಟ್ಟಿದ್ದಾನೆ:

> ಪೊಳೆವ ಮಿಂಚುಗಳಂತಿರೆ ಕೇತುಗಳ್
> ಜಳದ ವೃಂದದವೋಲಿರೆ ಹಸ್ತಿಗಳ್
> ಗಳಿತ ಧಾರೆಗಳಂತಿರೆ ಪತ್ತಿಗಳ್
> ಬಳಸಿ ಕಾರ್ಗ್ಗಣೆಯಾಯ್ತು ಮಹಾಹವಂ ॥I. ೧೪೩

ಇಲ್ಲಿನ ಎರಡನೆಯ ಪಾದದಲ್ಲಿ 'ಪೋಲಿರೆ' ಎಂಬಲ್ಲಿ ಉಪಮಾವಾಚಕದೋಷವಿದೆ. ಹಳಗನ್ನಡದಲ್ಲಿ ಪರಿಶ್ರಮವಿಲ್ಲದವರಿಗೆ ಈ ದೋಷ ಕಾಣದೆ ಹೋಗುವುದು ಸಹಜ. ಆದರೆ ಇದನ್ನು "ಜಳದವೃಂದದ ಅಂತಿರೆ ಹಸ್ತಿಗಳ್" ಎಂದು ತಿದ್ದಿಕೊಳ್ಳಬಹುದು. ಪ್ರತಿಜ್ಞಾ-ಹೇತು-ದೃಷ್ಟಾಂತ-ಹೀನ ಎಂಬ ದೋಷಗಳಲ್ಲಿ ಇವು ವಿಲೀನವಾಗಿ ಹೋಗಬಹುದು. ಮೇಲಾಗಿ ಇದು ಭಾವನೆಯನ್ನು ವ್ಯಕ್ತಮಾಡುವಲ್ಲಿ ಸ್ವತಃ ಸಮರ್ಥವೇ ಆಗಿರುವುದರಿಂದ ದೋಷವಿಲ್ಲವೆಂದು ಯಾರಾದರೂ ಹೇಳಿದರೆ ಸಾಧಿಸಿ ತೋರಿಸಲು ಶಾಸ್ತ್ರಕಾರ ಪ್ರಯಾಸಪಡಬೇಕಾಗುತ್ತದೆ. ಅಂತೆಯೆ ಇಲ್ಲಿ ಶ್ರೀವಿಜಯ ದಂಡಿಯನ್ನೇ ಅನುಸರಿಸಿ ಅವನ್ನು ಹೆಚ್ಚು ವಿವರಿಸುವಗೊಡವೆಗೆ ಹೋದಂತಿಲ್ಲ. ಆ ಮಾತುಗಳನ್ನೇ ಅತ ವಿವರಿಸಿಲ್ಲ ಎಂದು ಹೇಳಿದರೂ ತಪ್ಪಾಗದು.

II

ಎರಡನೆಯ ಪರಿಚ್ಛೇದದಲ್ಲಿ ಶ್ರೀವಿಜಯನು ಕಾವ್ಯವಧುವಿನ ಶರೀರದ ಕಾಂತಿಯನ್ನು ಶೋಭಾಯಮಾನವಾಗಿ ಮಾಡುವ ಗುಣಗಳನ್ನು ಎಂದರೆ ಅಲಂಕಾರಗಳನ್ನು ಹೇಳಲು ಆರಂಭಿಸಿ ಅಲಂಕಾರ ವಿಭಾಗವನ್ನು 'ಶಬ್ದಾಲಂಕಾರ' ಮತ್ತು 'ಅರ್ಥಾಲಂಕಾರ' ಎಂದು ವಿಭಜಿಸಿದ್ದಾನೆ. ಕವಿಯಾದವನು ಕಾವ್ಯ ರಚಿಸುವಲ್ಲಿ ಇಲ್ಲಿಗೆ ಈ ಶಬ್ದ ತಕ್ಕುದು. ಇಲ್ಲಿಗೆ ಈ ಶಬ್ದ ತಕ್ಕುದಲ್ಲ ಎಂದು ಮಾಲೆಗಾರ ಹೂಗಳನ್ನು ಆರಿಸಿ ಆರಿಸಿ ಕಟ್ಟುವಂತೆ ಶಬ್ದ ಸಂದೋಹವನ್ನು ಹೆಕ್ಕಿ ಹೆಕ್ಕಿ ಜೋಡಿಸಿ ಹೆಣೆಯುತ್ತಾನೆ ಎಂದು ಕಾವ್ಯ ರಚನೆಯ ಪದ್ಧತಿಯನ್ನು ವಿವರಿಸಿದ್ದಾನೆ. ಹಾಗೆ ಜೋಡಿಸದೆ ಇದ್ದರೆ ಕಾವ್ಯದಲ್ಲಿಯ ಶಬ್ದಗಳು ನೆಲ್ಲು (ಛತ್ರ) ಮತ್ತು ಮೊಸರು ಇವುಗಳನ್ನು

ಕಲೆಸಿಕೊಟ್ಟಂತೆ ಆಗುತ್ತದೆ. ಆ ಮಿಶ್ರಣ, ಯಾರ ಸೇವನೆಗೂ ಅಯೋಗ್ಯವೆಂದು ಬೇರೆ ಹೇಳಬೇಕೆ?

ಇಲ್ಲಿಗಿದು ತಕ್ಕುದಿಲ್ಲಿಗೆ
ಪೊಲ್ಲದಿದೆಂದಱಿದು ಸಮೆಱೆ ಬಲ್ಲಂತೆಲ್ಲಂ ॥
ನೆಲ್ಲುಂ ಮೊಸರುಂ ಗುಡಿದಂ
ತಲ್ಲದೆ ತಲ್ಲಣಿಸದಲಸದಿದು ಮೃಗುಪದಮುಂ[9] ॥ II. ೪

ಕ್ರಿಯೆ, ಕ್ರಿಯಾ ವಿಶೇಷಣ–ಇವೆಲ್ಲ ಒಂದರ ಜೊತೆಗೆ ಇನ್ನೊಂದು ಸುಭಗ ಗತಿಯಲ್ಲಿ ಹೊಂದಿಕೊಂಡಿರಬೇಕು; ಒಂದು ಕ್ರಿಯಾಪದಕ್ಕೆ ಎರಡು ಕ್ರಿಯಾವಿಶೇಷಣಗಳನ್ನು ಬಳಸಿದರೆ ಒಂದು ಕರುವನ್ನು ಎರಡು ಹಸುಗಳಿಗೆ ಬಿಟ್ಟಂತೆ ಆಗುತ್ತದೆ ಎಂದಿದ್ದಾನೆ.[10]

ಇನ್, ಅಂತೆ, ಮತ್ತೆ, ಬೞಿ, ಮಿಗೆ, ಮುಂ, ನಿಲೆ, ತಾಂ, ಮೇಣ್, ಪೆಱಂ, ಗಡಂ, ಗಳಂ, ಆದಂ, ಕೆಂನ್ನಂ, ನಿಲ್—ಮುಂತಾದ ಶಬ್ದಗಳನ್ನು ಎಂದೂ ಅಲ್ಲದ ಎಡೆಗಳಲ್ಲಿ ಇರಿಸಲು ಕಲಿಯ

---

9 ಭಾಮಹನ ಈ ಕೆಳಗಿನ ಪದ್ಯ ಇದಕ್ಕೆ ಆಧಾರ:

ಏತದ್ಗ್ರಾಹ್ಯಂ ಸುರಭಿಕುಸುಮಂ ಗ್ರಾಮ್ಯಮೇತನ್ನಿಧೇಯಮ್
ಧತ್ತೇ ಶೋಭಾಂ ವಿರಚಿತಮಿದಂ ಸ್ಥಾನಮಸ್ಯೈತದಸ್ಯ
ಮಾಲಾಕಾರೋ ರಚಯತಿ ಯಥಾ ಸಾಧು ವಿಜ್ಞಾಯ ಮಾಲಾಂ
ಯೋಜ್ಯಂ ಕಾವ್ಯೇಷ್ವವಹಿತಧಿಯಾ ತದ್ವದೇವಾಭಿಧಾನಮ್ ॥

—ಕಾ. I ೫೯

[ಈ ಸುವಾಸನೆಯ ಹೂವನ್ನು ಇಲ್ಲಿ ಸೇರಿಸಬೇಕು, ಈ ಗ್ರಾಮ್ಯವಾದುದನ್ನು ಕೆಳಗೆ ಬಿಡಬೇಕು; ಇವನ್ನು ಸೇರಿಸಿದರೆ ಸೊಗಸು ಹೆಚ್ಚುತ್ತದೆ; ಇದಕ್ಕೆ ಇದೇ ಸರಿಯಾದ ಸ್ಥಳವೆಂದು ಮಾಲೆಗಾರನು ವಿಚಾರಮಾಡಿ ಹೂಮಾಲೆಯನ್ನು ಕಟ್ಟುವಂತೆ ಶಬ್ದಾರ್ಥಗಳನ್ನು ಕವಿ ಕಾವ್ಯವನ್ನು ಕಟ್ಟುವಲ್ಲಿಯೂ ಎಚ್ಚರಿಕೆಯಿಂದ ಯೋಚಿಸಿ ರಚಿಸಬೇಕು.]

10 ಕ.ರಾ.ಮಾ. II ೬, ಪು. ೨೫.

ಬಾರದು ಯೆಂದು ಸೂಚಿಸಿದ್ದಾನೆ:

ಇಂನಂತೆ ಮತ್ತೆ ಬಜಿ಼ ಮಿಗೆ
ಮುಂ ನಿಲೆ ತಾಂ ಮೋಕ್ಷೆಜಿಂ ಗಡು ಗಳಮಾದಂ
ಕೆಂನ್ನಂ ನಿಲ್ಲೆಂದಿವನೆಂ
ದುಂ ನಿಜಿ಼ಸಲ್ಕಲ್ಲದೆಡೆಗಳೊಳ್ಕಲ್ಲದಿರಿಂ ॥

ಶಬ್ದಾಲಂಕಾರಗಳನ್ನು ಹೇಳುತ್ತೇನೆಯೆಂದು ಹೇಳಿದರೂ ಆ ಶಬ್ದಗಳ ಎಲ್ಲ ಬಗೆ–ಅರ್ಥ–ನಾದಮಾಧುರ್ಯ ಇತ್ಯಾದಿಗಳನ್ನೂ ಆನುಂಷಂಗಿಕವಾಗಿ ವಿಶೇಷತಃ ದಂಡಿಯನ್ನು ಅನುಸರಿಸಿ ಹೇಳಿದ್ದಾನೆ. ಶಬ್ದಾಲಂಕಾರವನ್ನು ಭರತ ಭಾಮಹರು ಹೇಳಿದ್ದಾರೆ. ಭರತನು 'ಯಮಕ' ಒಂದನ್ನೇ ಅಲಂಕಾರ ಎಂದು ಹೇಳಿದ್ದರೆ ಭಾಮಹನ ಕಾಲಕ್ಕಾಗಲೇ 'ಅನುಪ್ರಾಸ' ಎಂಬುದೊಂದು ಶಬ್ದಾಲಂಕಾರದಲ್ಲಿ ಸೇರಿಕೊಂಡಿತ್ತು:

ಅನುಪ್ರಾಸಃ ಸಯಮಕೋ ರೂಪಕಂ ದೀಪಕೋಪಮೇ ।
ಇತಿವಾಚಾಮಲಂಕಾರಾಃ ಪಂಚೈವಾನ್ಯೈರುದಾಹೃತಾಃ ॥

ಭಾಮಹನು ಬೇರೆಯವರು ಈ ಐದನ್ನೇ ಅಲಂಕಾರಗಳೆಂದು ಹೇಳಿದ್ದಾರೆ ಎಂದು ಹೇಳಿ ತಾನು ತನ್ನ ಕಾಲಕ್ಕೆ ಇದ್ದ ಅಲಂಕಾರಗಳನ್ನು ವಿವರಿಸಿದ್ದಾನೆ. ಅವುಗಳ ಸಂಖ್ಯೆ ೩೫. ದಂಡಿ. ಉದ್ಭಟ. ವಾಮನ ಹಾಗೂ ಕವಿರಾಜಮಾರ್ಗಕಾರನಾದ ಶ್ರೀವಿಜಯ ಇವರೆಲ್ಲರೂ ಇದೇ ಸಂಖ್ಯೆಯನ್ನು ಹೇಳಿದ್ದಾರೆ[11]. ರುದ್ರಟ. ಮಮ್ಮಟ. ನಾಗವರ್ಮ—ಇವರು ಅಲಂಕಾರಗಳು ೬೦ ಎಂದಿದ್ದಾರೆ. ಜಯದೇವನು ಚಂದ್ರಾಲೋಕದಲ್ಲಿ ಅಲಂಕಾರಗಳು ೧೦೦ ಎಂದಿದ್ದಾನೆ. ಕುವಯಲಾನಂದಕಾರನಾದ ಅಪ್ಪಯ್ಯ ದೀಕ್ಷಿತ

---

11 ಕವಿರಾಜಮಾರ್ಗದಲ್ಲಿ 'ಧ್ವನಿ'ಕೂಡ ಅಲಂಕಾರವೆಂದೇ ಹೇಳಿರುವದರಿಂದ ಅಲಂಕಾರಗಳ ಸಂಖ್ಯೆ ಅವನ ಪ್ರಕಾರ ೩೬. ಆದರೆ 'ಧ್ವನಿ' ಇದು ಅಲಂಕಾರವೆ?—ಇದು ವಿಚಾರಣೀಯ.

ಮತ್ತು ಅಪ್ರತಿಮ ವೀರಚರಿತೆಯ ತಿರುಮಲಾರ್ಯ ಅಲಂಕಾರಗಳು ೧೨೦ ಎಂದು ವಿವರಿಸಿದ್ದಾರೆ. ದಂಡಿಯೇ—

ಕಾವ್ಯಶೋಭಾಕರಾನ್ ಧರ್ಮಾನಲಂಕಾರಾನ್ ಪ್ರಚಕ್ಷತೇ
ತೇಚಾದ್ಯಾಪಿ ವಿಕಲ್ಪ್ಯಂತೇ ಕಸ್ತಾನ್ ಕಾರ್ತ್ಸ್ನ್ಯೇನ ವಕ್ಷ್ಯತಿ ॥

[ಕಾವ್ಯಕ್ಕೆ ಶೋಭೆಯನ್ನು ಕೊಡುವ ಧರ್ಮಗಳನ್ನು ಅಲಂಕಾರಗಳೆನ್ನುವರು. ಇಂದಿಗೂ ಕೂಡ ಅವುಗಳಲ್ಲಿ ಹೊಸಹೊಸದಾಗಿ ಪ್ರಕಾರಭೇದಗಳನ್ನು ಸೃಷ್ಟಿಸುತ್ತಲೇ ಇದ್ದಾರೆ. ಅವುಗಳೆಲ್ಲವನ್ನು ಬಿಡದೆ ವಿವರಿಸಲು ಯಾರಿಗೆ ಸಾಧ್ಯ?] ಎಂದು ಪ್ರಶ್ನಿಸಿ ಬೀಜರೂಪದ ಕೆಲವು ತತ್ವಗಳನ್ನು ಮಾತ್ರ ವಿವರಿಸುವುದಾಗಿ ಹೇಳಿದ್ದಾನೆ. ಅವನಿಗೆ ಗುಣಗಳು, ಅಲಂಕಾರಗಳು—ಎಲ್ಲವೂ ಅಲಂಕಾರಗಳೇ. ಅವನ ಪಂಥವನ್ನು ಅನುಸರಿಸಿರುವ ಕವಿರಾಜಮಾರ್ಗಕಾರನಿಗೂ ಅವು ಮಾನ್ಯವೇ. ಕವಿರಾಜಮಾರ್ಗಕಾರ ಭಾಮಹನ ಹಾಗೆ ಶಬ್ದಶುದ್ಧಿಯನ್ನು ಮೊದಲು ಹೇಳಿ ಅನಂತರ ಶಬ್ದಾಲಂಕಾರದಲ್ಲಿ ಕನ್ನಡಕ್ಕೆ 'ಪ್ರಾಸ' ಸತತವಾಗಿ ಇರಬೇಕಾದದ್ದೆಂದು ನುಡಿದು ಅದರ ಪ್ರಪಂಚವನ್ನು ವಿಸ್ತರಿಸಿದ್ದಾನೆ. 'ವಿನುತಪ್ರಾಸ' 'ಕಾಂತಪ್ರಾಸ' 'ಉಪನತಪ್ರಾಸ' 'ವರ್ಗೋದಿತಪ್ರಾಸ' 'ಸಮೀಪಗತ ಪ್ರಾಸ' 'ಅನುಗತಪ್ರಾಸ' ಮತ್ತು 'ಅಂತಗತ ಪ್ರಾಸ' ಎಂದು ಆರು ಪ್ರಕಾರದ ಪ್ರಾಸಗಳನ್ನು ವಿವರಿಸಿದ್ದಾನೆ. ಭಾಮಹನು 'ಅನುಪ್ರಾಸ' ಹಾಗೂ ಅದರಲ್ಲಿ 'ಗ್ರಾಮ್ಯಾನುಪ್ರಾಸ' ಮತ್ತು 'ಲಾಟಾನುಪ್ರಾಸ' ಎಂಬುದನ್ನು ಮಾತ್ರ ಹೇಳಿದ್ದರೂ ದಂಡಿಯು ಕೇವಲ 'ಅನುಪ್ರಾಸ'ವೊಂದನ್ನೇ ಹೇಳಿದ್ದರೂ ಈ ಆವೃತ್ತಿಯೆ ಸಮುದಾಯರೂಪದಲ್ಲಿ ಮತ್ತೆ ಮತ್ತೆ ಬಂದರೆ 'ಯಮಕ' ಆಗುತ್ತದೆಯೆಂದು ವಿವೇಚಿಸಿದ್ದರೂ ಶ್ರೀವಿಜಯ ಆರುಬಗೆಯ ಪ್ರಾಸಗಳನ್ನು ಹೇಳಿರುವುದು ಬಹಳ

ಆಶ್ಚರ್ಯದ್ದಾಗಿದೆ. ಕನ್ನಡದಲ್ಲಿ ಈ ಬಗೆಯ ಹೇಳಿಕೆಗಳನ್ನು ಯಾರಾದರೂ ಪೂರ್ವಸೂರಿಗಳು ಹೇಳಿದ್ದರೆ, ಇದು ವಿಚಾರಣೀಯ; ಏಕೆಂದರೆ ಆರು ಪ್ರಾಸವಿಧಾನಗಳಲ್ಲಿ ಮೂರು ಸಹಜ ಮತ್ತು ಉಳಿದ ಮೂರು 'ಪ್ರಾಸಾಭಾಸಗಳು' ಎಂದು ಅವನೇ ಹೇಳಿದ್ದಾನೆ! ನೋಡಿ:

ಪ್ರಾಸಾನುಪ್ರಾಸಾಂತ
ಪ್ರಾಸಂಗಳ್ಮೂಱುಮತಿಶಯಂಗಳ್ಪ್ರಾಸಾ ।
ಭಾಸಂಗಳುೞಿದ ಮೂಱುಂ
ಭಾಸುರ ನೃಪತುಂಗದೇವ ವಿದಿತಕ್ರಮದಿಂ ॥ II. ೪೩

'ವೈದರ್ಭ' 'ಗೌಡೀ' ಎಂಬ ಮಾರ್ಗಗಳು ಭಾಮಹನಿಗಿಂತಲೂ ಪೂರ್ವದಲ್ಲಿಯೆ ಪ್ರಚಲಿತವಿದ್ದವು[12]. ವಸ್ತುತಃ ಪ್ರತಿಯೊಬ್ಬ ವ್ಯಕ್ತಿಯೂ ಬರೆಯುವ ಪದ್ಧತಿ, ಶೈಲಿ, ಬೇರೆ ಬೇರೆಯೆ ಆಗಿರುತ್ತದೆ. ಅದನ್ನೇ 'ಮಾರ್ಗ' 'ರೀತಿ' ಇತ್ಯಾದಿ ಶಬ್ದಗಳಿಂದಲೂ ಗುರುತಿಸುವುದುಂಟು. ಮಾತುಗಳ ಮಾರ್ಗ ಅನೇಕ. ಬಹುವಿಧವಾಗಿರುವ ಅದನ್ನು ನಿಶ್ಚಯಿಸಿ ಹೇಳಲು ಆರಿಗೂ ಅಸಾಧ್ಯ. ಪೂರ್ವಕವಿಗಳು ನಿಗದಿತಪಡಿಸಿದ 'ದಕ್ಷಿಣ' ಹಾಗೂ "ಉತ್ತರ" ಮಾರ್ಗ ಎಂಬ ಎರಡು ಮಾರ್ಗಗಳನ್ನು ವಿಶದವಾಗಿ ಶ್ರೀವಿಜಯ ವಿವರಿಸಿದ್ದಾನೆ. ವಾಸ್ತವವಾಗಿ 'ದಕ್ಷಿಣ' ಎಂದರೆ 'ವೈದರ್ಭ' ಎಂದೂ 'ಉತ್ತರ < ಅದಾಕ್ಷಿಣಾತ್ಯ' ಎಂದರೆ

---

12 ವೈದರ್ಭಮನ್ಯದಸ್ತೀತಿ ಮನ್ಯನ್ತೇ ಸುಧಿಯೋಽಪರೇ
ತದೇವ ಚ ಕಿಲ ಜ್ಯಾಯಃ ಸದರ್ಥಮಪಿ ನಾಪರಮ್ ॥
ಗೌಡೀಯಮಿದಮೇತತ್ತು ವೈದರ್ಭಮಿತಿ ಕಿಂ ಪೃಥಕ್
ಗತಾನುಗತಿಕ ನ್ಯಾಯಾತ್ ನಾನಾಖ್ಯೇಯಮಮೇಧಸಾಮ್ ॥
ಕಾವ್ಯಾಲಂಕಾರ I. ೩೧ ಮತ್ತು ೩೨

'ಗೌಡೀ' ಎಂದೂ ಶ್ರೀವಿಜಯನಿಗಿಂತ ಮೊದಲು ದಂಡಿಯೇ ಕಾವ್ಯಾದರ್ಶದಲ್ಲಿ ಹೇಳಿದ್ದಾನೆ[13]. ದಂಡಿ ಭಾಮಹರ 'ವೈದರ್ಭ ಮತ್ತು ಗೌಡೀ' ಎಂಬ ಪದಗಳನ್ನು ಕವಿರಾಜಮಾರ್ಗದಲ್ಲಿ ಎಲ್ಲಿಯೂ ಬಳಸಿಲ್ಲ. ಆಂತೆಯೆ ಕನ್ನಡದ ಪ್ರಾಂತಭೇದಗಳು ಇವು ಎಂಬ ತಪ್ಪುಕಲ್ಪನೆಗೂ ಆಸ್ಪದವಾಗಿದೆ—ಕನ್ನಡದ ವಿದ್ವಾಂಸರಲ್ಲಿ: ಕನ್ನಡ ಕೈಪಿಡಿ ಭಾಷಾಚರಿತ್ರೆ ಪು. ೩೨೦ (೧೯೬೫)

ಕವಿಗಳಿದ್ದಷ್ಟು ಶೈಲಿಗಳು. ಒಬ್ಬರ ಶೈಲಿಯಿಂದ ಇನ್ನೊಬ್ಬರ ಶೈಲಿಯಲ್ಲಿರುವ ಭೇದಗಳು ಸೂಕ್ಷ್ಮತರ. ಅವನ್ನು ಗುರುತು ಮಾಡಿ ಹೀಗೆ ಹೀಗೆ ಎಂದು ಹೇಳುವುದು ಬಹಳ ಕಷ್ಟಕರ. ಪ್ರಾಯಃ ಸರಸ್ವತಿಗೂ ಅಶಕ್ಯ ಎಂದಿದ್ದಾನೆ ದಂಡಿ. ಅದನ್ನೇ ಕವಿರಾಜಮಾರ್ಗಕಾರನು ಇನಿತು ಬೇರೆ ವಿಧದಲ್ಲಿ ಹೇಳಿದ್ದಾನೆ ;

> ಕವಿಗಳುಮನಾದಿಲೋಕೋ
> ದ್ಭವರಪ್ಪುದಱಿಂದನಂತಗಣನಾನುಗತಂ
> ಸವಿಶೇಷೋಕ್ತಿಗಳುಮನಂ
> ತವಿಧಂಗಳನಂತಭೇಧವದಱಿಂ ಮಾರ್ಗಂ ‖ II. ೪೭

ಹೀಗೆ ಹೇಳಿಯೂ ದಂಡಿಯಂತೆಯೆ ದಕ್ಷಿಣ (ವೈದರ್ಭ) ಮತ್ತು 'ಉತ್ತರ' (ಗೌಡೀ) ಮಾರ್ಗಗಳಿಗೆ ಇರುವ ಲಕ್ಷಣಗಳನ್ನು ವಿಶದವಾಗಿ ವಿಸ್ತರಿಸಿದ್ದಾನೆ. ದಕ್ಷಿಣ ಮಾರ್ಗಕ್ಕೆ 'ಸಮ' 'ಮಧುರ' 'ನಿಬಿಡ' 'ಕಾಂತ' 'ಸುಕುಮಾರ' 'ಸುಸಮಾಹಿತ' 'ಪ್ರಸನ್ನ' 'ಉದಾರ' 'ಪ್ರಮಿತಗ್ರಾಮ್ಯ' ಮತ್ತು 'ಓಜಸ್ವಿ' ಎಂಬುವು ಕ್ರಮವಾಗಿ ದಶಭೇಧಗಳು-ಎಂದಿದ್ದಾನೆ; ಇವುಗಳ ವಿಪರ್ಯಯವೇ

---

13 ಕಾವ್ಯಾದರ್ಶ I. ೬೦ ಮತ್ತು ೮೦; "ನೈವಮನುಪ್ರಾಸಂ ದಾಕ್ಷಿಣಾತ್ಯಾಃ ಪ್ರಯುಂಜತೇ" ಮತ್ತು "ಪದ್ಯೇಷ್ವಽದಾಣಾಕ್ಷಿಣಾತ್ಯಾನಾಮಿದಮೇಕಂ ಪರಾಯಣಂ" ಎಂಬ ವಾಕ್ಯಗಳನ್ನು ಗಮನಿಸಿ.

'ಉತ್ತರ ಮಾರ್ಗ'ದ ಲಕ್ಷಣ ಎಂದೂ ಹೇಳಿದ್ದಾನೆ. ಇದು ದಂಡಿಯು :

ಶ್ಲೇಷಃ ಪ್ರಸಾದಃ ಸಮತಾ ಮಾಧುರ್ಯಂ ಸುಕುಮಾರತಾ
ಅರ್ಥವ್ಯಕ್ತಿರುದಾರತ್ವಮೋಜಃ ಕಾಂತಿ ಸಮಾಧಯಃ ॥
ಇತಿ ವೈದರ್ಭ ಮಾರ್ಗಸ್ಯ ಪ್ರಾಣಾ ದಶಗುಣಾಃ ಸ್ಮೃತಾಃ
ಏಷಾಂ ವಿಪರ್ಯಃ ಪ್ರಾಯೋ ದೃಶ್ಯತೇ ಗೌಡವರ್ತ್ಮನಿ ॥ I. ೪೧. ೪೨

[ಶ್ಲೇಷ, ಪ್ರಸಾದ, ಸಮತಾ, ಮಾಧುರ್ಯ, ಸುಕುಮಾರತಾ, ಅರ್ಥವ್ಯಕ್ತಿ, ಉದಾರತ್ವ, ಓಜಸ್ಸು, ಕಾಂತಿ ಮತ್ತು ಸಮಾಧಿ— ಈ ಹತ್ತು ಗುಣಗಳೂ ವೈದರ್ಭ ಮಾರ್ಗದ ಪ್ರಾಣಗಳೆಂದು ತಿಳಿಯುತ್ತಾರೆ. ಪ್ರಾಯಃ ಇವುಗಳ ವಿಪರ್ಯಾಸವೇ ಗೌಡ ಮಾರ್ಗದಲ್ಲಿ ಕಾಣಬರುತ್ತದೆ.]—ಎಂಬ ಮಾತುಗಳ ಅನುವಾದ ವೆಂದರೆ ತಪ್ಪಾಗದು. ಕವಿರಾಜಮಾರ್ಗಕಾರ 'ಸ್ವಭಾವೋಕ್ತಿ' ದಕ್ಷಿಣ ಮಾರ್ಗದ ಲಕ್ಷಣವೆಂದೂ 'ವಕ್ರೋಕ್ತಿ' ಉತ್ತರ ಮಾರ್ಗದ ಲಕ್ಷಣವೆಂದೂ ಒಂದು ಹೊಸಮಾತನ್ನೂ ಹೇಳಿದ್ದಾನೆ. ಅಷ್ಟೇ ಅಲ್ಲ ಈ ದಶಗುಣಗಳಲ್ಲೇ ವೀರ, ಕರುಣ, ಅದ್ಭುತ, ಶೃಂಗಾರ, ಶಾಂತ (ಪ್ರಶಾಂತ), ಹಾಸ್ಯ, ಬೀಭತ್ಸ, ಭಯಾನಕ ಮತ್ತು ರೌದ್ರ ಎಂಬ ನವರಸಗಳನ್ನೂ ಹೇಳಲು ಸಾಧ್ಯವೆಂದೂ ವಿವರಿಸಿದ್ದಾನೆ[14].

ಮತ್ತೆ:

ಅನುಪಮನಂ ಬರಿಪ್ಪೆನನುರಾಗದೆ ನಲ್ಲನನಿಂದು ಮಿಕ್ಕನಂ
ದನವನದಲ್ಲಿಗಲ್ಲಿಗೆ ತರಿಪ್ಪೆನನಂಗ ಸುಖೋಚಿತಂಗಳಾ
ಸನುಸಯದಿಂದಿರಿಪ್ಪೆನಿಸಿತುಂ ಸುರತಾಸವ ಸೇವನಾ ಸನಾ
ತನಸುಖದಿಂದಿರಿಪ್ಪೆನನುರಾಗದಿನೆಂಬುದಿದುತ್ತರೋತ್ತರಂ ॥ (II. ೧೦೪)

ಎಂಬಲ್ಲಿ ಶ್ರೀವಿಜಯ 'ದಕ್ಷಿಣ' 'ಉತ್ತರ' ಮಾರ್ಗಗಳ ಜೊತೆಗೆ ಇನ್ನೊಂದು 'ಉತ್ತರೋತ್ತರಮಾರ್ಗ' ಎಂಬುದನ್ನೂ ಹೇಳಿ

---

14 ಕವಿರಾಜಮಾರ್ಗ II. ೯೬–೯೮.

ದ್ದಾನೆ. ಇದನ್ನು ನಾನು 'ಪಾಂಚಾಲೀ' ಮಾರ್ಗದ ಜೊತೆಗೆ ಸಮೀಕರಿಸುತ್ತೇನೆ. ಧ್ವನ್ಯಾಲೋಕ ಗ್ರಂಥವೇ ನನಗೆ ಆಧಾರ[15]. 'ಧ್ವನಿ' ಒಂದು ಅಲಂಕಾರವೆಂದೇ ಹೇಳಿರುವ[16] ಶ್ರೀವಿಜಯ ಈ ಪಾಂಚಾಲೀರೀತಿಯನ್ನು ಅರಿತಿರಲು ಸಾಧ್ಯ. ದಂಡಿಯ ಜೊತೆಗೆ ಕವಿರಾಜಮಾರ್ಗಕಾರ ಉತ್ತರಮಾರ್ಗದ ಹತ್ತು ಗುಣಗಳನ್ನು ಹೇಳದೆ ಇರುವ ತಪ್ಪನ್ನೂ ಮಾಡಿದ್ದಾನೆ. ವಾಮನನ ಪ್ರಕಾರ ಗುಣಗಳು ವಸ್ತುತಃ ಹೆಚ್ಚಾಗಿವೆ. ಅವು ಇಪ್ಪತ್ತಕ್ಕೆ ಏರಿವೆ[17]. ವೈದರ್ಭೀ ಮಾರ್ಗಕ್ಕೆ ಇರುವಂತೆ ಗೌಡೀ ಮಾರ್ಗಕ್ಕೂ ಅದಕ್ಕೆ ವಿಪರೀತವಾದ ಗುಣಗಳು ಇವೆಯೆಂದು ಅವನೇ ಒಪ್ಪಿಕೊಂಡಿರುವುದು ನಾವು ಗಮನಿಸಬೇಕಾದ ಸಂಗತಿಯಾಗಿದೆ.

ದಂಡಿಯು ಕಾವ್ಯಾದರ್ಶದಲ್ಲಿ ವಿಪುಲವಾಗಿ ಬೆಳೆದಿರುವ ಯಮಕಾದಿ ವಿವಿಧ ಬಗೆಯ ಅಲಂಕಾರಗಳನ್ನು ಶಬ್ದಾಲಂಕಾರದಲ್ಲಿಯ ಚಿತ್ರಕವಿತ್ವ ಎಂದು ನಾವು ಗುರುತಿಸಬಹುದು. ಅದೊಂದು ದಟ್ಟಾರಣ್ಯವಾಗಿದೆ. ಆ ಆರಣ್ಯದಿಂದ ಶ್ರೀವಿಜಯ ಆಯ್ದು 'ಇವು

---

15 ಕನ್ನಡ ಧ್ವನ್ಯಾಲೋಕ, ಉದ್ಯೋತ ೩. ೪೭:

ಅಸ್ಫುಟ ಸ್ಫುರಿತಂ ಕಾವ್ಯತತ್ತ್ವಮೇತದ್ ಯಥೋದಿತಮ್
ಅಶಕ್ನುವದ್ಭಿರ್ವ್ಯಾಕರ್ತುಂ ರೀತಯಃ ಸಂಪ್ರವರ್ತಿತಾಃ ॥

ಇಲ್ಲಿನ 'ರೀತಯಃ' ಎಂಬುದನ್ನು 'ವೈದರ್ಭೀ' 'ಗೌಡೀ' ಮತ್ತು 'ಪಾಂಚಾಲೀ' ಎಂದೇ ವೃತ್ತಿಯಲ್ಲಿ ವಿವರಿಸಿರುವುದನ್ನು ಗಮನಿಸಬೇಕು; ಕಾರಣ ಧ್ವನ್ಯಾಲೋಕಗ್ರಂಥ ಸು. ಕ್ರಿ. ಶ. ೮೦೦ರ ಎಡಬಲದಲ್ಲಿ ರಚಿತವಾಗಿರಬೇಕು; ಅರ್ಥಾತ್ ಕವಿರಾಜಮಾರ್ಗಕ್ಕಿಂತ ಮುಂಚೆ.

16 ಕವಿರಾಜಮಾರ್ಗ, III. 208

17 ಪ್ರೊ. ತೀ.ನಂ.ಶ್ರೀ., ಭಾರತೀಯ ಕಾವ್ಯ ಮೀಮಾಂಸೆ, ಪು. ೩೩ (೧೯೬೧)

ದುಷ್ಕರ ಕಾವ್ಯಂಗಳ್' ಎಂದು 'ಗೋಮೂತ್ರಿಕ' 'ಯಮಕ' 'ಅರ್ಧಭ್ರಮ' 'ಚಕ್ರನಾಮ' 'ಮುರಜಬಂಧ' ಗತಪ್ರತ್ಯಾಗತ (ಪದಗತ, ಪಾದಗತ, ಸಮಸ್ತಗತ, ಅರ್ಧಗತ) 'ಗೂಢಚತುರ್ಥ' 'ಏಕಾಕ್ಷರಿ' 'ದ್ವ್ಯಕ್ಷರಿ' 'ಅತಾಲವ್ಯ' 'ನಿರೋಷ್ಠ್ಯ' 'ಸರ್ವತೋಭದ್ರ' 'ನಿರುತ್ತರ' 'ಗೋಪಿತಕ್ರಿಯೆ' 'ಪ್ರಹೇಳಿಕೆ' (ಭಾವೆ, ನುಸುಳು, ಅಸ್ಪಷ್ಟಾಕ್ಷರ, ವರ್ಣವ್ಯತ್ಯಯ, ಬಿಂದುಚ್ಯುತಕ, ಒರ್ನುಡಿ, ವರ್ಣಚ್ಯುತಕ, ಸಮಂತಿ) ಮುಂತಾಗಿ ಕೆಲವನ್ನು ಮಾತ್ರ ಹೇಳಿದ್ದಾನೆ. ಅವುಗಳಿಗೆ ಉದಾಹರಣೆಗಳನ್ನು ರಚಿಸಿದ್ದಾನೆ. ಇಂತಹ ಬಗೆಬಗೆಯ ಸರ್ಕಸ್ಸು ಕನ್ನಡ ಕಾವ್ಯ ಕ್ಷೇತ್ರದಲ್ಲಿ ಆಗಾಗಲೇ ನಡೆದಿತ್ತು ಎಂಬುದು ಒಂದು ದಾಖಲೆ.

III

ಮೂರನೆಯ ಪರಿಚ್ಛೇದ, ಅರ್ಥಾಲಂಕಾರಗಳಿಗೆ ಮೀಸಲು. ಅವು ಕಾವ್ಯಕ್ಕೆ ವೈಭವವನ್ನು ಒದಗಿಸುತ್ತವೆಯೆಂದು ಹೇಳಿ ತಾನು ಹೇಳಲಿರುವ ಅಲಂಕಾರಗಳನ್ನು ಮೂರು ಪದ್ಯಗಳಲ್ಲಿ ಪಟ್ಟಿಮಾಡಿದ್ದಾನೆ[18]. ಅವು ಹೆಚ್ಚಾಗಿ ದಂಡಿ ಭಾಮಹರ ಅಲಂಕಾರಗಳಿಗೆ

---

18 ಅಲಂಕಾರಗಳ ಉಲ್ಲೇಖವಿಂತಿದೆ:

ವರಜಾತಿ ರೂಪಕಾರ್ಥಾಂ
ತರವಿನ್ಯಾಸಾತಿರೇಕ ಯಥಾಸಂಖ್ಯಾ
ಸ್ಥಿರ ದೀಪಕೋಪಮಾ ಬಂ
ಧುರಾತಿಶಯ ಸದೃಶಯೋಗಿತಾಕ್ಷೇಪಂಗಳ್ ॥

ಶ್ಲೇಷೋತ್ಪ್ರೇಕ್ಷಾ ಸೂಕ್ಷ್ಮ ವಿ
ಶೇಷ ಸಮಾಹಿತ ಸಮಾಸ ಪರ್ಯಾಯೋಕ್ತಾ
ನ್ವೇಷ ವಿರೋಧಾಪ್ರಸ್ತುತ
ಶೇಷ ನಿವರ್ತನ ಸಹೋಕ್ತಿ ಸಂಕೀರ್ಣಂಗಳ್ ॥ ([illegible]

ಸಂಪಾದಿಸಿಯೇ ಆಗಿವೆ. ಆಶ್ಚರ್ಯದ ಸಂಗತಿಯೆಂದರೆ ಮೊದಲು ೩೫ ಅಲಂಕಾರಗಳನ್ನು ಹೇಳಿ ಮುಕ್ತಾಯದಲ್ಲಿ ದಿಢೀರನೆ 'ಭಾವಿಕ' ಮತ್ತು 'ಧ್ವನಿ' ಎಂಬ ಇನ್ನೆರಡನ್ನು ಸೇರಿಸಿರುವುದು. ಹೀಗಾಗಿ ಕವಿರಾಜಮಾರ್ಗ ಕೃತಿಯಲ್ಲಿ ೩೭ ಅಲಂಕಾರಗಳ ಸಂಖ್ಯೆ ನಮಗೆ ಗೋಚರವಾಗುತ್ತದೆ.

ಶ್ರೀವಿಜಯ, ದಂಡಿ ಹಾಗೂ ಭಾಮಹರ ಅರ್ಥಾಲಂಕಾರಗಳನ್ನು ತೌಲನ ಅಧ್ಯಯನಕ್ಕೆ ಒಂದೆಡೆಯಲ್ಲಿಟ್ಟು ನೋಡುವುದು ವಿಹಿತ.

ಶ್ರೀವಿಜಯ	ದಂಡಿ	ಭಾಮಹ
೧ ಜಾತಿ	ಸ್ವಭಾವೋಕ್ತಿ	ರೂಪಕ
೨ ರೂಪಕ	ಉಪಮಾ	ದೀಪಕ
೩ ಅರ್ಥಾಂತರ ವಿನ್ಯಾಸ	ರೂಪಕ	ಉಪಮಾ
೪ ಅತಿರೇಕ	ದೀಪಕ	ಆಕ್ಷೇಪ
೫ ಯಥಾಸಂಖ್ಯಾ	ಆವೃತ್ತಿ	ಅರ್ಥಾಂತರನ್ಯಾಸ
೬ ದೀಪಕ	ಆಕ್ಷೇಪ	ವ್ಯತಿರೇಕ
೭ ಉಪಮಾ	ಅರ್ಥಾಂತರನ್ಯಾಸ	ವಿಭಾವನಾ
೮ ಅತಿಶಯ	ವ್ಯತಿರೇಕ	ಸಮಾಸೋಕ್ತಿ
೯ ಸಹೃದಯೋಗಿತಾ	ವಿಭಾವನಾ	ಅತಿಶಯೋಕ್ತಿ
೧೦ ಆಕ್ಷೇಪ	ಸಮಾಸ	ಯಥಾಸಂಖ್ಯ

ನುತ ಪರಿವೃತ್ತಿ ವ್ಯಾಜ
ಸ್ತುತಿ ಹೇತು ವಿಭಾವನಾ ಲಪ್ರೋದಾತ್ತಪ
ಹ್ನುತಿ ರಸವದೂರ್ಜಿತ ವ್ಯಾ
ವೃತಿ ಪ್ರಿಯತರಾಶಿಗಳ್ ಕ್ರಮಾದ್ಯುಕ್ತಂಗಳ್ ॥

—ಕ.ರಾ.ಮಾ. III. ೨, ೩, ೪

೧೧	ಶ್ಲೇಷ	ಅತಿಶಯ	ಉತ್ಪ್ರೇಕ್ಷಾ
೧೨	ಉತ್ಪ್ರೇಕ್ಷಾ	ಉತ್ಪ್ರೇಕ್ಷಾ	ಪ್ರೇಯಸ್ಸು[20]
೧೩	ಸೂಕ್ಷ್ಮ	ಹೇತು	ರಸವದ್
೧೪	ಸಮಾಹಿತ	ಸೂಕ್ಷ್ಮ	ಊರ್ಜಸ್ವಿ
೧೫	ಸಮಾಸ	ಲವ (ಲೇಶ)[19]	ಪರ್ಯಾಯೋಕ್ತ
೧೬	ಪರ್ಯಾಯೋಕ್ತ	ಕ್ರಮ	ಸಮಾಹಿತ
೧೭	ಅನ್ವೇಷ	ಪ್ರೇಯಸ್ಸು	ಉದಾತ್ತ
೧೮	ವಿರೋಧ	ರಸವತ್	ಶ್ಲಿಷ್ಟ
೧೯	ಅಪ್ರಸ್ತುತ	ಊರ್ಜಸ್ವಿ	ಅಪಹ್ನುತಿ
೨೦	ನಿದರ್ಶನ	ಪರ್ಯಾಯೋಕ್ತ	ವಿಶೇಷೋಕ್ತಿ
೨೧	ಸಹೋಕ್ತಿ	ಸಮಾಹಿತ	ವಿರೋಧ
೨೨	ಸಂಕೀರ್ಣ	ಉದಾತ್ತ	ತುಲ್ಯಯೋಗಿತಾ
೨೩	ಪರಿವೃತ್ತಿ	ಅಪಹ್ನುತಿ	ಅಪ್ರಸ್ತುತ ಪ್ರಶಂಸೆ
೨೪	ವ್ಯಾಜಸ್ತುತಿ	ಶ್ಲೇಷ	ವ್ಯಾಜಸ್ತುತಿ
೨೫	ಹೇತು	ವಿಶೇಷೋಕ್ತಿ	ನಿದರ್ಶನ
೨೬	ವಿಭಾವನಾ	ತುಲ್ಯಯೋಗಿತಾ	ಉಪಮಾರೂಪಕ
೨೭	ಲವ	ವಿರೋಧ	ಉಪಮೇಯೋಪಮೆ
೨೮	ಉದಾತ್ತ	ಅಪ್ರಸ್ತುತ	ಸಹೋಕ್ತಿ
೨೯	ಅಪಹ್ನುತಿ	ವ್ಯಾಜಸ್ತುತಿ	ಪರಿವೃತ್ತಿ
೩೦	ರಸವತ್	ನಿದರ್ಶನ	ಸಸಂದೇಹ

19 ಕಾವ್ಯಾ. II. ೫ರಲ್ಲಿ 'ಲವಃ' ಎಂದು ಹೇಳಿ II. ೨೬೫ರಲ್ಲಿ 'ಲೇಶ'ವನ್ನು ವಿವರಿಸಿದ್ದಾನೆ—ದಂಡಿ. ಹೀಗೆಯೆ II. ೭ರಲ್ಲಿ 'ಸಂಕೀರ್ಣ' ಎಂದು ಹೇಳಿ II. ೩೫೮ರಲ್ಲಿ 'ಸಂಸೃಷ್ಟಿ' ಎಂದು ಬೇರೆಯ ಹೆಸರಿನಲ್ಲಿಯೆ ಹೇಳಿದ್ದಾನೆ. ಅವನಿಗೆ 'ಸಂಕೀರ್ಣ' 'ಸಂಸೃಷ್ಟಿ' ಒಂದೇ!

20 ಕಾವ್ಯಾಲಂಕಾರದಲ್ಲಿ ಭಾಮಹ ಮೊದಲ ಹನ್ನೊಂದು ಅಲಂಕಾರಗಳ ವರೆಗೆ ಏನನ್ನೂ ಹೇಳದೆ ಮೂರನೆಯ ಅಧ್ಯಾಯದ ಆರಂಭದಲ್ಲಿ ಪ್ರೇಯೋಲಂಕಾಲಂಕಾರದಿಂದ 'ಭಾವಿಕತ್ವ' ಅಲಂಕಾರದವರೆಗೆ ಒಂದು ಪಟ್ಟಿಕೆಯನ್ನು ಕೊಟ್ಟಿದ್ದಾನೆ.

೩೧ ಊರ್ಜಿತ	ಸಹೋಕ್ತಿಃ	ಅನನ್ವಯ
೩೨ ವ್ಯಾವೃತಿ	ಪರಿವೃತ್ತಿ	ಉತ್ಪ್ರೇಕ್ಷಾವಯವ
೩೩ ಪ್ರಿಯತರ	ಆಶೀ	ಸಂಸೃಷ್ಟಿ
೩೪ ಆಶೀ	ಸಂಕೀರ್ಣ (ಸಂಸೃಷ್ಟಿ)	ಭಾವಿಕತ್ವ
+೩೫ ಭಾವಿಕ	ಭಾವಿಕ '	ಆಶೀ[21]
+೩೬ ಧ್ವನಿ	—	—

ಪ್ರಾಸ, ಛಂದ ಇತ್ಯಾದಿಗಳ ಕಾರಣದಿಂದ ಒಂದೇ ಕ್ರಮದಲ್ಲಿ ಮೂವರಲ್ಲಿಯೂ ಈ ಅಲಂಕಾರಗಳನ್ನು ಹೇಳಲಾಗಿಲ್ಲ. ಮತ್ತೆ ಕೆಲವು ಅಲಂಕಾರಗಳ ಹೆಸರುಗಳೂ ವಿವರಣಾರೀತಿಯೂ ಭಿನ್ನ ಭಿನ್ನವಾಗಿವೆಯೆಂಬುದನ್ನೂ ಗಮನಿಸಬಹುದಾಗಿದೆ; ಉದಾ: 'ಜಾತಿ' = 'ಸ್ವಭಾವೋಕ್ತಿ'—ಶ್ರೀವಿಜಯ ಹಾಗೂ ದಂಡಿ ಇವರಿಗೆ ಅಲಂಕಾರವೆಂಬುದು ಸ್ಪಷ್ಟವಿದ್ದರೆ, ಭಾಮಹನಿಗೆ ಅದು ಅಲಂಕಾರವೇ ಅಲ್ಲ! ದಂಡಿ ಭಾಮಹರು ಸಂಸೃಷ್ಟಿ (ಸಂಕೀರ್ಣ?) ಎಂದು ಹೇಳಿರುವುದನ್ನು ಕವಿರಾಜಮಾರ್ಗದಲ್ಲಿ ಬರಿ 'ಸಂಕೀರ್ಣ' ಎಂದೇ ವಿವರಿಸಲಾಗಿದೆ. ಕವಿರಾಜಮಾರ್ಗದ ವಿವರಣೆಗಳು ತದ್ವತ್ತಾದ ಅನುವಾದಗಳಲ್ಲವೆಂಬುದು ಅನೇಕಕಡೆಗಳಲ್ಲಿ ನಾವು ಕಾಣಬಹುದಾಗಿದೆ. ದಂಡಿಭಾಮಹರು ಅನೇಕ ಅಲಂಕಾರಗಳಿಗೆ ಪ್ರಮುಖ ಹಾಗೂ ಪ್ರಭೇಧಗಳನ್ನು ಲಕ್ಷ್ಯಲಕ್ಷಣಗಳೊಂದಿಗೆ ವಿವರಿಸಿರುವದನ್ನು ಶ್ರೀವಿಜಯನು ಪ್ರಮುಖ ಅಲಂಕಾರಕ್ಕೆ ಲಕ್ಷ್ಯ ಲಕ್ಷಣವನ್ನು ಕೊಟ್ಟು ಪ್ರಭೇಧಗಳಿಗೆ ಕೇವಲ ಲಕ್ಷ್ಯವನ್ನು ಕೊಟ್ಟು ವಿಷಯದ ವಿವರಣೆ ಮುಗಿಸಿದ್ದಾನೆ. ಕವಿರಾಜಮಾರ್ಗ ಕನ್ನಡ ಭಾಷೆಯಲ್ಲಿ ರಚಿತವಾದ—ಅದಕ್ಕೆ ಆವಶ್ಯಕವಾದ ವಿಷಯಗಳನ್ನು ವಿವರಿಸಿರುವ ಕೃತಿಯೆಂದರೆ ಯಾರೂ ಆಕ್ಷೇಪವೆತ್ತಬೇಕಾಗಿಲ್ಲ.

---

21 ಕಾವ್ಯಾಲಂಕಾರ III. ೫೫ರಲ್ಲಿ "ಆಶೀರಪಿಚ ಕೇಷಾಂಚಿದಲಂಕಾರ ತಯಾಮತಾ" ಎಂದು ಮತ್ತೊಂದನ್ನು ಸೇರಿಸಿದ್ದಾನೆ.

ಶ್ರೀವಿಜಯನ ದೃಷ್ಟಿಯು ವಿಸ್ತಾರಕ್ಕಿಂತ ಸಂಕ್ಷೇಪೀಕರಣದ ಕಡೆಗೆ ಹೆಚ್ಚು ಹರಿದಿದೆ. 'ಧ್ವನಿ' ಎಂಬುದನ್ನು ಅಲಂಕಾರಂತರ್ಗತವಾಗಿ ಸಿರುವುದು ವಿಶೇಷ ಗಮನಿಸಬೇಕಾದ ಸಂಗತಿ. ಈ ದಿಶೆಯಲ್ಲಿ ಇನ್ನೂ ಸಂಶೋಧನೆಗೆ ಎಡೆಯಿದೆ. ರಸಗಳಲ್ಲಿ ಒಂಬತ್ತನ್ನು ಹೇಳಿರುವುದೂ ಗಮನಾರ್ಹ ಅಂಶ.

ಅಲಂಕಾರಗಳ ಅನಂತರ ಶ್ರೀವಿಜಯ 'ಮಹಾಕಾವ್ಯದ ಲಕ್ಷಣ' ಇತ್ಯಾದಿ ವಿಷಯಗಳನ್ನು ವಿವರಿಸಿದ್ದಾನೆ. ಅದು ದಂಡಿ ಭಾಮಹರ ಹಾಗೆ ಸರಳವಾಗಿರದೇ ಹೆಚ್ಚು ವಾಗಾಡಂಬರದಿಂದ ಕೂಡಿದೆ (ಕ.ರಾ.ಮಾ. III. ೨೦೯–೨೧೭). ದಂಡಿಯು ಬಹಳ ಸರಳವಾದ ಸಂಸ್ಕೃತದಲ್ಲಿ ಹೇಳಿದ್ದಾನೆ:

ಸರ್ಗಬಂಧೋ ಮಹಾಕಾವ್ಯಮುಚ್ಯತೇ ತಸ್ಯ ಲಕ್ಷಣಮ್ ।
ಆಶೀರ್ನಮಸ್ಕ್ರಿಯಾ ವಸ್ತುನಿರ್ದೇಶೋ ವಾಽಪಿ ತನ್ಮುಖಮ್ ॥ ೧೪ ॥
ಇತಿಹಾಸಕಥೋದ್ಭೂತಮಿತರದ್ವಾ ಸದಾಶ್ರಯಮ್ ।
ಚತುರ್ವರ್ಗಫಲಾಯತ್ತಂ ಚತುರೋದಾತ್ತನಾಯಕಮ್ ॥ ೧೫ ॥
ನಗರಾರ್ಣವ ಶೈಲರ್ತು ಚಂದ್ರಾರ್ಕೋದಯ ವರ್ಣನೈಃ ।
ಉದ್ಯಾನ ಸಲಿಲಕ್ರೀಡಾ ಮಧುಪಾನ ರತೋತ್ಸವೈಃ ॥ ೧೬ ॥
ವಿಪ್ರಲಂಭೈರ್ವಿವಾಹೈಶ್ಚ ಕುಮಾರೋದಯವರ್ಣನೈಃ ।
ಮಂತ್ರದೂತ ಪ್ರಯಾಣಾಜಿ ನಾಯಕಾಭ್ಯುದಯೈರಪಿ ॥ ೧೭ ॥
ಅಲಂಕೃತಮಸಂಕ್ಷಿಪ್ತಂ ರಸಭಾವ ನಿರಂತರಮ್ ।
ಸರ್ಗೈರನತಿವಿಸ್ತೀರ್ಣೈಃಶ್ರವ್ಯ ವೃತ್ತೈಃ ಸುಸಂಧಿಭಿಃ ॥ ೧೮ ॥
ಸರ್ವತ್ರ ಭಿನ್ನವೃತ್ತಾಂತೈರುಪೇತಂ ಲೋಕರಂಜನಮ್ ।
ಕಾವ್ಯಂ ಕಲ್ಪಾಂತರ ಸ್ಥಾಯಿ ಜಾಯೇತ್ ಸದಲಂಕೃತಿ ॥ ೧೯ ॥[22]

[ಒಂದಕ್ಕಿಂತ ಹೆಚ್ಚು ಸರ್ಗಗಳು ಸೇರಿ "ಮಹಾಕಾವ್ಯ" ಆಗುತ್ತದೆ. ಅದರ ಲಕ್ಷಣವನ್ನು ನೋಡಿ: ಕಾವ್ಯದ ಆದಿಯಲ್ಲಿ 'ಆಶೀ' ಇಲ್ಲವೇ

22 ಕಾವ್ಯಾದರ್ಶ, I. ೧೪–೧೯.

ನಮಸ್ಕಾರ ಇಲ್ಲವೇ ಕಥಾ ನಿರ್ದೇಶ ಇರುತ್ತದೆ. ಇತಿಹಾಸ (ಮಹಾಭಾರತ ಮುಂತಾದ) ಅಥವಾ ಕಥೆ (ಬೃಹತ್ಕಥೆ ಇತ್ಯಾದಿ) ಅದಕ್ಕೆ ಮೂಲವಾಗಬಹುದು. ಇಲ್ಲದಿದ್ದರೆ ಬೇರೆ ಸತ್ಪುರುಷರ ಚರಿತ್ರೆಯಾದರೂ ಆಗಬಹುದು. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂಬ ಚತುರ್ವಿಧ ಪುರುಷಾರ್ಥಗಳು ಪ್ರಾಪ್ತ ಆಗುತ್ತಿರಬೇಕು. ನಾಯಕನು ಚತುರನೂ ಉದಾತ್ತನೂ ಆಗಿರಬೇಕು. ನಗರ, ಸಮುದ್ರ, ಬೆಟ್ಟ, ಋತುಗಳು, ಚಂದ್ರಸೂರ್ಯೋದಯಾದಿಗಳವರ್ಣನೆ, ವನವಿಹಾರ, ಜಲಕ್ರೀಡೆ, ಮಧುಪಾನವಿನೋದ, ಸುರತೋತ್ಸವ, ವಿಯೋಗ (ಎರಡು ಬಗೆಯ ಶೃಂಗಾರಗಳು), ವಿವಾಹ, ಕುಮಾರಜನನದವರ್ಣನೆ ಮಂತ್ರಾಲೋಚನೆ, ದೂತಕಾರ್ಯ, ವಿಜಯಯಾತ್ರೆ ಯುದ್ಧ ಮತ್ತು ನಾಯಕ ವಿಜಯ ಎಂಬ ಅಷ್ಟಾದಶವರ್ಣನೆಗಳಿಂದ ಕೂಡಿರಬೇಕು. ಅಲಂಕೃತವಾಗಿ ರಸನಿಬಿಡವಾಗಿ, ಸಂಕ್ಷೇಪ ಇಲ್ಲವೆ ಅತಿವಿಸ್ತಾರ ಆಗಿರದೆ ಶ್ರವ್ಯ ವೃತ್ತಗಳಿಂದ ಕೂಡಿ ಒಳ್ಳೆಯ ಸಂಧಿಗಳಿರುವ—ಸಂಧಿಯ ಆರಂಭದಲ್ಲಿ ಬಂದ ವೃತ್ತಕ್ಕೆ ಭಿನ್ನವಾದ ವೃತ್ತಬಂಧ ಕೊನೆಯಲ್ಲಿದ್ದು ಲೋಕರಂಜನೆಯನ್ನು ಮಾಡುವ ಕಾವ್ಯ ಕಲ್ಪಾಂತದವರೆಗೆ ಚಿರಸ್ಥಾಯಿಯಾಗಿ ನಿಲ್ಲುತ್ತದೆ].

ಅಷ್ಟಾದಶ ವರ್ಣನೆಗಳನ್ನು ಸೇರಿಸಿದ ಕಾವ್ಯ ಸರ್ವಕಾಲಕ್ಕೂ ಸಹೃದಯರನ್ನು ಹೊಂದಿ ಅಮೋಘವರ್ಷನ ಯಶಸ್ಸಿನ ಹಾಗೆ ಆಚಂದ್ರತಾರಂಬರದವರೆಗೆ ಹಬ್ಬಿ ಚಿರಸ್ಥಾಯಿಯಾಗಿ ನಿಲ್ಲುತ್ತದೆ. ಒಂದು ವಿಷಯ ಕವಿರಾಜಮಾರ್ಗದ ತುಂಬ ಎದ್ದುಕಾಣುತ್ತದೆ; ಅದರ ಕರ್ತೃ ಹಾಗೂ ಆಶ್ರಯದಾತ ಈ ಇಬ್ಬರೂ ರಾಜರೆಂಬುದು, ಆರಂಭದ ಆಶೀ ಪದ್ಯದಿಂದ ಅಂತದ ಪದ್ಯದವರೆಗೆ ರಾಜಲೀವಿ

ಪ್ರತಿ ಹೆಜ್ಜೆಹೆಜ್ಜೆಯಲ್ಲೂ ಸುವ್ಯಕ್ತ.[23] ಗ್ರಂಥವು ನೃಪತುಂಗನ ಕಾಲದಲ್ಲಿ (ಕ್ರಿ.ಶ. ೮೧೪–೮೭೭) ರಚಿತವಾಗಿರುವುದು ಸುನಿಶ್ಚಿತ.

IV

ಕವಿರಾಜಮಾರ್ಗದ ಶೈಲಿ ಸರಳ ಹಾಗೂ ಸುಲಲಿತ. ೧ನೆಯ ಮತ್ತು ಮೂರನೆಯ ಪರಿಚ್ಛೇದಗಳಲ್ಲಿ ಬಂದಿರುವ ಯಾವು ದಾದರೂ ಸೂತ್ರೋದಹಾರಣೆಗಳನ್ನು ಪರೀಕ್ಷಿಸಿ. ರಸವದಲಂ ಕಾರದ ಈ ಭಾಗವನ್ನು ನೋಡಿ:

ನವವಿಧರಸಂಗಳಂ ಮನ
ಕೆವರೆ ನಿರೂಪಿಸುವ ವಚನವಿರಚನೆ ರಸವ।
[ದ್ವಿವಿ][24] ಧಾಲಂಕಾರಂ ಕುಱಿ
ತು ವಿಕಲ್ಪಿಸಿ ತೋರ್ಪೆನದಱ ಲಕ್ಷ್ಯಕ್ರಮಮಂ॥

ವೀರಾದ್ಭುತ ಕರುಣಾ ಶೃಂ
ಗಾರ ಭಯಾನಕ ಸರೌದ್ರ ಬೀಭತ್ಸ ಮಹಾ
ಸಾರತರ ಹಾಸ್ಯ ಶಾಂತಾ
ಧಾರಂ ನವವಿಧ ವಿಕಲ್ಪಮಾ ರಸಮಾರ್ಗಂ॥

---

23 ಆಶೀ ಪದ್ಯದಲ್ಲಿ ಬಂದಿರುವ 'ಪ್ರತಾಪೋದಯ' ಎಂಬ ಕೃತಿಕರ್ತೃ ವಿನ ಮನದ ಆಶೆಯ ವಿಶ್ಲೇಷಣೆ ಅಗತ್ಯ. "ಪ್ರತಾಪ" ಶಬ್ದ ಖಂಡಿತ ವಾಗಿಯೂ ರಾಜ್ಯಾಡಳಿತಕ್ಕೆ ಸಂಬಂಧಪಟ್ಟ ಮಾತು. ಅಭ್ಯಾಸಿಗಳು ಕನ್ನಡ ನಾಡಿನ ಸಹಸ್ರಾರು ಶಾಸನಗಳಲ್ಲಿ ಬರುವ ಈ ಮಾತನ್ನು ಗಮನಿಸಬೇಕು. ಅಮರಕೋಶದ ಅರ್ಥವನ್ನೂ ಇನಿತು ಆಲೋಚನೆ ಮಾಡಬೇಕು. ಸಪ್ರತಾಪಃ ಪ್ರಭಾವಶ್ಚ ಯತ್ತೇಜಃ ಕೋಶ ದಂಡಜಂ (ಭಂಡಾರದಿಂದಲೂ ದಂಡಿನಿಂದಲೂ ಉಂಟಾದ ಪ್ರಭುಶಕ್ತಿ) —ಅಮರಕೋಶ (ಸಂ. ಎನ್. ಬಾಲಸುಬ್ರಹ್ಮಣ್ಯ. ಮೈ.ವಿ.ವಿ. ೧೯೭೦) ಪು. ೧೧೪.

24 ಪ್ರೊ. ಡಿ. ಕೆ. ಭೀಮಸೇನರಾಯರ ಪಾಠ ಪರಿಷ್ಕರಣವನ್ನು ನಾನಿಲ್ಲಿ ಸ್ವೀಕರಿಸಿದ್ದೇನೆ.

ದಂಡಿಯು ಕೇವಲ 'ರಸವದ್ ರಸಪೇಶಲಮ್' ಎಂದು ಹೇಳಿ ಎಂಟು ಬೇಧಗಳನ್ನು ವಿವರಿಸಿ ಕೊನೆಯಲ್ಲಿ "ಇಹತ್ವಷ್ಟ ರಸಾಯುತ್ತಾ ರಸವತ್ತಾ ಸ್ಮೃತಾ ಗಿರಾಮ್" ಎಂದಿದ್ದಾನೆ.[25] ಶ್ರೀವಿಜಯನು ಶಾಂತರಸವನ್ನು ಜೈನಗ್ರಂಥ 'ಅಣುಓಗದಾರ ಸುತ್ತ' ದಿಂದ ಸ್ವೀಕರಿಸಿದನೋ ಅಥವಾ ಉದ್ಭಟನಿಂದ ಸ್ವೀಕರಿಸಿದನೋ ಹೇಳಲು ಬರುವದಿಲ್ಲ. ಹೀಗೆಯೆ ಕೆಲವು ಉದಾಹರಣೆಗಳನ್ನೂ ಅತನು ಎಲ್ಲಿಂದ ಸ್ವೀಕರಿಸಿದನೋ ಹೇಳಲು ಬರುವದಿಲ್ಲ ಪೂರ್ವಕವಿಗಳಿಂದ ರಚಿತವಾದ ಕೃತಿಗಳಿಂದಲೂ ಉದಾಹರಣೆಗಳನ್ನು ಆರಿಸಿಕೊಂಡು ರಚಿಸಿದ ಗ್ರಂಥ 'ಕವಿರಾಜಮಾರ್ಗ'. ಶೈಲಿಯ ಬಗ್ಗೆ ನಾನು ಹೇಳುವಾಗ್ಗೆ ಸೂತ್ರಗಳನ್ನೇ ಗಮನದಲ್ಲಿಟ್ಟುಕೊಂಡಿದ್ದೇನೆ.

ಶ್ರೀವಿಜಯ ವಸ್ತುವನ್ನು ಸಾಮತಿಗಳಿಂದ ಹೋಲಿಕೆಗಳಿಂದ ಓದಿದಕೂಡಲೇ ಅರ್ಥವಾಗುವ ರೀತಿಯಲ್ಲಿ ನಿರೂಪಿಸಿದ್ದಾನೆ:

೧. 'ನೆಲ್ಲುಂ ಮೊಸರುಂಗುಡಿವಂತೆ'

೨. 'ಮುತ್ತುಂ ಮೆಣಸುಂ ಕೋದಂತಿರ್ಕುಂ'

೩. 'ಕಲ್ಪೊಡನೆ ಓದುವುವಲ್ತೆ ಗಿಳಿಗಳುಂ ಪುರುಳಿಗಳುಂ

೪. 'ಅವಗುಣಂ—ಕಸದವೊಲನವರತಂ

೫. ಅವ್ಯಯ್ಯಗಳನ್ನು ಸಂಸ್ಕೃತ, ಕನ್ನಡ ಇತ್ಯಾದಿ ಆಲೋಚಿಸದೆ ಬೆರಸಿದರೆ ಕೇಳಲು ಬಹಳ ಪರುಷತರವಾಗುತ್ತವೆ; ಅದು "ಒತ್ತುಂಗರಡೆಯ ಮದ್ದಳೆಯ ಜರ್ಝರ ಧ್ವನಿಗಳವೋಲ್" ಎಂದಿದ್ದಾನೆ. ಹೀಗೆಯೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಕಬ್ಬನ್ನೂ ಕೃತಿಕಬ್ಬನ್ನೂ ಸವಿದುನೋಡಬೇಕು; ವಿಮರ್ಶೆ ಅದಕ್ಕೊಂದು ಕೈಮರ (Singal).

---

25 ಕನ್ನಡ ಕಾವ್ಯಾದರ್ಶ, II . ೨೭೫, ೨೮೨, ಪು. ೯೩–೯೬.

೪. ಕೃತಿಯ ಮೌಲ್ಯ

'ಕವಿರಾಜಮಾರ್ಗ' ಗ್ರಂಥ, ಕವಿಯಾಗಬಯಸುವ ವ್ಯಕ್ತಿಗೆ ಬೇಕಾದ ಕೆಲವು ವಿಷಯಗಳನ್ನು ತಿಳಿಸುವ, ಕಾವ್ಯ ಮೀಮಾಂಸೆಯ ಕೈಪಿಡಿ. ಕಾವ್ಯಮೀಮಾಂಸೆಗೆ ಬೇಕಾಗುವ ಭಾಷೆಯ ಸಮಸ್ಯೆಗಳು ಶಬ್ದ, ಅದರ ನಾದಸ್ವರೂಪ ಮತ್ತು ಅರ್ಥವ್ಯಾಪ್ತಿಗಳ ವಿಷಯವನ್ನು ತಿಳಿಸಲು ರಚಿಸಿದ ಈ ರಚನೆ, ತನ್ನ ಕಾಲದ ಧಾರ್ಮಿಕ, ಸಾಮಾಜಿಕ, ರಾಜಕೀಯ, ಜನಜೀವನದಮೇಲೂ ಇನಿತು ಬೆಳಕನ್ನು ಬೀರುತ್ತದೆ. ಮೂಲತಃ ಅಲಂಕಾರ ಶಾಸ್ತ್ರಗ್ರಂಥವನ್ನು ರಚಿಸಲು ಹೊರಟ ಶ್ರೀವಿಜಯ ಆನುಷಂಗಿಕವಾಗಿ ಇತರ ಕುತೂಹಲಕರ ವಿಷಯಗಳನ್ನೂ ಇದರಲ್ಲಿಟ್ಟು ನಮ್ಮ ಮುಂದೆ ಪ್ರದರ್ಶಿಸಿದ್ದಾನೆ. ಲೇಖಕನ ವಿಶಾಲ ಅನುಭವ ಹಾಗೂ ಕವಿ ಸಹೃದಯತ್ವದಿಂದಾಗಿ ಗ್ರಂಥದಲ್ಲಿ ಅನೇಕ ಮೌಲ್ಯಗಳು ಸ್ಥಾನ ಪಡೆದು ಅಧ್ಯಯನಕ್ಕೆ ಅನೇಕ ಆಯಾಮಗಳನ್ನು ಒದಗಿಸಿವೆ. ಗ್ರಂಥವ ತುಂಬ, ಲಕ್ಷಣ ನಿರೂಪಣೆಯಲ್ಲಿ ಭಾಮಹ ದಂಡಿ ಮೊದಲಾದವರ ಅನುವಾದವಿದ್ದರೂ ಲಕ್ಷ್ಯ ಪದ್ಯಗಳಲ್ಲಿ ಅನೇಕ ಕಡೆಗೆ ತನ್ನ ಸ್ವಾತಂತ್ರ್ಯವನ್ನು ಮೆರೆದಿದ್ದಾನೆ. ಸಾಹಿತ್ಯದ ಸ್ವರೂಪ, ಪ್ರಯೋಜನ, ತಾರತಮ್ಯತೆ, ಸಾಹಿತ್ಯಕಾರನು ಮಾಡಬೇಕಾದ ವಿಶಿಷ್ಟಸಾಧನೆ, ಉಚಿತಮಾರ್ಗ ಅರ್ಥಾತ್ ಶೈಲಿಯ ಸಮತೋಲನವಿಧಾನ ಇತ್ಯಾದಿಗಳ ಬಗ್ಗೆ ಅಮೌಲ್ಯಸೂಕ್ತಿಗಳನ್ನು ಶ್ರೀವಿಜಯ ಈ ಗ್ರಂಥದಲ್ಲಿ ರಚಿಸಿದ್ದಾನೆ. ಇವುಗಳಿಂದಲೇ ಈ ಗ್ರಂಥಕ್ಕೆ ಬೆಲೆ ಬಂದಿದೆ. ಕನ್ನಡದ ಅಧ್ಯಯನಕ್ಕೆ 'ಕವಿರಾಜಮಾರ್ಗ' ಕಮನೀಯವಾದ ಗಮನಾರ್ಹವಾದ ಆಕರಗ್ರಂಥವಾಗಿದೆ. ಅದು ತನ್ನ ಓದುಗನಿಗೆ ಅಧ್ಯಯನದ ಆಳ ಆಗಲಗಳ

ಮತ್ತು ಸಮಕಾಲೀನ ಜನಜೀವನದ ಸಂಬಂಧದಲ್ಲಿ ವಿಶೇಷಜ್ಞಾನವನ್ನು ಒದಗಿಸುತ್ತದೆ. ಅದರಲ್ಲಿ, ಕವಿತೆಯ ಕಲ್ಪನೆ ಇದೆ, ಶಾಸ್ತ್ರದ ಹರವಿನ ಜ್ಞಾನವಿದೆ; ಜೀವನಕ್ಕೆ ಬೇಕಾದ ವಿವೇಕತೆಯ ತಿಳಿವಳಿಕೆಯಿದೆ; ಅಂತೆಯೆ 'ಕವಿರಾಜಮಾರ್ಗ' ಒಂದು ಸುಸಂಸ್ಕೃತ ಬರಹ. "ನಾನಾಕಾರಣಗಳಿಂದ 'ಕವಿರಾಜಮಾರ್ಗ'ದ ಹಿರಿಮೆ ಬಲು ಹಿರಿದು. ಕನ್ನಡ ಕಾವ್ಯಮೀಮಾಂಸೆಯ ಚರಿತ್ರೆಯಲ್ಲಿ ಇದರದು ಅಗ್ರಸ್ಥಾನ; ವರಿಷ್ಠಸ್ಥಾನ; ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕೂಡ ಇದಕ್ಕೆ ಗಣ್ಯಸ್ಥಾನ ಮೀಸಲು. ಅಂಥದೊಂದು ವಿಶಾಲ ಭೂಮಿಕೆಯ ಮಹಾಗ್ರಂಥ ಸಿದ್ಧವಾದಾಗ".[1] 'ಕವಿರಾಜಮಾರ್ಗ'ವನ್ನು ಗಣನೆಗೆ ತೆಗೆದುಕೊಂಡರೆ 'ಉದ್ಭಟ' 'ವಾಮನ' 'ಮನೋರಥ' ಮತ್ತು ಆನಂಧವರ್ಧನ ಇವರ ಕಾಲವನ್ನು ಕ್ರಿ.ಶ. ಸು. ೮೦೦ರ ಎಡಬಲದಲ್ಲಿ ಎಂದು ಖಚಿತವಾಗಿ ನಿರ್ಧರಿಸಬಹುದು. ದುರ್ದೈವದ ಸಂಗತಿ, ಮ।. ಮ।. ಡಾ॥ ಪಿ. ವಿ. ಕಾಣೆ[2] ಆಗಲಿ ಇತರರಾಗಲಿ ಈ ಗ್ರಂಥವನ್ನು ಗಣನೆಗೆ ತೆಗೆದುಕೊಂಡಿಲ್ಲ. ಕಲ್ಹಣನ ರಾಜತರಂಗಿಣಿಯನ್ನು ಈ ದಿಶೆಯಲ್ಲಿ ನಾವು ನಂಬಬಹುದು ಎಂದು ತೋರುತ್ತದೆ. ಆಗ ಈ ಎಲ್ಲರೂ ಕಾಶ್ಮೀರದ ಜಯಾಪೀಡನೆಂಬ ರಾಜನ (ಕ್ರಿ.ಶ. ೭೭೬–೮೦೭) ಸಮಕಾಲೀನರಾಗುತ್ತಾರೆ.[3] ರಾಷ್ಟ್ರಕೂಟ ಚಕ್ರವರ್ತಿ ನೃಪತುಂಗನ ರಾಜ್ಯದ

---

1 ಪ್ರೊ. ಎಂ. ವಿ. ಸೀತಾರಾಮಯ್ಯ ಸಕಸಾಚ, I, ಪು. ೯೫ (ಬೆಂ.ವಿ.ವಿ.)

2 Dr. P.V. Kane 'History of Sanskrit Poetics' pp. 137, 146, 202 etc.

3 ವಿದ್ವಾನ್ ದೀನಾರ ಲಕ್ಷೇಣ ಪ್ರತ್ಯಹಂ ಕೃತವೇತನಃ ।
ಭಟೋsಭೂದುದ್ಭಟಸ್ತಸ್ಯ ಭೂಮಿಭರ್ತುಃ ಸಭಾಪತಿಃ ॥ ೪–೪೯೫
ಮನೋರಥಃ ಶಂಖದತ್ತಶ್ಚಟಕಃ ಸಂಧಿಮಾಂಸ್ತಥಾ ।
ಬಭೂವುಃ ಕವಯಸ್ತಸ್ಯ ವಾಮನಾದ್ಯಾಶ್ಚ ಮಂತ್ರಿಣಃ ॥ ೪–೪೯೭

ವಿಸ್ತಾರವನ್ನು ನಾವು ಗಮನಕ್ಕೆ ತೆಗೆದುಕೊಂಡರೆ ಕಾಶ್ಮೀರದ ಈ ಬರಹಗಾರರ ಕೃತಿಗಳ ಒಂದು ಸಂಪರ್ಕ ಕರ್ನಾಟಕದ ಬರಹಗಾರರ ಕೃತಿಗಳ ಜೊತೆಗೆ ಕಂಡುಬಂದರೆ ಆಶ್ಚರ್ಯ ಪಡಬೇಕಿಲ್ಲ. ಭಾಮಹನು ಕಾವ್ಯಾಲಂಕಾರದಲ್ಲಿ ಆರಂಭದಲ್ಲೆಲ್ಲೂ 'ಭಾವಿಕತ್ವ' ಮತ್ತು 'ಆಶೀ' ಅಲಂಕಾರಗಳನ್ನು ಹೇಳದೆಯೆ "ಸಂಸೃಷ್ಟಿ" ಅನಂತರದಲ್ಲಿ ವಿವರಿಸಿದ್ದಾನೆ.[4] ಪ್ರಾಯಃ ಶ್ರೀವಿಜಯನೂ 'ಭಾವಿಕ' ಮತ್ತು 'ಧ್ವನಿ' ಎಂಬ ಅಲಂಕಾರಗಳನ್ನು ಓಗೆಯೆ ಹಿಂದುಗಡೆ ಹೇಳಿದ್ದಾನೆ; ಅಲಂಕಾರವೆಂದು ನಿಶ್ಚಯಿಸಿಕೊಂಡ ಮೇಲೆ ಆನಂದವರ್ಧನನ ಎಲ್ಲಿ ವಿಷಯಗಳನ್ನು ಚರ್ಚಿಸದೆ ಬಿಟ್ಟಿರಬಹುದು ಮೇಲಾಗಿ ಕನ್ನಡ ಕೃತಿಯಲ್ಲಿ ಅವರ ಅವಶ್ಯಕತೆಯು ಕಂಡಿರಲಿಕ್ಕಿಲ್ಲ; ದಂಡಿಯು ಹೇಳಿದ ಅನೇಕ ಶಬ್ದಾಲಂಕಾರಗಳನ್ನು ಬಿಟ್ಟಂತೆ ಬೇಕಾದ ಒಂದು ಮಾತನ್ನು ಹೇಳಿ ಮಿಕ್ಕದನ್ನು ಬಿಟ್ಟಿರಬಹುದು. ಕಾವ್ಯಾವಲೋಕನದಲ್ಲೂ ಧ್ವನಿಯ ಉಲ್ಲೇಖವಿಲ್ಲ! ಆಗ 'ಧ್ವನ್ಯಾಲೋಕ' ಹುಟ್ಟಿತ್ತು!

ಕವಿರಾಜಮಾರ್ಗದ ಕರ್ತೃ ಜೈನನೆಂಬುದು ಇದರಲ್ಲಿ ಬಂದ ಜಿನಸ್ತುತಿಗಳು[5] ದಂಡಿಯ ವಿಷ್ಣುಪರವಾದ ಸ್ತುತಿಪದ್ಯಕ್ಕೆ ಪ್ರತಿಯಾಗಿ ಬಂದಿರುವುದರಿಂದ ಸಾಧಿತವಾಗುತ್ತದೆ. ಜೈನರಾಮಾಯಣವೊಂದರಿಂದ ಎತ್ತಿಕೊಂಡಿರಬಹುದಾದ ಲಕ್ಷ್ಯ ಪದ್ಯಗಳೂ ಇದನ್ನೇ ಪುಷ್ಟೀಕರಿಸುತ್ತವೆ. ಜೈನಧರ್ಮದ ಜೊತೆಗೆ 'ಸಾಂಖ್ಯ' 'ಬೌದ್ಧ' 'ವೈಶೇಷಿಕ' 'ಲೋಕಾಯತ ಚಾರ್ವಾಕ' ಮತ್ತು 'ವೈದಿಕ' ಧರ್ಮಗಳ ಉಲ್ಲೇಖಗಳೂ ಅಲ್ಲಲ್ಲಿ ಬಂದಿವೆ. ಈ

---

4 ಭಾಮಹ, ಕ.ಕಾವ್ಯಲಂಕಾರ (ಡಾ|| ಕೆ. ಕೃಷ್ಣಮೂರ್ತಿ) III. ೯೯. ೫೩ ಮತ್ತು ೫೫, ಪು. ೬೮–೭೧.

5 ಕ.ರಾ.ಮಾ. (ಎಂ.ವಿ.ಸೀ.) I. ೯೧; III. ೧೮

ಸಮಯಗಳು ಆ ಕಾಲದಲ್ಲಿ ಕರ್ನಾಟಕದಲ್ಲಿ ಪ್ರಚಲಿತವಾಗಿದ್ದ ವೆಂದು ಹೇಳಬಹುದು.

ಕನ್ನಡ ನಾಡಿನಲ್ಲಿ ಅಂದಿನ ಸಮಾಜವೆಂದರೆ ರಾಜರು ಮತ್ತು ಪ್ರಜೆಗಳು. ಇವರ ಜೀವನವೇ ಅಂದಿನ ಜನಜೀವನ. ಒಂದು ಆಳುವವರ್ಗ ಇನ್ನೊಂದು ಆಶ್ರಿತವರ್ಗ. ಬ್ರಾಹ್ಮಣರು, ಅರಸರು, ವೈಶ್ಯರು, ಕುಡಿಯರು—ಇದು ಆ ಕಾಲದಲ್ಲಿ ಇದ್ದ ವರ್ಣಾಶ್ರಮ ಧರ್ಮದ ಒಂದು ಚೌಕಟ್ಟು. ಇವರಿಗೆ ಕ್ರಮವಾಗಿ ಅಧ್ಯಯನ, ಅಧ್ಯಾಪನ, ಪ್ರಜಾರಕ್ಷಣೆ, ವ್ಯಾಪಾರ-ವಾಣಿಜ್ಯ ಹಾಗೂ ಕೃಷಿ-ಕಾರ್ಯಕ್ಷೇತ್ರಗಳು ಆಗಿದ್ದವು.[6] ಆಕಾಲದಲ್ಲಿ ನಾಡವರು ಸಮಾಜದ ಸದಸ್ಯರಾಗಿದ್ದರು. ಅವರನ್ನು ಶ್ರೀವಿಜಯ ಬಹು ಸುಂದರವಾಗಿ, ಅಭಿಮಾನಪೂರ್ವಕವಾಗಿ ಬಣ್ಣಿಸಿದ್ದಾನೆ:

ಸುಭಟರ್ಕಳ್ ಕವಿಗಳ್ ಸು
ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್ ಗುಣಿಗಳ್
ಅಭಿಮಾನಿಗಳತ್ಯುಗ್ರರ್
ಗಭೀರಚಿತ್ತರ್ ವಿವೇಕಿಗಳ್ ನಾಡವರ್ಗಳ್ ॥ II. ೨೭

ಈ ವರ್ಣನೆ ಹುಯುನ್‌ತ್ಸಾಂಗ್ (ಯುವಾನ್‌ಚ್ವಾಂಗ)ನು ಮಾಡಿದ ವರ್ಣನೆಗೆ ಬಹು ಹತ್ತಿರವಾಗಿದೆ. ನೋಡಿ:

This country is about 5000 li in circuit. The capital bordere on the west of a great river. It is about 30 li round. The soil is rich and fertile. It is regularly cultivated and very productive.

---

6 ಕ.ರಾ.ಮಾ: ಪರದಗ್ಗಾರ್ಗೆ ಪಾರ್ಬಗಗ್ಗಾರ್ಗೆ
ದರಸಗ್ಗಾರ್ಗೆ ಕುಡಿಯರಪ್ಪ ನಾಲ್ವಗ್ಗಾರ್ಗಗಳ್
ಸ್ಥಿರಗೋಪಾಧ್ಯಾಯಕ್ಷಾ
ಪರಿಪಾಲ್ಯ ಕ್ಷೇತ್ರಕರ್ಷಣಂಗಳ್ ಕ್ರಿಯೆಗಳ್ ॥ I. ೬೪ KBP

The claimate is hot and the disposition of the people is honest and simple. They are tall of stature and of a stern vindictive character. To their benefactors they are grateful to their enemies relentless. If they are insulted they risk their lives to avenge themselves. If they are asked to help one in distress they will forget themselves in their haste to render assistance. If they are going to seek revenge they first give their enemy warning then each being armed they attack each other with lances. When one turns to flee the other pursues him but they do not kill a man down. If a general loses a battle they do not inflict punishment but present him with womens clothes and so he is driven to seek death for himself . . . . etc.[7]
[ಈ ದೇಶ, ಸುತ್ತಳತೆಯಲ್ಲಿ ೫೦೦೦ ಲೀ ಇದೆ. ಇದರ ರಾಜಧಾನಿಯು ಹಿರಿಯಹೊಳೆಯು[8] ಪಶ್ಚಿಮದಲ್ಲಿದೆ . ಅದು ೩೦ ಲೀ ಸುತ್ತಳತೆಯನ್ನು ಹೊಂದಿದೆ. ಇಲ್ಲಿನ ನೆಲ ವಿಸ್ತಾರವೂ ಸಂಪದ್ಭರಿತ ಹಾಗೂ ಫಲವತ್ತಾದುದೂ ಆಗಿದೆ. ಅದನ್ನು ನಿರಂತರ ಉತ್ತಿ ಬೆಳೆಯುತ್ತಾರೆ. ಇಲ್ಲಿ ಬೆಳೆಯ ಇಳುವರಿ ವಿಶೇಷ. ಇಲ್ಲಿಯ ಹವಾಮಾನ ಶಕೆಯಿಂದ ಕೂಡಿದೆ. ಜನರ ನಡತೆ ಸಾದಾ

7 Dr. S. Srīkaṇṭha śāstri "Sources of Karnatak History", p. 45.

8 ಹಿರಿಹೊಳೆ (< ಪೆರ್ದೊರೆ=ಕೃಷ್ಣಾ ನದಿ) ದೊಡ್ಡ ನದಿಯೆಂದು ಕೆಲವರು ಭಾವಿಸಿದ್ದಾರೆ.

ಹಾಗೂ ಸರಳ. ಅವರು ಎತ್ತರವಾಗಿರಯೂ ತುಂಬ ಗಟ್ಟಿಗ ರಾಗಿಯೂ ನ್ಯಾಯವಾದಿಗಳಲ್ಲದೆ ಸೇಡನ್ನು ತೀರಿಸಿಕೊಳ್ಳು ವ್ಯಕ್ತಿತ್ವವನ್ನು ಉಳ್ಳವರಾಗಿದ್ದಾರೆ; ಆಶ್ರಯದಾತರಿಗೆ ಕೃತಜ್ಞರೂ ವೈರಿಗಳಿಗೆ ನಿರ್ದಯಾಪರರೂ ಆಗಿದ್ದಾರೆ. ಅವಮಾನವಾಡಿದರೆ ತಮ್ಮ ಜೀವದ ಹಂಗನ್ನು ತೊರೆದು ಸೇಡು ತೀರಿಸಿಕೊಳ್ಳುತ್ತಾರೆ. ದುಃಖದಲ್ಲಿರುವವರು ಸಹಾಯವನ್ನು ಯಾಚಿಸಿದರೆ ಅವರು ತಮಗುಂಟಾಗುವ ತೊಂದರೆಗಳೆಲ್ಲವನ್ನೂ ಮರೆತು ಸಹಾಯವನ್ನು ಮಾಡುತ್ತಾರೆ. ಸಹಾಯಮಾಡುವ ಭರದಲ್ಲಿ ಅವರು ಸೇಡನ್ನು ತೀರಿಸಬಯಸಿದಾಗ ಮೊದಲು ವೈರಿಗೆ ಎಚ್ಚರಿಕೆಯನ್ನು ಕೊಟ್ಟು ಅನಂತರ ಆಯುಧಸಮೇತರಾಗಿ ಯುದ್ಧಮಾಡುತ್ತಾರೆ. ಅವರಲ್ಲಿ ಒಬ್ಬನು ಸೋತು ಓಡಲು ಆರಂಭಿಸಿದರೆ ಇನ್ನೊಬ್ಬನು ಬೆನ್ನು ಹತ್ತಿ ಹಿಡಿದರೂ ಕೊಲ್ಲುವದಿಲ್ಲ. ದಂಡನಾಯಕನೊಬ್ಬನು ಯುದ್ಧದಲ್ಲಿ ಸೋತರೆ ಅವನಿಗೆ ಶಿಕ್ಷೆಯನ್ನು ಅವರು ವಿಧಿಸುವು ದಿಲ್ಲ. ಆದರೆ ಆತನಿಗೆ ಸ್ತ್ರೀಯರ ಉಡಿಗೆತೊಡಿಗೆಗಳನ್ನು ಬಳುವಳಿ ಯಾಗಿ ಕೊಡುತ್ತಾರೆ; ಆದರಿಂದ ಆತ ತಾನೇ ಅವಮಾನದ ದುಃಖ ದಿಂದ ಮರಣವನ್ನಪ್ಪುವಂತಾಗುತ್ತದೆ...ಇತ್ಯಾದಿ]—ಈ ವರ್ಣನೆ ಯನ್ನು ಕವಿರಾಜಮಾರ್ಗದ ಪದ್ಯದಲ್ಲಿ ಭಟ್ಟಿಯಿಳಿಸಿದಂತಿದೆ.

ನೃಪತುಂಗನ ಕಾಲದಲ್ಲಿ ಇಡೀ ಭರತಖಂಡಕ್ಕೆ ರಾಷ್ಟ್ರಕೂಟ ಮನೆತನವು ಒಂದು ಅತ್ಯಂತ ಶ್ರೇಷ್ಠ ರಾಜಮನೆತನವಾಗಿ ಬಾಳುವ ಗೌರವವನ್ನು ಪಡೆದಿತ್ತು. ಆ ಚಕ್ರವರ್ತಿಗಳ ರಾಜಾಸ್ಥಾನಗಳಿಗೆ ಭಾರತದ ಅನೇಕ ಪ್ರದೇಶಗಳಿಂದ ನಾನಾ ಬಗೆಯ ಪ್ರತಿಭಾ ವಂತರು. ಪಂಡಿತ ಜನರು, ಶೂರದಂಡನಾಯಕರು ತಮ್ಮ ತಮ್ಮ ಅಭ್ಯುದಯಗಳನ್ನು ಬಯಸಿ ಆಗಮಿಸುತ್ತಿದ್ದರು. ಇಂತಹ ಒಬ್ಬ ಚಕ್ರವರ್ತಿಯ ರಾಜಧಾನಿಯಾದ ಮಾನ್ಯಖೇಟದಲ್ಲಿ ಪ್ರವೇಶ

ಪಡೆಯುಬಯಸುವವರು ಮೊದಲೇ ಸಾಕಷ್ಟು ಪರಿಶ್ರಮವನ್ನುಳ್ಳ ವ್ಯಕ್ತಿಗಳಾಗಿರುತ್ತಿದ್ದರು.

ವ್ಯಾಕರಣ ಕಾವ್ಯ ನಾಟಕ
ಲೋಕಕಳಾಸಮಯುಮಾದಳಂಕೃತಿಗಳೊಳಂ
ವ್ಯಾಕುಳನಲ್ಲದನೇಕೆ ವಿ
ವೇಕಬೃಹಸ್ಪತಿಯು ನಗರಮಂ ಪುಗುತರ್ಪಂ? (I. ೬)

—ಎನ್ನುವಂತೆ ಆ ನಗರವು ಪಂಡಿತರ, ಪಾರಂಗತರ, ಬುದ್ಧಿವಂತರ ಆಶ್ರಯ ಸ್ಥಾನವಾಗಿತ್ತು. ವಾಳಭಕಾಯಸ್ಥ ವತ್ಸರಾಜ, ರುದ್ರಟ (ಕಾವ್ಯಾಲಂಕಾರ ಕರ್ತೃ) ಮೊದಲಾದವರು[9] ಈ ಆಸ್ಥಾನಗಳಲ್ಲಿದ್ದ ರೆಂಬುದನ್ನು ಜ್ಞಾಪಕಕ್ಕೆ ಇಲ್ಲಿ ತಂದುಕೊಳ್ಳಬಹುದು. 'ವಾಳಭ ಕಾಯಸ್ಥ' ಉತ್ತರ ಹಿಂದುಸ್ತಾನವನ್ನು ಸೂಚಿಸುತ್ತದೆಯೆನ್ನುವದ ರಲ್ಲಿ ಸಂದೇಹವಿಲ್ಲ. ಹೀಗೆಯೆ ಜಿನಸೇನರು ಗುಜರಾಥ ಕಡೆಯುವರೆಂಬುದನ್ನೂ ಇಲ್ಲಿ ಸ್ಮರಿಸಿಕೊಳ್ಳಬಹುದು.[10] ಧರ್ಮ ಪ್ರಚಾರಕ್ಕಾಗಿ ಆಚಾರ್ಯಪುರುಷರು ದೇಶಪರ್ಯಟನ ಮಾಡು ತ್ತಿದ್ದರು. ಅವರು ಒಂದು ವಿಧದಲ್ಲಿ ಸಾಂಸ್ಕೃತಿಕ ಸಂಪರ್ಕವನ್ನು ಕಲ್ಪಿಸುವ ಬೆಳೆಸುವ ಧುರೀಣರಾಗಿದ್ದರು. ರಾಜರಂತೂ ವಿಶೇಷ ವಾಗಿ ಸರ್ವಮತ ಹಾಗೂ ಧರ್ಮಗಳ, ಸಹಿಷ್ಣುಗಳಾಗಿರುತ್ತಿದ್ದರು: ಅವರು, ಮತಮತಗಳ ತಿಕ್ಕಾಟ, ಖಂಡನ ಮಂಡನ ಇತ್ಯಾದಿಗಳು ವಿಕೋಪಕ್ಕೆ ಹೋಗದ ಹಾಗೆ ನೋಡಿಕೊಳ್ಳುತ್ತಿದ್ದರು.

---

9 ಮೇವುಂಡಿ ಮಲ್ಲಾರಿ, "ಕನ್ನಡ ಸಾಹಿತ ಶಿಲಾಶಾಸನಗಳು". ೯–೧೨. ಪು. ೫.

10 ಪಂಡಿತ ನಾಥೂರಾಮ ಪ್ರೇಮಿ "ಜೈನ ಸಾಹಿತ್ಯ ಔರ್ ಇತಿಹಾಸ" ಪು. ೧೪೩–೪೭.

ದೇವರುಂ ಗೊರವರುಂ ಗುಣವೃದ್ಧರಸಾರತಂ
ಕಾವರಕ್ಕರಸನಂ ಪ್ರಜೆಯುಂ ಪರಿವಾರಮುಂ
ಪವಮುಂ ಬಗೆಯದಂತಿರೆ ಪೇಟ್ದ ಸಮುಚ್ಚಯೋ
ದ್ಭಾವಕ ಕ್ರಮವಿಚಾರದೆ ದೋಷಮಿದಗ್ಗಳಂ ॥ (I. ೧೩೨)

—ದೇವತೆಗಳು, ಗುರುಗಳು, ಗುಣಭರಿತವೃದ್ಧರು ದ್ವೇಷವನ್ನು ಬಗೆಯದಂತೆ ಸದಾ ರಕ್ಷಿಸಬೇಕು ಎಂಬ ಸಮುಚ್ಚಯದೋಷದ ಈ ಉದಾಹರಣೆಯೂ ಇದರ ತಿದ್ದಿದರೂಪವೂ (I. ೧೩೩)[11] ರಾಜ, ಪ್ರಜೆ, ಪರಿವಾರ—ಇವರುಗಳಲ್ಲಿ ಕೇವಲ ಪ್ರೇಮವೇ ಇರಬೇಕೆಂದು ಹೇಳಿರುವುದು ವಿವೇಕಪರವಿವೇಚನೆಗೆ ಒಂದು ಒಳ್ಳೆಯ ನಿದರ್ಶನ.

'ಕವಿರಾಜಮಾರ್ಗ'ದಲ್ಲಿ ಅತ್ಯುದಾತನಾದ, ಅಧಿರಾಜನಾದ, ಚಕ್ರವರ್ತಿಯಾದ ನೃಪತುಂಗ ಹಾಗೂ ಆತನ ಪರಿವಾರದ ಒಟ್ಟಾರೆ ರಾಜಕೀಯ ಪರಿಸರದ ಜೀವನ ಹೆಚ್ಚು ಒತ್ತಾಗಿ ಪಡಿಮೂಡಿ ನಿಂತಿದೆ. ನೃಪತುಂಗನ ಬಿರುದುಗಳನ್ನು ಒಂದೆಡೆ ಸೇರಿಸಿ ಪರಿಶೀಲಿಸಿದರೆ ಆತನ ವ್ಯಕ್ತಿತ್ವ ಸ್ಫುಟವಾಗಿ ನಮ್ಮ ಮುಂದೆ ನಿಲ್ಲುತ್ತದೆ. ಆತ 'ನೀತಿನಿರಂತರ' 'ಉದಾರ' 'ನೃಪತುಂಗ" 'ಕೃತಕೃತ್ಯಮಲ್ಲ' 'ಕೃತಕೃತ್ಯ ಮಲ್ಲವಲ್ಲಭ' 'ಅಪ್ರತಿಹತವಿಕ್ರಮ' 'ವೀರನಾರಾಯಣ' 'ಅತಿಶಯಧವಳ' 'ವಿವೇಕಬೃಹಸ್ಪತಿ' 'ನರಲೋಕಚಂದ್ರ' 'ಗುಣೋದಯ' 'ನಿತ್ಯಮಲ್ಲವಲ್ಲಭ' "ತ್ರಿದಶಾಧೀಶ್ವರಭೂತ್ಯತ್ಯುದಾರ ವಿವಿಧಾರ್ಥವಿಭವನೀ ಭೂಪೇಂದ್ರಂ ॥" 'ವಾಗಾಧಿಪ' 'ಅಮೋಘವರ್ಷ' 'ಪರಮೋದಯ' 'ಮಹಾವಿಭೂತಿ' ಇತ್ಯಾದಿಯಾಗಿ ಮತ್ತೂ

11 ಕ.ರಾ.ಮಾರ್ಗ (ಎಂ.ವಿ.ಸೀ.), ಪು. ೨೯.

" ಪಾರ್ಥಿವಗುಣಯುತಮಾಗಿಯು
ಮರ್ಥಿತಫಲದಾಯಿಯಾಗಿಯುಂ ಸಿನ್ಮೊಳ್ಪಾಂ ।
ವ್ಯರ್ತ್ಥತೆಯುಂ ಪಡೆಗುಂ ಪರ
ಮಾರ್ತ್ಥವ ಚೇತನತೆಯಿಂದೆ ಕಲ್ಪಕುಜಾತಂ ॥ "

[ಪಾರ್ಥಿವಗುಣ = (೧) ಕ್ಷತ್ರಿಯಗುಣದಿಂದ ಕೂಡಿದ್ದು (೨) ಭೂಗುಣದಿಂದ ಕೂಡಿದ್ದು. ಅರ್ಥಿತ ಫಲದಾಯಿ = ಬೇಡಿದ್ದನ್ನು ನೀಡುವ ಕಲ್ಪತರು ನೃಪತುಂಗನಿಗಿಂತ ಅಚೇತನದ ಕಾರಣದಿಂದ ನಿರುಪಯುಕ್ತ.]—ನೃಪತುಂಗ ಕಲ್ಪತರುವಿಗಿಂತಲೂ ದಾನಾದಿಗಳನ್ನು ಕೊಡುವದರ ಮೂಲಕ ಶ್ರೇಷ್ಠ ಎಂದೂ ವರ್ಣಿಸಲ್ಪಟ್ಟಿದ್ದಾನೆ. ಮತ್ತೆ ನೃಪತುಂಗನು ವಿಪುಲ ಸೈನ್ಯವನ್ನು ವಿಸ್ತಾರವಾದ ರಾಜಧಾನಿಯನ್ನೂ ಹೊಂದಿದ್ದನು (III. ೧೧೦); ಅನೇಕ ಕಲೆಗಳಲ್ಲಿ ಪಾರಂಗತನಾಗಿದ್ದನು. ಆತನ ಹೆಂಡತಿ ಉಮಾದೇವಿಯು 'ಸರಸ್ವತಿದೇವಿಗೆ' (ಕಾವ್ಯಾಲೋಕನ-೧೬೨) ವಿದ್ಯೆಯಲ್ಲಿ ಮೀರಿದವಳು (III. ೧೧೨). ಈ ಎಲ್ಲವೂ ಅವನ ಚರಿತ್ರೆಯನ್ನು ಬರೆಯುವಲ್ಲಿ ಉಪಯುಕ್ತವಾಗಿವೆ.

ಮಂತ್ರಿಯಾದ ವ್ಯಕ್ತಿ ಜನರಿಗಿಂತ ಮುಂಚೆಯೆ ವಸ್ತುವನ್ನು ತಿಳಿದುಕೊಂಡು ನಯದಿಂದ ರಾಜ ಹಾಗೂ ಪ್ರಜೆಗಳ ಮಧ್ಯೆ ವರ್ತಿಸಬೇಕು. ಜನರು ಆಡಿಕೊಂಡು ಹಗರಣ ಮಾಡಿದ ಮೇಲೆ ಮಂತ್ರಿಯು ನೀತಿಯನ್ನು ಹೇಳಿದರೆ ಅದು ಬೆಟ್ಟದ ಪ್ರತಿಧ್ವನಿಯ ಹಾಗೆ ಅನುರಣನವೇ ವಿನಾ ಮಂತ್ರಿಯ ಒಳ್ಳೆಯ ಗುಣವಲ್ಲ (III. ೧೪೩).

ರಾಜನ ಸುತ್ತ ಮುತ್ತ ಬಾಳುವ ಆಳುವ ಆಳುಗಳ ಬಾಳಿನ ಬಗೆಗೆ ಕವಿರಾಜಮಾರ್ಗದಲ್ಲಿ ಹೀಗೆ ಬರೆದಿದೆ: ಸತತ ಮನುಷ್ಯನು ನಂಬಿಗಸ್ತನಾಗಿ ಬಾಳಬೇಕು. ರಾಜನು ಒಮ್ಮೆ ಸಿರಿಯಗರ ಹೊದೆದು ಮಂದಾಂಧನಾದರೂ ಲಕ್ಷಿಸಬಾರದು. ಅದನ್ನು ಆಳು ಚೆನ್ನಾಗಿ ಪರಿಶೀಲಿಸಿ ಔದಾರ್ಯಗುಣಗಳನ್ನುಳ್ಳ ಅಭಿಮಾನದಿಂದ

ಸ್ವೀಕರಿಸಿ ಅನುವು ಆಪತ್ತಿನಲ್ಲಿ ಅರಸನೊಂದಿಗೆ ಒಂದಾಗಿ ಸಮಯ ಬಿದ್ದರೆ ಪ್ರಾಣವನ್ನೂ ಅರ್ಪಿಸಿ ಬಾಳಬೇಕು. ಇಂಥ ಸಾರ್ಥಕ ಬಾಳಿಗೆ ರಾಜರು ಹೆಚ್ಚು ಮರ್ಯಾದೆ ಕೊಡುತ್ತಿದ್ದರು. ಹಾಳಿ ನಿಲ್ಲುವಂತೆ ಬಾಳುವುದೇ ಬಾಳು; ಗುಣಗೇಡಿಯಾಗಿ ತೆಗಳಿಕೆಗೆ ಗುರಿಯಾಗಿ ಬಾಳುವ ಬಾಳು ಬಾಳಲ್ಲ. ಈ ಬಾಳು ಶಾಶ್ವತವಲ್ಲ (II. ೧೪೨ ಮತ್ತು III. ೧೭೭). ಮಿಂಚುಗಳ ಹಾಗೆ ಬಾವುಟಗಳು, ಮೋಡಗಳ ಹಾಗೆ ಆನೆಗಳು, ಮಳೆಯ ಜಲಬಿಂದು ಧಾರೆಯಂತೆ (ಮಳೆಯ ಹನಿಗಳಂತೆ) ಕಾಲಾಳು—ಎಂದು ಮುಂತಾಗಿ ರಣರಂಗದ, ಯುದ್ಧದ, ವರ್ಣನೆ ಸೊಗಸಾಗಿ ಬಂದು ಪದ್ಯದಲ್ಲಿ ಬಂದಿದೆ. (I. ೧೪೪). ರಾಜರಿಗಿರುವ ಒಳಹೊರ ವೈರಿಗಳ, ಅವರು ಆಡುವ ಆಟಗಳ, ಆಗಿನ ಕಾಲದ ಬೇಟೆಯ, ಶಬರರ, ಜೀವನವಿವರಗಳು ಕೆಲಪದ್ಯಗಳಲ್ಲಿ ಬಂದಿದೆ. ರಾಜರ ವಿಲಾಸಜೀವನವನ್ನು ಹಲವು ಪದ್ಯಗಳಲ್ಲಿ ವಿವರಿಸಿದೆ. ಕುಲವಂತರು, ಶೀಲವಂತರು, ಸಾಧುಪುರುಷರು ಮತ್ತು ದುರ್ಜನರು ಸಮಾಜದಲ್ಲಿ ಸದಾ ಇದ್ದವರೆ—ಇರುವವರೇ! ಕಾರಣ ಪೂರ್ವಾಪರ ವಿಚಾರಗೈದು ಒಳ್ಳೆಯುದನ್ನು ಸ್ವೀಕರಿಸಬೇಕು ಎಂದು ಬರೆದಿದೆ-ಕವಿರಾಜಮಾರ್ಗದಲ್ಲಿ.

ವಿದ್ಯೆಗಂತೂ ಶ್ರೀವಿಜಯ ವಿಶೇಷ ಸ್ಥಾನವನ್ನು ಕೊಟ್ಟಿದ್ದಾನೆ. ಮನುಷ್ಯ, ಧನವನ್ನೂ ವಿದ್ಯಾಧನವನ್ನೂ ಸಂಪಾದಿಸಬೇಕು. ಮನುಷ್ಯನಾದಮೇಲೆ ತಿಳಿವಳಿಕೆಯಿಂದ ಹೊಂದಿಕೊಂಡು ಬಾಳಬೇಕು. ಹಾಗೆ ಬಾಳದಿದ್ದ ಮನುಜತ್ವ ಅಫಲದಾಯಿಯಾಗುತ್ತದೆ. ನೃಪತುಂಗನ ಸಭಾಸದರು—(ಜನರಲ್ಲಿ-ಉಚ್ಚವರ್ಗ) ವ್ಯಾಕರಣಃ ಛಂದಸ್ಸು, ಅಲಂಕಾರ, ಕಾವ್ಯ, ನಾಟಕ, ಸಂಗೀತ, ಚಿತ್ರ, ಮುಂತಾದ ೭೪ ಕಲೆಗಳಲ್ಲಿ, ಜ್ಯೋತಿಷ್ಯ, ಶಕುನ, ವೈದ್ಯ, ಗಣಿತಾದಿ ಅನೇಕ

ಶಾಸ್ತ್ರ ಇತ್ಯಾದಿಗಳಲ್ಲಿ ಅಭಿರುಚಿಯನ್ನೂ ಪ್ರೌಢಿಮೆಯನ್ನೂ ಉಳ್ಳವರಾಗಿದ್ದರು. ಆ ಎಲ್ಲ ವಿದ್ಯೆಗಳ ಪರಮಗುರಿಯು ಚತುರ್ವರ್ಗ ಪುರುಷಾರ್ಥಗಳ ಸಾಧನೆಯೇ ಆಗಿತ್ತು. ಗ್ರಂಥದ ಅನೇಕ ಪದ್ಯಗಳಲ್ಲಿ ಒಟ್ಟಾರೆ ಕೃತಿಯು 'ಸಕಳ ಕಳಾ ಭಾಷಾ ಲೌಕಿಕ ಸಾಮಯಿಕಾದಿ' ಸಂಗತಿಗಳನ್ನು ಅರಿದು ರಚಿಸಿದ ಕೃತಿಯೆಂಬುದು ವಿದಿತವಾಗುತ್ತದೆ.

'ಕವಿರಾಜಮಾರ್ಗ' ಹುಟ್ಟಿದ ಕಾಲದಿಂದ ಇಂದಿನವರೆಗೆ ಪರಂಪರೆಯ ಮೇಲೆ ಒಂದಿಲ್ಲೊಂದು ರೀತಿಯಲ್ಲಿ ತನ್ನ ಮುದ್ರೆಯನ್ನು ಒತ್ತುತ್ತ ಬಂದಿದೆ. ಆ ಮುದ್ರೆ-ವ್ಯಾಕರಣ ಪ್ರಭಾವ ಆಗಿರಬಹುದು; ಛಂದಸ್ಸಿನ ಪ್ರಭಾವವಾಗಿರಬಹುದು; ಶಿ-ಅಲಂಕಾರಗಳ (ರನ್ನ) ಪ್ರಭಾವವಾಗಿರಬಹುದು; ಕಾವ್ಯ ಕಲ್ಪನೆಯ ಪ್ರಭಾವವಾಗಿರಬಹುದು ಇಲ್ಲವೆ ಸಾಹಿತ್ಯ ಮೌಲ್ಯಗಳ ಪ್ರಭಾವವಾಗಿರಬಹುದು. ಸಂಸ್ಕೃತ ಅಲಂಕಾರಶಾಸ್ತ್ರಗಳಲ್ಲಿ ಅಲ್ಲಿ ಇಲ್ಲಿ—ಬೇರೆ ಬೇರೆ ದೂರದೂರದ ಅಧ್ಯಾಯಗಳಲ್ಲಿ ಹರಡಿಕೊಂಡ ವಿಷಯಗಳನ್ನು ಓರಣವಾಗಿ, ಪಾಂಕ್ತವಾಗಿ, ಒಂದು ಶಿಸ್ತಿನಲ್ಲಿ ಜೋಡಿಸಿ ಹೊಸದಾಗಿ ವಿವರಿಸಿದ ಕೃತಿ 'ಕವಿರಾಜಮಾರ್ಗ'. ಸಿಂಗಭೂಪಾಲನು ಕಾವ್ಯದ ಬಗ್ಗೆ ಹೇಳಿದಮಾತನ್ನೇ ಇನಿತು ಶಾಸ್ತ್ರಕ್ಕೆ ಅನ್ವಯಿಸಿ ಹೆಚ್ಚು ಉಚಿತವಾಗಿ ಹೇಳಬಹುದು:

ತ ಏವ ಪದ ಸಂಘಾತಾಸ್ತಾ ಏವಾರ್ಥ ವಿಭೂತಯಃ
ತಥಾಪಿ ನವ್ಯಂ ಭವತಿ [ಶಾಸ್ತ್ರಂ] ಗ್ರಥನ ಕೌಶಲಾತ್ ॥

[ಅದೇ ಪದಸಮೂಹ, ಅದೇ ಅರ್ಥ ಸಂಪತ್ತು; ಆದರೂ ಕಟ್ಟುವ ಕೌಶಲದಿಂದ ಶಾಸ್ತ್ರ ಹೊಸದಾಗುತ್ತದೆ. 'ಗ್ರಥನ' ಎಂಬುದರ

ಅರ್ಥವನ್ನು ಇಲ್ಲಿ ವಿಶಾಲದೃಷ್ಟಿಯಲ್ಲಿ ಸ್ವೀಕರಿಸಬೇಕು.][12]—ಈ ಅರ್ಥದಲ್ಲಿ 'ಕವಿರಾಜಮಾರ್ಗ' ಕಾವ್ಯಮೀಮಾಂಸೆಯಲ್ಲಿ ನವೀನ ಕೃತಿ, ಕನ್ನಡಕ್ಕೆ ವಿಶಿಷ್ಟಕೃತಿ; ಭಾರತೀಯ ಕಾವ್ಯಮೀಮಾಂಸೆಯಲ್ಲಿ 'ಧ್ವನಿ' ತತ್ವವನ್ನು ಮೊದಲು ಚರ್ಚೆಗೆತ್ತಿದ ಹಿರಿಯಕೃತಿ.

---

12 (ಅ) ರಸಾರ್ಣವ ಸುಧಾಕರ, I. ೨೪೨.

(ಆ) ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ತೀ.ನಂ.ಶ್ರೀ. ಅವರು ಕೊಟ್ಟಿರುವ ಅನುವಾದವನ್ನು ನನ್ನ ಅಭಿಲಾಷೆಗೆ ತಕ್ಕಂತೆ ಇಲ್ಲಿ ಅಳವಡಿಸಿಕೊಂಡಿದ್ದೇನೆ.

ಗ್ರಂಥ ಋಣ

೧. ಕವಿರಾಜಮಾರ್ಗಂ (ಸಂ. ಕೆ. ಬಿ. ಪಾಠಕ) ೧೮೯೮ರ ಮುದ್ರಣ.

೨. — ,, —(ಸಂ. ಎ. ವೆಂಕಟರಾವ್ ಮತ್ತು ಎಚ್ ಶೇಷಯ್ಯಂಗಾರ್) ಮದ್ರಾಸ್ ವಿಶ್ವವಿದ್ಯಾನಿಲಯ ಪ್ರಕಟಣೆ (೧೯೩೦)

೩. — ,, —(ಸಂ. ಪ್ರೊ. ಎಂ. ವಿ. ಸೀತಾರಾಮಯ್ಯ) ೧೯೬೮

೪. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ—ಡಾ॥ ಎಂ. ಎಂ. ಕಲ್ಬುರ್ಗಿ

೫. ಕವಿರಾಜಮಾರ್ಗ, ಐ. ಬಿ. ಎಚ್. ಪ್ರಕಟಣೆ

೬. ಭಾರತೀಯ ಕಾವ್ಯಮೀಮಾಂಸೆ—ಪ್ರೊ. ತೀ.ನಂ.ಶ್ರೀ. (೧೯೬೧)

೭. ಕನ್ನಡ ಕೈಪಿಡಿ (ಮೈ.ವಿ.ವಿ.ಪ್ರ. ೧೯೬೫)

೮. ಆನಂದವರ್ಧನನ ಕಾವ್ಯಮೀಮಾಂಸೆ ಮತ್ತು ಕನ್ನಡ ಧ್ವನ್ಯಾಲೋಕ— ಡಾ॥ ಕೆ. ಕೃಷ್ಣಮೂರ್ತಿ

೯. ಕನ್ನಡ ಕಾವ್ಯಾಲಂಕಾರ (ಭಾಮಹ)—ಡಾ॥ ಕೆ. ಕೃಷ್ಣಮೂರ್ತಿ

೧೦. ಕನ್ನಡ ಕಾವ್ಯಾದರ್ಶ (ದಂಡಿ)—ಡಾ॥ ಕೆ. ಕೃಷ್ಣಮೂರ್ತಿ

೧೧. ಕನ್ನಡ ಕಾವ್ಯತತ್ತ್ವ—ಡಾ॥ ಕೆ. ಕೃಷ್ಣಮೂರ್ತಿ

೧೨. 'ಕಾವ್ಯಾನಂದ' ಅಭಿನಂದನಾಗ್ರಂಥ

೧೩. ಕನ್ನಡ ಸಾಹಿತ್ಯದ ಬೆಳವಣಿಗೆ ಹಾಗೂ ರಾಷ್ಟ್ರಕೂಟ ಅರಸರಮನೆತನ —ಸೀತಾರಾಮ ಜಾಗೀರ್‌ದಾರ್

೧೪. ಕನ್ನಡ ಅಧ್ಯಯನ ಸಂಸ್ಥೆಯ "ಕನ್ನಡ ಸಾಹಿತ್ಯ ಚರಿತ್ರೆ" ಸಂ. ೨

೧೫. ಕವಿರಾಜಮಾರ್ಗ ವಿವೇಕ-ಪಂಡಿತ ಮುಳಿಯ ತಿಮ್ಮಪ್ಪಯ್ಯ (೧೯೬೩)

೧೬. ಕವಿರಾಜಮಾರ್ಗ ಪ್ರಶಸ್ತಿ—ಭೀಮರಾವ್ ಚಿಟಗುಪ್ಪಿ (೧೯೭೨)

English

1. History of Sanskrit Poetics—P.V. Kane (1972)

2. India As Known To Panini —V.S. Agrawala

3. COINS—Parmeshwarilal Gupta

4. Rāshtrakūtās And Their Times —A.S. Altekar (1967)

ಕಠಿಣ ಪದ ಕೋಶ

ಅ

ಅಖಿಳ = ಎಲ್ಲ
ಅಘ = ಪಾಪ
ಅಘಟಿತ = ಘಟಿಸದ
ಅತಿಶಯ = ಹೆಚ್ಚು
ಅತ್ಯುಗ್ರ = ಅತಿಭಯಂಕರ
ಅಧಿಕೃತ = ಪ್ರಮಾಣಭೂತವಾದ, ನಿಶ್ಚಯಿಸಲ್ಪಟ್ಟ
ಅಧ್ವ = ಮಾರ್ಗ, ಪಂಥ
ಅನಾರತ = ಸಂತತ, ನಿರಂತರ
ಅಣಿಗೆಯ್ = ಸಿದ್ಧಮಾಡು, ತಯಾರಿಸು
ಅನುರಾಗ = ಪ್ರೀತಿ
ಅಪತ್ಯ = ಮಗ, ಸಂತಾನ
ಅಪರನಾಮಧೇಯ = ಇನ್ನೊಂದು ಹೆಸರುಳ್ಳ
ಅಪರಿಮೇಯ = ಲೆಕ್ಕಮಾಡಲು ಅಶಕ್ಯವಾದ, ಲೆಕ್ಕಕ್ಕೆ ಸಿಗದ
ಅಭಿಜನರು = ಉತ್ತಮಕುಲದಲ್ಲಿ ಹುಟ್ಟಿದವರು, ವಿಶುದ್ಧರು
ಅಱಿ = ತಿಳಿ
ಅಱಿಪುಗುಮ್ = ತಿಳಿಸುತ್ತವೆ

ಆ

ಆಗಮ = ಧರ್ಮಶಾಸ್ತ್ರ
ಆದಂ = ವಿಶೇಷವಾಗಿ
ಆರ್ಪ = ಶಕ್ತಿಯುಳ್ಳ
ಆಶಾಚಕ್ರ = ಸರ್ವದಿಕ್ಕುಗಳು
ಆಸವ = ಮದಿರೆ, ಒಂದುಬಗೆಯ ಪೇಯ
ಆಹವ = ಯುದ್ಧ

ಉ

ಉರ = ಎದೆ, ವಕ್ಷಸ್ಥಲ
ಉದ್ಧ = ಶ್ರೇಷ್ಠ
ಉದ್ಭಾಸಿಸಿ = ವಿಶೇಷವಾಗಿ ಭಾವಿಸಿ
ಉಲ್ಲಿ = ಅದು ಇದು ಉದುಗಳ ಹಾಗೆ ಅಲ್ಲಿ ಇಲ್ಲಿ ಉಲ್ಲಿ; 'ಊ' ಎಂಬುದು ಕೂಡ ಹೀಗೆಯೆ ದಿಕ್ಕನ್ನು ಸೂಚಿಸುವ ಶಬ್ದ

ಏ

ಏವ = ಹಗೆ, ವೈರ, ಕುಂದು, ತಿರಸ್ಕಾರ

ಒ

ಒಂಕುಂದ = ಒಕ್ಕುಂದ ಬೆಳಗಾಂವ್ ಜಿಲ್ಲೆಯಲ್ಲಿಯ ಊರು
ಒಡರಿಸು = ರಚಿಸು

ಕ

ಕನ್ನಡದ ತಿರುಳ್ = ತಿರುಳ್ಗನ್ನಡ; ಆದರ್ಶವಾದ ಕನ್ನಡ (Standard Kannada)
ಕಬ್ಬ = ಕಾವ್ಯ
ಕಲ್ಲದಿರಿ = ಕಲಿಯಬೇಡಿರಿ
ಕವಿಪ್ರಧಾನ = ಕವಿಶ್ರೇಷ್ಠ
ಕವಿವೃಷಭ = ಕವಿಶ್ರೇಷ್ಠ
ಕಳಾಕಳಾಪ = ಕಲಾಸಮೂಹ; ಕಲೆಯಿಂದ ಭರಿತ
ಕಾಂಡಪಟ = ತೆರೆ, ಜವನಿಕೆ
ಕಾಗ್ಗೆರ್ಣೆ = ಮಳೆಗಾಲಕ್ಕೆಸಮ
ಕಾವರಕ್ಕೆ = ರಕ್ಷಿಸಲಿ
ಕಿಸುವೊಳಲ್ = 'ಪಟ್ಟದಕಲ್ಲು' ಎಂಬ ಊರು. ಬಿಜಾಪುರಜಿಲ್ಲೆಯಲ್ಲಿದೆ
ಕುಡಿಯರು = ಕೃಷೀವಲರು, ಶೂದ್ರವರ್ಣ

ಕುಲವಧು = ಕುಲಸ್ತ್ರೀ, ಕುಲೀನಸ್ತ್ರೀ
ಕೂಟ್ = ಅನ್ನ
ಕೊಯ್ಕೊಂಡರ್ = ಪಡೆದರ್
ಕೇತು = ಬಾವುಟ
ಕೈಕೊಳ್ = ಸ್ವೀಕರಿಸು
ಕೌಸ್ತುಭ = ವಿಷ್ಣುವಿನ ಎದೆಯ ಮೇಲಿರುವ ರತ್ನ
ಕ್ಷ್ಮಾ = ಭೂಮಿ

ಖ

ಖಂಡಪ್ರಾಸ = ದ್ವಿತೀಯಾಕ್ಷರ ಪ್ರಾಸ; ಹಳಗನ್ನಡದಲ್ಲಿ ಇದು ಕಡ್ಡಾಯವಾಗಿ ಬರುತ್ತಿತ್ತು.

ಗ

ಗಣಿದ = ಲೆಕ್ಕ
ಗಳಿತ = ಬಿದ್ದ, ಉರುಳಿದ
ಗುಡಿದಂತೆ = ಕೂಡಿಸಿದಂತೆ
ಗುಣತಾಪ್ರತೀತಿ = ವಿಶೇಷ ಪ್ರಸಿದ್ಧಿ
ಗೊರವರು = ಗುರುಗಳು

ಚ

ಚಿತ್ರಕರಂಬೊಲ್ = ಬಣ್ಣ ಬಣ್ಣದ ವಿನ್ಯಾಸ
ಚಿತ್ರಕೃತಿ = ವೈವಿಧ್ಯಪೂರ್ಣಕೃತಿ
ಚೆಲ್ವರ್, ಚೆಲ್ವರ್ಕಳ್ = ಸುಂದರವ್ಯಕ್ತಿಗಳು

ಜ

ಜಡಜನ = ಮಂದಮತಿಗಳು, ಜಡಧೀ
ಜನಪದ = ಪ್ರದೇಶ ಹಾಗೂ ಸಾಂಸ್ಕೃತಿಕ ಮಂಡಲ;
A state and a cultural unit
ಜಾತಿ = ಪ್ರಾಕೃತದ ಅಥವಾ ಆ ಬಗೆಯ ಮಾತ್ರಾಛಂದಸ್ಸುಗಳು

ಡ

ಡಿಂಡೀರ = ನೊರೆ, ಸಮುದ್ರದ ನೊರೆ

ತ

ತಳ್ದ = ತಳೆದ, ಧರಿಸಿದ
ತೊಡರ್ಚು = ಕಟ್ಟು, ಬಂಧಿಸು

ದ

ದೀನಾರ = ನಾಣ್ಯ; ರೋಮನ್ ನಾಣ್ಯ, ಚಿನ್ನದ ರೋಮನ್ ನಾಣ್ಯ
ದುಃಖೋಪಾತ್ತಮಿದು = ದುಃಖವನ್ನುಂಟುಮಾಡುವುದಿದು
ದುದ್ಧಮಲ್ಲ = ದುದ್ಧಮಲ್ಲ ದುರ್ಧರಮಲ್ಲ ಅಥವಾ ದುಗ್ಧಮಲ್ಲ ಅಥವಾ ಯುದ್ಧಮಲ್ಲ—ಇದು ಬಾದಾಮಿಯ ಚಾಳುಕ್ಯ ಚಕ್ರವರ್ತಿ ವಿನಯಾದಿತ್ಯನ ಇನ್ನೊಂದು ಹೆಸರು
ದ್ಯುತಿ = ಕಿರಣ, ಕಾಂತಿ, ಬೆಳಕು

ಧ

ಧಾರೆ = ಮಳೆಯಹನಿ, ಹನಿ

ನ

ನಡುವಣ = ಮಧ್ಯದ
ನನ್ದನ = ಪುತ್ರ
ನಾಡೆಂ = ಚೆನ್ನಾಗಿ, ವಿಶೇಷವಾಗಿ
ನಿರವದ್ಯ = ವಿಜಯಾದಿತ್ಯನೆಂಬ ಬಾದಾಮಿಯ ಚಾಳುಕ್ಯ ಚಕ್ರವರ್ತಿಗೆ ಇದ್ದ ಇನ್ನೊಂದು ಹೆಸರು
ನಿಜಿಸಿ = ನಿಲ್ಲಿಸಿಕೊಂಡು, ಇಟ್ಟುಕೊಂಡು
ನುಡಿವಲ್ಮೆ = ನುಡಿಯಬಲ್ಮೆ, ಸಾಹಿತ್ಯ ಸಂಪತ್ತಿನ ಗಟ್ಟಿತನ
ನೆಲೆಗೊಳ್ಗೆ = ನಿಲ್ಲಲಿ

ಪ

ಪತ್ತಿ = ಕಾಲಾಳು
ಪರದ = ಹರದ, ವ್ಯಾಪಾರಿ
ಪರಮ = ಶ್ರೇಷ್ಠ
ಪಾಣ್ಡುರ = ಬೆಳ್ಳಗಿನ, ಶ್ವೇತ
ಪಾರ್ಬ್ಬ = ಬ್ರಾಹ್ಮಣ(ಪಾರ್ವ್ವ = ಪಾರ್ಬ್ಬ)
ಪುರುಷಾರ್ಥ = ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂಬ ನಾಲ್ಕು ಬಗೆಯ ಗುರಿಗಳು. ಶ್ರೇಷ್ಠಗುರಿ.
ಪುಲಿಗೆರೆ = ಲಕ್ಷ್ಮೇಶ್ವರವೆಂಬ ಊರು (ಧಾ.ಜಿಲ್ಲೆ)
ಪೂಣಿಗ = ಕೃತಪ್ರತಿಜ್ಞ, ನಿಶ್ಚಿತಮತಿ
ಪೆಱರಿಂ = ಬೇರೆಯವರಿಂದ
ಪೊಲ್ಲದು = ಅಯೋಗ್ಯ
ಪೊಳೆವ = ಹೊಳೆಯುವ
ಪ್ರಕರ = ಸಮೂಹ, ಗುಂಪು
ಪ್ರಣಯ = ಪ್ರೀತಿಯಿಂದ ಕೃತಿ ರಚಿಸಿದ
ಪ್ರಣೀತ = ವಿಶೇಷವಾಗಿ ಸ್ತುತಿಸಲ್ಪಟ್ಟ
ಪ್ರತಿಭಾವತಃ = ಪ್ರತಿಭಾವಂತ
ಪ್ರತೀತ = ಪ್ರತಿಪಾದಿಸಲ್ಪಟ್ಟ
ಪ್ರಧಾರಿತಾರ್ಥಂಗಳ್ = ನೀಡಿದ ಚತುರ್ವಿಧಪುರುಷಾರ್ಥಗಳು

ಬ

ಬಗೆದು = ವಿವೇಚಿಸಿ, ವಿಶ್ಲೇಷಿಸಿ
ಬಂಧ = ನ್ಯಾಸ, ನಿರಿಗೆ
ಬಂಧು = ಸಹೋದರ, ಸಂಬಂಧಿ, ಸಹ ಅಧ್ಯಾಯಿ, ಅಂತೇವಾಸಿ, ಒಬ್ಬ ಬರಹಗಾರ?
ಬಂಧುರ = ಮನೋಹರವಾದ, ಸುಂದರ
ಬುಧಜನ = ವಿದ್ವಾಂಸರು

ಭ

ಭಂಗ = ಭ್ರಷ್ಟ
ಭಾವಿಸಿ = ಆಲೋಚಿಸಿ, ಗ್ರಹಿಸಿ

ಭುವನ = ಪ್ರಪಂಚ
ಮಹಾಕೊಪಣ = ಮಹಾಕೊಪ್ಪಳ, ಜೈನರ ಪ್ರಸಿದ್ಧವಾದ ತೀರ್ಥಕ್ಷೇತ್ರ ಕೊಪ್ಪಳ, ಈಗಿನ ರಾಯಚೂರುಜಿಲ್ಲೆಯಲ್ಲಿಯ 'ಕೊಪ್ಪಳ' ಎಂಬ ಊರು
ಮಹಾಧ್ವಕೃತಿ = ಶ್ರೇಷ್ಠಕೃತಿ, ಮಾರ್ಗವನ್ನು ತೋರಿಸುವ ಕೃತಿ
ಮಾರ್ಗ್ಗ = ಶೈಲಿ
ಮಾಸು = ಕುಂದು
ಮುದ = ಸಂತೋಷ

ಯ

ಯತಿ = ಛಂದಗಳಲ್ಲಿ ಬರುವ ವಿರಾಮದ ಸ್ಥಾನ

ವ

ವಣ್ಣಿಪುದೋ = ವರ್ಣಿಸುವುದೋ
ವರಮಿರ್ದ್ದ = ವರೆಗಿರುವ, ಇದ್ದ
ವಸುಧಾವಳಯ = ಭೂಮಂಡಲ
ವ್ಯಾವೃತ್ತಿ = ಆವೃತ್ತಿ; ಪ್ರತ್ಯೇಕ, ವಿವರಣೆ
ವಿಘಟನ = ಭೇದಿಸು
ವಿಲೀನ = ಅಂತರ್ಗತ
ವಿವಿಕ್ತ = ವಿಕಲ್ಪಿಸಿ-ಬೇರೆಮಾಡಿ, ಹೇಳಿದ, ಪ್ರಸಿದ್ಧವಾದ
ವಿಶದ = ವಿಸ್ತಾರವಾದ
ವಿಷಯ = ಜನಪದ, ಪ್ರದೇಶ, ನಾಡಿನ ವಿಭಾಗ, ಮಂಡಲ

ಸ

ಸಕಳಾಳಾಪ = ಕಾವ್ಯಕಲೆ, ಅಲಂಕಾರಶಾಸ್ತ್ರ
ಸಂಗಮ = ಕೂಡಲು, ನದಿಗಳು ಸೇರುವ ಸ್ಥಳ
ಸದಭಿಸ್ತುತ = ವಿಶೇಷವಾಗಿ ಸ್ತುತಿಸಲ್ಪಟ್ಟ; ವರ್ಣಿಸಲ್ಪಟ್ಟ
ಸಮಜಿ = ಅಲಂಕಾರಿಕ; ಮಾಲೆಗಾರ; ಮಾಲೆಕಟ್ಟುವವನು

ಹ

ಹಸ್ತಿ = ಆನೆ

ಕೆ.ಸಂ ೨೪೩೮೨—ವಿವಿಮು—೫,೦೦೦ ಪ್ರತಿಗಳು—೨೭–೩–೮೪

ಕೆಲವು ಸಾಹಿತ್ಯ ಕೃತಿಗಳು

ಬೆಲೆ: ೨೫ ಪೈಸೆಗಳು

೧. ಕುಮಾರವ್ಯಾಸ—ಎಸ್. ವಿ. ರಂಗಣ್ಣ
೨. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೩. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೪. ಪಂಪ—ತೀ. ನಂ. ಶ್ರೀಕಂಠಯ್ಯ
೫. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ
೬. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೭. ಭಾಸ—ಡಾ|| ಎಚ್. ಎಲ್. ಹರಿಯಪ್ಪ
೮. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ
೯. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್
೧೦. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
೧೧. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೧೨. ನಯಸೇನ—ಜಿ. ವೆಂಕಟಸುಬ್ಬಯ್ಯ
೧೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
೧೪. ಲಕ್ಷ್ಮೀಶ—ಎನ್. ಅನಂತರಂಗಾಚಾರ್
೧೫. ಮುದ್ದಣ—ತ. ಸು. ಶಾಮರಾವ್
೧೬. ಜನಪದ ಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್
೧೭. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ
೧೮. ಮಹಾಭಾರತ—ಡಾ|| ಕೆ. ಕೃಷ್ಣಮೂರ್ತಿ
೧೯. ನೇಮಿಚಂದ್ರ—ಎನ್. ಅನಂತರಂಗಾಚಾರ್
೨೦. ಶ್ರೀನಾಥ—ಕೆ. ವೆಂಕಟರಾಮಪ್ಪ
೨೧. ಷಡಕ್ಷರದೇವ—ದೇ. ಜವರೇಗೌಡ
೨೨. ಚಿತ್ರಾಂಗದಾ—ಉ. ಕಾ. ಸುಬ್ಬರಾಯಾಚಾರ್
೨೩. ಸಂಚಿಯ ಹೊನ್ನಮ್ಮ—ಎಚ್. ಎಂ. ಶಂಕರನಾರಾಯಣರಾವ್
೨೪. ವಾಲ್ಮೀಕಿ ರಾಮಾಯಣ—ಉ. ಕಾ. ಸುಬ್ಬರಾಯಾಚಾರ್
೨೫. ಮಹಾಕವಿ ಬಾಣ—ಟಿ. ಎಸ್. ಕೃಷ್ಣಮೂರ್ತಿ
೨೬. ತುಳಸೀದಾಸ—ಡಾ|| ಹಿರಣ್ಮಯ

೨೭. ವೇಮನ—ಕೆ. ವೆಂಕಟರಾಮಪ್ಪ
೨೮. ಕನ್ನಡದಲ್ಲಿ ಅನುಭಾವ ಸಾಹಿತ್ಯ—ಡಾ॥ ಎಚ್. ತಿಪ್ಪೇರುದ್ರಸ್ವಾಮಿ
೨೯. ಅಲ್ಲಮಪ್ರಭು—ಡಾ॥ ಟಿ. ಜಿ. ಸಿದ್ಧಪ್ಪಾರಾಧ್ಯ
೩೦. ಕಾಳಿದಾಸನ ನಾಟಕಗಳು—ಡಾ॥ ಕೆ. ಕೃಷ್ಣಮೂರ್ತಿ
೩೧. ಅಣ್ಣನ ಆದರ್ಶ—ಡಾ॥ ಟಿ. ಜಿ. ಸಿದ್ದಪ್ಪಾರಾಧ್ಯ
೩೨. ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ—ದೇವಂಗಿ ಟಿ. ಚಂದ್ರಶೇಖರ
೩೩. ಸೂರದಾಸ—ಎಂ. ಎಸ್. ಕೃಷ್ಣಮೂರ್ತಿ
೩೪. ಜನ್ನ—ಡಾ॥ ಸಿ. ಪಿ. ಕೃಷ್ಣಕುಮಾರ್
೩೫. ರತ್ನಾಕರ ಮಹಾಕವಿ—ಜಿ. ಬ್ರಹ್ಮಪ್ಪ
೩೬. ಮಾಘಕವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೩೭. ನಿಜಗುಣ ಶಿವಯೋಗಿ—ಎಚ್. ಗಂಗಾಧರನ್
೩೮. ಮುದ್ರಾರಾಕ್ಷಸ—ಡಾ॥ ಎನ್. ಎಸ್. ಅನಂತರಂಗಾಚಾರ್
೩೯. ರಾಘವಾಂಕ—ರಾಮೇಗೌಡ
೪೦. ಮೂರನೆಯ ಮಂಗರಸ ಕವಿ—ಹಂಪ ನಾಗರಾಜಯ್ಯ
೪೧. ನಾಗಚಂದ್ರ—ಡಾ॥ ಸಿ. ಪಿ. ಕೃಷ್ಣಕುಮಾರ್
೪೨. ವಡ್ಡಾರಾಧನೆ—ಹಂಪ ನಾಗರಾಜಯ್ಯ
೪೩. ಮಹಾಕವಿ ಭಾರವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೪. ಕವಿ ಮುರಾರಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೫. ಚನ್ನಬಸವಣ್ಣ—ಓ. ಎನ್. ಲಿಂಗಣ್ಣಯ್ಯ
೪೬. ಕವಿ ಶ್ರೀಹರ್ಷ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೭. ಕಬೀರದಾಸ—ಡಾ॥ ಹಿರಣ್ಮಯಿ
೪೮. ವಿದ್ಯಾಪತಿ—ಎಂ. ಎಸ್. ಕೃಷ್ಣಮೂರ್ತಿ
೪೯. ಕವಿ ಭಟ್ಟನಾರಾಯಣ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೫೦. ಕಾವ್ಯದಲ್ಲಿ ಧ್ವನಿ—ಗುರುಪಾದ ಕೆ. ಹೆಗಡೆ
೫೧. ಪೊನ್ನ—ಎನ್. ಅನಂತರಂಗಾಚಾರ್
೫೨. ಎಡೆಯೂರು ತೋಂಟದ ಸಿದ್ಧಲಿಂಗಯತಿ—ಓ. ಎನ್. ಲಿಂಗಣ್ಣಯ್ಯ
೫೩. ದೇವರ ದಾಸಿಮಯ್ಯ—ಕೆ. ಅನಂತರಾಮು
೫೪. ಸಂಸ್ಕೃತ ಸಾಹಿತ್ಯ—ಡಾ॥ ಆರ್. ಎಸ್. ಶಿವಗಣೇಶಮೂರ್ತಿ
೫೫. ಚಾಮುಂಡರಾಯ—ಡಾ॥ ಟಿ. ವಿ. ವೆಂಕಟಾಚಲಶಾಸ್ತ್ರೀ
೫೬. ಶ್ರೀ ಸಮರ್ಥ ರಾಮದಾಸರು—ಬಿ. ಪಿ. ಚಂದ್ರಾಬಾಯಿ
೫೭. ಉಪಭಾಷಾ ಅಧ್ಯಯನ—ಶಾಲಿನಿ ರಘುನಾಥ